WPP-47/ 2009 - 2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬ || ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೨೯, ೨೦೧೧ (ಆಶ್ವಯುಜ ೭, ಶಕ ವರ್ಷ ೧೯೩೩) || ಸಂಚಿಕೆ ೩೯

ವಿಷಯಸೂಚಿ

[1–118 ಬಸವನಗುಡಿ ಇದನ್ನು ಪುಟಸಂಖ್ಯೆ 5397–5514 ಎಂದು ಓದಿಕೊಳ್ಳತಕ್ಕದ್ದು]

ಸೂಚನೆ:– ದಸರಾ ಹಬ್ಬದ ಪ್ರಯುಕ್ತ 6–10–2011ರ ಕರ್ನಾಟಕ ರಾಜ್ಯಪತ್ರವನ್ನು ಪ್ರಕಟಿಸಲಾಗುವುದಿಲ್ಲ.

– ಸಂಕಲನಾಧಿಕಾರಿ

ವಿಶೇಷ ರಾಜ್ಯಪತ್ರಗಳು

ದಿನಾಂಕ 29-09-2011

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
768	**30-08-2011**	ಸಂ: ಸಾರಿಇ 243 ಸಾಇಪ 2008, ಬೆಂಗಳೂರು, ದಿನಾಂಕ: 29-08-2011
769	**30-08-2011**	ಸಂಖ್ಯೆ: ಕಾಇ 67 ಎಲ್ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ: 30-08-2011
770	**30-08-2011**	ಸಂಖ್ಯೆ: ಕಾಇ 82 ಎಲ್ಎಂಡಬ್ಲ್ಯೂ 2007, ಬೆಂಗಳೂರು, ದಿನಾಂಕ: 30-08-2011
771	**02-09-2011**	**No. 100/KT-LA/4/2011, Dated: 2nd September, 2011**
772	**02-09-2011**	ಸಂಖ್ಯೆ: ಲೋಇ:123:ಇಎಪಿ:2011, ಬೆಂಗಳೂರು, ದಿನಾಂಕ: 27.08.2011
773	**02-09-2011**	ಸಂಖ್ಯೆ: ಲೋಇ:124:ಇಎಪಿ:2011, ಬೆಂಗಳೂರು, ದಿನಾಂಕ: 27.08.2011
774	**02-09-2011**	ಸಂಖ್ಯೆ: ಲೋಇ:125:ಇಎಪಿ:2011, ಬೆಂಗಳೂರು, ದಿನಾಂಕ: 27.08.2011
775	**02-09-2011**	ಸಂಖ್ಯೆ: ಲೋಇ:126:ಇಎಪಿ:2011, ಬೆಂಗಳೂರು, ದಿನಾಂಕ: 27.08.2011
780	**02-09-2011**	**No. MWD 237 WES 2011, Bangalore, dated: 02-09-2011**
781	**03-09-2011**	ಸಂಖ್ಯೆ: ಕೃಮಾಇ:02:ಚುನಾವಣೆ:2011, ಬೆಂಗಳೂರು, ದಿನಾಂಕ: 02-09-2011
782	**03-09-2011**	ಸಂಖ್ಯೆ: ಕೃಮಾಇ:02:ಚುನಾವಣೆ:2011, ಬೆಂಗಳೂರು, ದಿನಾಂಕ: 02-09-2011
783	**03-09-2011**	ಸಂಖ್ಯೆ: ಸಿಎಂಡಬ್ಲ್ಯೂ/02/ಸಿಎಪಿ/2006, ಬೆಂಗಳೂರು, ದಿನಾಂಕ: 29ನೇ ಆಗಸ್ಟ್, 2011
784	**03-09-2011**	ಸಂಖ್ಯೆ: ಕೃಮಾಇ:02:ಚುನಾವಣೆ:2011, ಬೆಂಗಳೂರು, ದಿನಾಂಕ: 02-09-2011
785	**03-09-2011**	ಸಂಖ್ಯೆ: ಕೃಮಾಇ:02:ಚುನಾವಣೆ:2011, ಬೆಂಗಳೂರು, ದಿನಾಂಕ: 02-09-2011
786	**03-09-2011**	ಸಂಖ್ಯೆ: ಕೃಮಾಇ:02:ಚುನಾವಣೆ:2011, ಬೆಂಗಳೂರು, ದಿನಾಂಕ: 02-09-2011
787	**05-09-2011**	ಸಂ. ಇಎಲ್ಎನ್(2)ಸಿಆರ್/84/2010-11, ದಿನಾಂಕ 05/09/2011
788	**05-09-2011**	ಸಂಖ್ಯೆ: ಇಎಲೆನ್.ಸಿಆರ್.40/11-12, ದಿನಾಂಕ: 05-09-2011
789	**05-09-2011**	ನಂ. ಚು(2)ವಿವ 31/2011-12, ದಿನಾಂಕ : 5-9-2011
790	**05-09-2011**	ನಂ. ಚುನಾವಣೆ:ಸಿಆರ್: 18/2011.12, ದಿನಾಂಕ: 05.09.2011
791	**05-09-2011**	ಸಂಖ್ಯೆ ರಾಚು ಸಿಆರ್.12(1)/2011-12, ದಿನಾಂಕ : 05-09-2011
792	**05-09-2011**	ಸಂಖ್ಯೆ ರಾಚು ಸಿಆರ್.12(2)/2011-12, ದಿನಾಂಕ : 05-09-2011

793	05-09-2011	ಸಂಖ್ಯೆ ರಾಚು ಸಿಆರ್.12(3)/2011-12, ದಿನಾಂಕ : 05-09-2011
794	05-09-2011	ಸಂಖ್ಯೆ ರಾಚು ಸಿಆರ್.12(4)/2011-12, ದಿನಾಂಕ : 05-09-2011
795	05-09-2011	ಸಂಖ್ಯೆ ರಾಚು ಸಿಆರ್.12(5)/2011-12, ದಿನಾಂಕ : 05-09-2011
796	05-09-2011	ಸಂಖ್ಯೆ ರಾಚು ಸಿಆರ್.12(6)/2011-12, ದಿನಾಂಕ : 05-09-2011
797	05-09-2011	ನಂ. ಚು(4)ಸಿಆರ್ 19/11-12, ದಿನಾಂಕ 05-09-2011.
798	05-09-2011	ಸಂಖ್ಯೆ: ಇಎಲ್ಎನ್(ಪಂ).ಸಿಆರ್.10/2011-12, ದಿನಾಂಕ: 05-09-2011
799	05-09-2011	**No. DPAR 18 SRR 2009, Bangalore, Dated: 03.09.2011**
800	05-09-2011	ಸಂಖ್ಯೆ :ಚುನಾವಣೆ(ಪಂ)ಸಿಅರ್/ 38/2011-12, ದಿನಾಂಕ: 05.09.2011
807	08-09-2011	ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 76 ಪಅವಿ 2010, ಬೆಂಗಳೂರು, ದಿನಾಂಕ: 5ನೇ ಸೆಪ್ಟೆಂಬರ್ 2011
844	21-09-2011	ಸಂಖ್ಯೆ. CVC-19/2010-11, ಬೆಂಗಳೂರು, ದಿನಾಂಕ: 21-09-2011

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.gazette.kar.nic.in

೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ – 1	21-00	831-00
2.	ಭಾಗ – 2	5-00	182-00
3.	ಭಾಗ – 3	10-00	411-00
4.	ಭಾಗ – 4	3-00	109-00
5.	ಭಾಗ – 4ಎ	11-00	435-00
6.	ಭಾಗ – 5	22-00	879-00
7.	ಭಾಗ – 6 (ಬೆಂಗಳೂರು)	9-00	363-00
8.	ಭಾಗ – 6ಎ (ಮೈಸೂರು)	25-00	964-00
9.	ಭಾಗ – 6ಬಿ (ಧಾರವಾಡ)	45-00	1763-00
10.	ಭಾಗ – 6ಸಿ (ಗುಲ್ಬರ್ಗ)	29-00	1162-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸ. 1 ರಿಂದ 7 (ಭಾಗ–1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	81-00	3210-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ–4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	16-50
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI–ಎ, VI–ಬಿ, VI–ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು–59

ಮುದ್ರಕರು :–ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು–59

WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೨೯, ೨೦೧೧ (ಆಶ್ವಯುಜ ೭, ಶಕ ವರ್ಷ ೧೯೩೩)	ಸಂಚಿಕೆ ೩೯

ಭಾಗ - ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಶ್ರೀ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 3 ಡಿಎಸ್‌ವೈ 2011 ದಿ: 3-5-2011.
2. ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆಯ ಶಾಖೆಗಳ ಮನವಿ.
3. ದಿ: 14-6-2011ರ ಸರ್ಕಾರದ ಪತ್ರ:ಕಸಂವಾಪ್ರ 140 ಸ್ವೀಮರ 2011.
4. ದಿ: 22-6-2011ರ ಮಾರುತಿ ಎಂಟರ್ ಪ್ರೈಸಸ್‌ರವರ ಪತ್ರ ಸಂಖ್ಯೆ:175/2011.

ಪ್ರಸ್ತಾವನೆ:

ಮೇಲೆ ಓದಲಾದ (2)ರ ಮನವಿಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆಯ ಎಲ್ಲಾ ಶಾಖೆಗಳು ಲೇಖನ ಸಾಮಗ್ರಿ ಹಾಗೂ ಪೀಠೋಪಕರಣಗಳಿಗಾಗಿ ಮನವಿ ಸಲ್ಲಿಸಿದ್ದವು.

ಮೇಲೆ ಓದಲಾದ (3)ರ ಪತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಬೇಕಾಗಿರುವ ಲೇಖನ ಸಾಮಗ್ರಿಗಳನ್ನು ಹಾಗೂ ಪೀಠೋಪಕರಣಗಳನ್ನು ಖರೀದಿಸಲು 03 ಕಂಪನಿಗಳಿಂದ ದರಪಟ್ಟಿ ನೀಡುವಂತೆ ಕೋರಲಾಗಿತ್ತು. ಹಾಗೂ ಅದರಂತೆ 03 ಕಂಪನಿಗಳಿಂದ ಸ್ವೀಕೃತವಾದ ದರಪಟ್ಟಿಯನ್ವಯ ಇಲಾಖೆಗೆ ಅಗತ್ಯವಾಗಿ ಬೇಕಾಗುವ ಲೇಖನ ಸಾಮಗ್ರಿಗಳು ಹಾಗೂ ಪೀಠೋಪಕರಣಗಳ ಒಟ್ಟು ದರಪಟ್ಟಿಯು ಈ ಕೆಳಗಿನಂತಿರುತ್ತದೆ ಹಾಗೂ 3 ಕಂಪನಿಗಳ ತುಲನಾತ್ಮಕ ವಿವರವಾದ ದರ ಪಟ್ಟಿಯನ್ನು ಅನುಬಂಧ-I ಹಾಗೂ ಅನುಬಂಧ-II ರಲ್ಲಿ ವಿವರಿಸಲಾಗಿದೆ.

ಲೇಖನ ಸಾಮಗ್ರಿ

ಕ್ರಸಂ.	ಕಂಪನಿಯ ಹೆಸರು	ವಿವರ	ಪ್ರಮಾಣ	ಬೆಲೆ ರೂ.ಗಳಲ್ಲಿ	ಒಟ್ಟು ರೂ.ಗಳಲ್ಲಿ
1	ಮಾರುತಿ ಎಂಟರ್‌ಪ್ರೈಸಸ್	ಲೇಖನ ಸಾಮಗ್ರಿಗಳು	ಅನುಬಂಧದಲ್ಲಿ ಲಗತ್ತಿಸಲಾಗಿದೆ		29578-64
2	ರಂಗನಾಥ ಎಂಟರ್‌ಪ್ರೈಸಸ್	ಲೇಖನ ಸಾಮಗ್ರಿಗಳು			31442-05
3	ಆರ್.ಕೆ. ಎಂಟರ್‌ಪ್ರೈಸಸ್	ಲೇಖನ ಸಾಮಗ್ರಿಗಳು			31332-00

ಪೀಠೋಪಕರಣಗಳು

ಕ್ರಸಂ.	ಕಂಪನಿಯ ಹೆಸರು	ವಿವರ	ಪ್ರಮಾಣ	ಬೆಲೆ ರೂ.ಗಳಲ್ಲಿ	ಒಟ್ಟು ರೂ.ಗಳಲ್ಲಿ
1	ಮಾರುತಿ ಎಂಟರ್‌ಪ್ರೈಸಸ್	ಪೀಠೋಪಕರಣಗಳು	ಅನುಬಂಧದಲ್ಲಿ ಲಗತ್ತಿಸಲಾಗಿದೆ		15851-25
2	ರಂಗನಾಥ ಎಂಟರ್‌ಪ್ರೈಸಸ್	ಪೀಠೋಪಕರಣಗಳು			16697-52
3	ಆರ್.ಕೆ. ಎಂಟರ್‌ಪ್ರೈಸಸ್	ಪೀಠೋಪಕರಣಗಳು			16654-58

ಈ ಮೇಲ್ಕಂಡ 03 ಕಂಪನಿಗಳಿಂದ ಪಡೆದ ದರಗಳನ್ನು ಅವಲೋಕಿಸಿ ಅತಿ ಕಡಿಮೆ ದರ ನೀಡಿರುವ ಬೆಂಗಳೂರಿನ ಮಾರುತಿ ಎಂಟರ್‌ಪ್ರೈಸಸ್, ನಂ. 43, ಜರಗನಹಳ್ಳಿ, ಜಿ.ಕೆ.ಎಂ. ಕಾಲೇಜ್ ರಸ್ತೆ, ಅಣ್ಣಯಪ್ಪ ಲೇಔಟ್, ಬೆಂಗಳೂರು-560078ರವರೆಗೆ ರೂ. 29578-64 ಗಳ (ಇಪ್ಪತ್ತೊಂಬತ್ತು ಸಾವಿರದ ಐದು ನೂರ ಎಪ್ಪತ್ತೆಂಟು ರೂಪಾಯಿ ಅರವತ್ತನಾಲ್ಕು ಪೈಸೆಗಳು ಮಾತ್ರ) ವೆಚ್ಚದಲ್ಲಿ ಲೇಖನ ಸಾಮಗ್ರಿ ಹಾಗೂ ಪೀಠೋಪಕರಣಗಳನ್ನು ರೂ. 15851-25 (ಹದಿನೈದು ಸಾವಿರದ ಎಂಟು ನೂರ ಐವತ್ತೊಂದು ರೂ.ಗಳು ಮಾತ್ರ) ವೆಚ್ಚದಲ್ಲಿ ಸರಬರಾಜು ಮಾಡಲು ಈ ಕೆಳಕಂಡಂತೆ ಆದೇಶಿಸಿದೆ. ದರಪಟ್ಟಿಯು ವ್ಯಾಟ್ ತೆರಿಗೆ ಹಾಗೂ ಸಾಗಾಣೆ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂಪಾಪ್ರ 140 ಸ್ಟೀಮರ 2011 ಬೆಂಗಳೂರು, ದಿ: 01-07-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರುವ ಎಲ್ಲಾ ಶಾಖೆಗಳಿಗೆ ಲೇಖನ ಸಾಮಗ್ರಿ ಹಾಗೂ ಪೀಠೋಪಕರಣಗಳನ್ನು ಸರಬರಾಜು ಮಾಡಲು 03 ಕಂಪನಿಗಳಿಂದ ದರಪಟ್ಟಿಗಳನ್ನು ಕರೆದಿದ್ದು ಅನುಬಂಧ-1 ರಲ್ಲಿರುವ ಲೇಖನ ಸಾಮಗ್ರಿಗಳಿಗೆ ಅತಿ ಕಡಿಮೆ ದರ ರೂ. 29578-64 ಗಳ (ಇಪ್ಪತ್ತೊಂಬತ್ತು ಸಾವಿರದ ಐದು ನೂರ ಎಪ್ಪತ್ತೆಂಟು ರೂಪಾಯಿ ಅರವತ್ತನಾಲ್ಕು ಪೈಸೆಗಳು ಮಾತ್ರ) ಹಾಗೂ ಅನುಬಂಧ-2 ರಲ್ಲಿರುವ ಪೀಠೋಪಕರಣಗಳಿಗೆ ಅತಿ ಕಡಿಮೆ ದರ ರೂ. 15851-25 (ಹದಿನೈದು ಸಾವಿರದ ಎಂಟು ನೂರ ಐವತ್ತೊಂದು ರೂ.ಗಳು ಮಾತ್ರ) ಗಳನ್ನು ಸೂಚಿಸಿರುವ ಮಾರುತಿ ಎಂಟರ್‌ಪ್ರೈಸಸ್, ನಂ. 43, ಜರಗನಹಳ್ಳಿ, ಜಿ.ಕೆ.ಎಂ. ಕಾಲೇಜ್ ರಸ್ತೆ, ಅಣ್ಣಯಪ್ಪ ಲೇಔಟ್, ಬೆಂಗಳೂರು-560078ರವರಿಗೆ ಲೇಖನ ಸಾಮಗ್ರಿ ಹಾಗೂ ಪೀಠೋಪಕರಣಗಳನ್ನು ಸರಬರಾಜು ಮಾಡಲು ಆದೇಶ ನೀಡಿದೆ.

ಈ ವೆಚ್ಚವನ್ನು ಸರ್ಕಾರ ಆದೇಶ ಸಂಖ್ಯೆ: ಸಿಆಸುಇ 3 ಡಿಎಸ್‌ವೈ 2011 ದಿನಾಂಕ: 3-5-2011ರಲ್ಲಿ ನೀಡಿರುವ ಆದೇಶದನ್ವಯ ಭರಿಸಲು ಮಾರುತಿ ಎಂಟರ್‌ಪ್ರೈಸಸ್ ಕಂಪನಿಗೆ ರೂ. 29578.64 ಗಳ (ಇಪ್ಪತ್ತೊಂಬತ್ತು ಸಾವಿರದ ಐದು ನೂರ ಎಪ್ಪತ್ತೆಂಟು ರೂಪಾಯಿ ಅರವತ್ತನಾಲ್ಕು ಪೈಸೆಗಳು ಮಾತ್ರ) ಹಾಗೂ ರೂ. 15851-25 (ಹದಿನೈದು ಸಾವಿರದ ಎಂಟು ನೂರ ಐವತ್ತೊಂದು ರೂ.ಗಳು ಮಾತ್ರ) ಮೊತ್ತವನ್ನು ಸಿಆಸುಇ ಲೆಕ್ಕ ಪತ್ರ ಶಾಖೆಯು ಡಿ.ಸಿ.ಬಿಲ್ ಮೂಲಕ ಬಿಡುಗಡೆ ಮಾಡುವುದು.

ಮಾರುತಿ ಎಂಟರ್‌ಪ್ರೈಸಸ್ ಕಂಪನಿಯು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರುವ ಶಾಖೆಗಳಿಗೆ ಕೂಡಲೇ ಲೇಖನ ಸಾಮಗ್ರಿ ಹಾಗೂ ಪೀಠೋಪಕರಣಗಳನ್ನು ಸರಬರಾಜು ಮಾಡುವುದು ಹಾಗೂ ಸಿಆಸು ಇಲಾಖೆಯಿಂದ ನೀಡುವ ಮೊತ್ತಕ್ಕೆ ಸ್ವೀಕೃತಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಗೀತಾಕುಮಾರಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ANNEXURE-I TO G.O. NO. KCIT 140 R&I 2011, Dated: 01-07-2011

Comparative Statement

Sl. No.	Particulars	Qty.	Maruthi Enterprises	Ranganatha Enterprises	R.K. Enterprises
1	Canon 328 ಪ್ರಿಂಟರ್ ಕಾಟ್ರೇಜ್	02	8988-00	9229-00	9166-50
2	ಪ್ರಿಂಟರ್ ಕಾಟ್ರೇಜ್ ಎಂ. ಎಲ್. 1640	02	7996-00	8326-50	8274-00
3	ಪ್ರಿಂಟರ್ ಕಾಟ್ರೇಜ್ HP Laser-Jet 12A-1010	01	3978-45	4071-90	3987-90
4	ಜೆರಾಕ್ಸ್ ಟೋನರ್ ಶಾರ್ಪ್ ಎ.ಆರ್.ಎಂ.205	01	5320-00	5701-50	5738-25
5	ಟೋನರ್ ಜೆರಾಕ್ಸ್ ಮಿಷಿನ್ (106 R00 280)	01	1869-00	2273-25	2307-00
6	ಟೋನರ್ 1025/1038,5216/5223	01	519-75	745-50	729-75
7	ಕಪ್ ಅಂಡ್ ಸಾಸರ್	02	907-44	1094-40	1128-60
	ಒಟ್ಟು		29578-64	31442-05	31332-00

Maruthi Enterprises - 29578-64
Ranganatha Enterprises - 31442-05
R.K. Enterprises - 31332-00

N. Geethakumari
Under Secretary to Government,
Kannada and Culture, Information and
Tourism Department

ANNEXURE-2 TO G.O. NO. KCIT 140 R&I 2011, Dated: 01-07-2011

Comparative Statement

Sl. No.	Particulars	Qty.	Maruthi Enterprises	Ranganatha Enterprises	R.K. Enterprises
1	Executive visitors Chair	02	6384-00	6805-80	6817-20
2	Executive Chair with Revolving	01	3705-00	3944-40	3858-90
3	ಟ್ರೇ	01	90-00	94-62	98-04
4	ಟೇಬಲ್ ಗ್ಲಾಸ್	02	4218-00	4309-20	4327-44
5	ಕಿಟಕಿ ಕರ್ಟನ್	01	997-50	1034-25	1029-00
6	ವಾಲ್ ಕ್ಲಾಕ್	01	456-75	509-25	524-00
	ಒಟ್ಟು		15851-25	16697-52	16654-58

Maruthi Enterprises - 15851-25

Ranganatha Enterprises - 16697-52

R.K. Enterprises - 16654-58

N. Geethakumari

Under Secretary to Government,

Kannada and Culture, Information and

Tourism Department

ಪಿ.ಆರ್. 1740

ಕಾರ್ಮಿಕ ಸಚಿವಾಲಯ

ವಿಷಯ : ಶ್ರೀ ಎಸ್. ಡಿ. ಬಸವರಾಜು, ಉದ್ಯೋಗಾಧಿಕಾರಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಮಂಗಳೂರು ರವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ ಕುರಿತು.

ಓದಲಾಗಿದೆ :

1. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜೆ)ಎಂ/ಸಿಆರ್-10/2010, ದಿನಾಂಕ 09-03-2011.
2. ತನಿಖಾಧಿಕಾರಿಯ ವರದಿ ಸಂಖ್ಯೆ: ಪಿಐ/ಲೋಕ್/ಮಂ/ಅ.ಕ್ರ 10/2010, ದಿನಾಂಕ 09-09-2010.
3. ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

ಪ್ರಸ್ತಾವನೆ :

ಶ್ರೀ ಎಸ್. ಡಿ. ಬಸವರಾಜು, ಉದ್ಯೋಗಾಧಿಕಾರಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಮಂಗಳೂರು ಇವರ ವಿರುದ್ಧ ಗುನ್ನೆ ಸಂಖ್ಯೆ: 10/2010 ರಲ್ಲಿ ಆರಕ್ಷಕ ನಿರೀಕ್ಷಕರು ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಮಂಗಳೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು (ಉಲ್ಲೇಖ-2 & 3) ಮಾನ್ಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ 09-03-2011ರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜೆ)/ಎಂ-/ಸಿಆರ್-10/2010, ಇದರೊಡನೆ ಕಳುಹಿಸುತ್ತಾ, ಆಪಾದಿತನನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ-1988ರ 19(1)(ಬಿ) ಕಲಂನ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಉಲ್ಲೇಖಿತ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜೆ)/ಎಂ-/ಸಿಆರ್-10/2010, ಮಂಗಳೂರು ದಿನಾಂಕ 09-03-2011 ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1) ಶ್ರೀ ಬಲರಾಮ, ವಿನಾಯಕ ಕೃಪ, ಗೋವಿಂದ ದಾಸ ಕಾಲೇಜು ಹಿಂಭಾಗ, ಸೂರತ್‌ಕಲ್, ಮಂಗಳೂರು ಇವರ ಫಿರ್ಯಾದಿ ದಿನಾಂಕ 08-09-2010.

2) ಪ್ರಥಮ ವರ್ತಮಾನ ವರದಿ ಮಂಗಳೂರು ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 10/2010.

3) ಪ್ರಾಯೋಗಿಕ ಪಂಚನಾಮೆ ದಿನಾಂಕ 08-09-2010

4) ಟ್ರ್ಯಾಪ್‌ನ ಮಹಜರ್ ದಿನಾಂಕ 08-09-2010

5) ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: MRL/LOK/20/10-11, Dated 12-10-10

6) ಕೃತ್ಯ ನಡೆದ ಸ್ಥಳದ ನಕಾಶೆ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಮಂಗಳೂರು ಮಹಾನಗರ ಪಾಲಿಕೆ ಕಛೇರಿ ಕಟ್ಟಡ, ಎಂ.ಜಿ. ರಸ್ತೆ, ಲಾಲ್‌ಬಾಗ್, ಮಂಗಳೂರು.

7) ಸಾಕ್ಷಿಗಳ ಹೇಳಿಕೆಗಳು

   1) ಶ್ರೀ ಬಲರಾಮ, ಮಂಗಳೂರು

2) ಶ್ರೀ ಚರಣ್, ಎಂ. ಜೆ. ಗ್ರಾಮ ಕರಣಿಕರು, ಮಂಗಳೂರು
3) ಶ್ರೀ ಮೊಹಮ್ಮದ್ ಮುನೀರ್, ಗ್ರಾಮ ಕರಣಿಕರು, ತಾಲ್ಲೂಕು ಕಛೇರಿ, ಮಂಗಳೂರು
4) ಶ್ರೀ ವಿಶ್ವನಾಥ್, ಅಸಿಸ್ಟೆಂಟ್ ಡೈರೆಕ್ಟರ್/ಡೆಪ್ಯುಟಿ ಚೀಫ್, ಎಂಪ್ಲೋಯ್‌ಮೆಂಟ್ ಗೈಡೆನ್ಸ್ ಬ್ಯುರೋ ಮಂಗಳಗಂಗೋತ್ರಿ ಕೋಣಾಜೆ, ಮಂಗಳೂರು.
5) ಶ್ರೀ ರಿತೇಶ್, ಮಂಗಳೂರು
6) ಶ್ರೀ ಲಿಂಗಪ್ಪ, ಮಂಗಳೂರು
7) ಶ್ರೀ ಮೋಹನ್, ಮಂಗಳೂರು
8) ಶ್ರೀ ಜಗದೀಶ್, ಎ. ಹೆಚ್. ಮಂಗಳೂರು
9) ಕುಮಾರಿ ಪ್ರತಿಮಾ, ಮಂಗಳೂರು
10) ಶ್ರೀ ಜೆರಾಲ್ಡ್ ಕ್ರಾಸ್ತಾ, ಮಂಗಳೂರು
11) ಶ್ರೀ ರಾಜೇಶ್ ರೈ, ಜ್ಯೂನಿಯರ್ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು.
12) ಶ್ರೀಮತಿ ರಾಜೇಶ್ವರಿ, ಸಹಾಯಕ ರಸಾಯನಿಕ ವಿಶ್ಲೇಷಕರು, ರಸಾಯನಿಕ ವಿಶ್ಲೇಷಕರ ಕಛೇರಿ, ಮಂಗಳೂರು.
13) ಶ್ರೀ ಶಾಂತಪ್ಪ, ಎಂ. ಹೆಚ್.ಸಿ. 1148 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
14) ಶ್ರೀಮತಿ ಸುಮತಿ ಮ.ಪಿ.ಸಿ. 2261 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
15) ಶ್ರೀ ಶಿವಪ್ರಸಾದ್, ಎಸ್. ವಿ. ಪಿ.ಸಿ. 594 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
16) ಶ್ರೀ ಶರತ್‌ಚಂದ್ರ, ಪಿ.ಸಿ. 2121 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
17) ಶ್ರೀ ಲುಕೋಸ್ ಸಿಪಿಸಿ 1942 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
18) ಶ್ರೀ ಲಕ್ಷ್ಮೀಕಾಂತ, ಪಿ.ಸಿ. 1925 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
19) ಶ್ರೀ ಶಶಿಧರ, ಪಿಸಿ 1940, ಕರ್ನಾಟಕ ಲೋಕಾಯುಕ್ತ, ಮಂಗಳೂರು
20) ಶ್ರೀ ಸುದರ್ಶನ್, ಹೆಚ್.ಸಿ. 850 ಕರ್ನಾಟಕ ಲೋಕಾಯುಕ್ತ ಠಾಣೆ, ಮಂಗಳೂರು
21) ಶ್ರೀ ಪ್ರಮೋದ್, ಎ.ಪಿ.ಸಿ. 138 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
22) ಶ್ರೀ ಬಾಬು, ಎ.ಪಿ.ಸಿ. 186 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
23) ಶ್ರೀ ಸದಾನಂದ ವರ್ಣೇಕರ್, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
24) ಶ್ರೀ ಉದಯ ಎಂ. ನಾಯಕ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು

8) ಲಂಚ ಕೇಳಲು ಆಧಾರವಾದ ಕಡತ ಅಥವಾ ದಾಖಲೆಗಳ ಸಂಖ್ಯೆ:
 1) ಜಿಉವಿಕೆ ಮಂಗಳೂರು ಸಿಜಿಕ್ಯೂ/38–61 (ಅವಧಿ ಮೀರಿದ ಅರ್ಜಿಯನ್ನು ಎಂ.ಆರ್.ಪಿ.ಎಲ್.ಗೆ ಕಳುಹಿಸಿಕೊಡುವ ಬಗ್ಗೆ)

9) ಆಪಾದಿತರ ಸಮಜಾಯಿಷಿ ಹೇಳಿಕೆಗಳು:

ತನಿಖಾಧಿಕಾರಿಗಳಾದ ಶ್ರೀ ಉದಯ ಎಂ. ನಾಯಕ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ಇವರು ಶ್ರೀ ಎಸ್. ಡಿ. ಬಸವರಾಜು, ಉದ್ಯೋಗಾಧಿಕಾರಿ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಗಳೂರು ಇವರ ವಿರುದ್ಧ ದಂಡಾರ್ಹ ಪ್ರಕರಣವನ್ನು ದಿನಾಂಕ 08–09–2010 ರಂದು ಕರ್ನಾಟಕ ಲೋಕಾಯುಕ್ತ, ಮಂಗಳೂರು ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ: 10/2010ರಲ್ಲಿ ಲಂಚ ನಿರೋಧಕ ಕಾಯ್ದೆ–1988ರ ಕಲಂ 7, 13(1)ಡಿ ಜೊತೆಯಲ್ಲಿ 13(2)ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಆಪಾದಿತರಾದ ಶ್ರೀ ಎಸ್. ಡಿ. ಬಸವರಾಜು, ಉದ್ಯೋಗಾಧಿಕಾರಿ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಗಳೂರು ರವರು ಫಿರ್ಯಾದಿಯಾದ ಶ್ರೀ ಬಲರಾಮ ವಿನಾಯಕ ಕೃಪ, ಗೋವಿಂದ ದಾಸ ಕಾಲೇಜು ಹಿಂಭಾಗ, ಸೂರತ್‌ಕಲ್, ಮಂಗಳೂರು ಇವರ ಅವಧಿ ಮೀರಿದ ಅರ್ಜಿಯನ್ನು ಎಂ.ಆರ್.ಪಿ.ಎಲ್.ಗೆ ಕಳುಹಿಸಿಕೊಡಲು ರೂ. 6,000/– (ಆರು ಸಾವಿರ ರೂಪಾಯಿಗಳು ಮಾತ್ರ) ಗಳ ಲಂಚಕ್ಕೆ ಒತ್ತಾಯಿಸಿ, ಫಿರ್ಯಾದಿದಾರರು ಚೌಕಾಸಿ ಮಾಡಿದ ನಂತರ ಲಂಚದ ಹಣ ರೂ. 5,000/–ಕ್ಕೆ ತೀರ್ಮಾನವಾಗಿ ಅದೇ ದಿನ ಆರೋಪಿತರು ರೂ. 1,000/– ಲಂಚದ ಹಣವನ್ನು ಸ್ವೀಕರಿಸಿ, ಉಳಿದ ರೂ. 4,000/–ನ್ನು ಸ್ವೀಕರಿಸುವಾಗ ದಿನಾಂಕ 08–09–2010 ರಂದು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಮಂಗಳೂರು ಮಹಾನಗರ ಪಾಲಿಕೆ ಕಛೇರಿ ಕಟ್ಟಡ, ಎಂ.ಜಿ. ರಸ್ತೆ, ಲಾಲ್‌ಬಾಗ್, ಮಂಗಳೂರು ಇಲ್ಲಿ ಜೀಸಿದ ಟ್ರ್ಯಾಪ್ ಯಶಸ್ವಿಯಾಗಿದ್ದು, ಶ್ರೀ ಎಸ್. ಡಿ. ಬಸವರಾಜು, ಉದ್ಯೋಗಾಧಿಕಾರಿ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಗಳೂರು ರವರು ಅಕ್ರಮ ಸಂಭಾವನೆಯಾದ ರೂ. 4,000/–ಗಳನ್ನು ಸದರಿ ಸರ್ಕಾರಿ ಕೆಲಸವನ್ನು ಮಾಡಲು ಕೇಳಿ ಪಡೆಯುತ್ತಿದ್ದಾಗ ಸಿಕ್ಕಿಹಾಕಿಕೊಂಡಿರುತ್ತಾರೆ. ಆಪಾದಿತ ಉದ್ಯೋಗ ಅಧಿಕಾರಿಯ ಬಲಗೈ ಹಸ್ತ ಮತ್ತು ಬೆರಳುಗಳನ್ನು ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿ ತೊಳಸಿದಾಗ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ. ಅಕ್ರಮ ಸಂಭಾವನೆಯಾದ ರೂ. 4,000/–ಗಳನ್ನು ಶ್ರೀ ಎಸ್. ಡಿ. ಬಸವರಾಜು, ಉದ್ಯೋಗಾಧಿಕಾರಿ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಗಳೂರು ಇಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ–1988 ರ ಕಲಂ 7, 13(1)(ಡಿ) ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆಯೆಂದು ಸರ್ಕಾರವು ಪರಿಗಣಿಸಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ–1988ರ ಅನ್ವಯ ಕಲಂ 7, 13(1)(ಡಿ) ಜೊತೆಗೆ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರ ಮನಗಂಡಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತನನ್ನು ಕೆಲಸದಿಂದ ತೆಗೆದುಹಾಕಲು ಅಧಿಕಾರವುಳ್ಳದ್ದಾಗಿರುತ್ತದೆ. (ಈ ಬಗ್ಗೆ ಸಂಬಂಧಿಸಿದ ಕಾಯ್ದೆ, ನಿಯಮ, ಸರ್ಕಾರದ ನಡವಳಿ, ಆಜ್ಞೆ ಅಥವಾ ಅಧಿಸೂಚನೆ ಇತ್ಯಾದಿಗಳನ್ನು ನಮೂದಿಸಬೇಕು. ತಾನು ಹೇಗೆ ಸಕ್ಷಮ ಪ್ರಾಧಿಕಾರ ಅನ್ನುವುದನ್ನು ವಿವರಿಸಬೇಕು ಹಾಗೂ ರುಜುವಾತು ಮಾಡಬೇಕು ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು ಅಡಕಗೊಳಿಸಬೇಕು) ಆದ್ದರಿಂದ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ)ರ ಅಡಿ ಆಪಾದಿತ ಸಾರ್ವಜನಿಕ ಅಧಿಕಾರಿ/ನೌಕರರಾದ ಶ್ರೀ ಎಸ್.ಡಿ. ಬಸವರಾಜು, ಉದ್ಯೋಗಾಧಿಕಾರಿ ರವರನ್ನು ಕಲಂ 7 ಮತ್ತು 13(1)(ಡಿ) ಜೊತೆಗೆ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಕಾಇ 50 ಇಟಿಎಕ್ಸ್ 2010, ಬೆಂಗಳೂರು, ದಿನಾಂಕ : 6-7-2011

ಶ್ರೀ ಎಸ್. ಡಿ. ಬಸವರಾಜು, ಉದ್ಯೋಗಾಧಿಕಾರಿ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಗಳೂರು ಇವರ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅಭಿಯೋಜನೆಗೆ ಒಳಪಡಿಸಲು ಈಗಾಗಲೇ ಸರ್ಕಾರವು ಹೊರಡಿಸಿರುವ ಆದೇಶ ಸಂಖ್ಯೆ: ಕಾಇ 50 ಇಟಿಎಕ್ಸ್ 2010 ದಿನಾಂಕ 04-05-2011ನ್ನು ಪರಿಷ್ಕರಿಸಿ ಆರೋಪಿಯಾದ ಶ್ರೀ ಎಸ್. ಡಿ. ಬಸವರಾಜು, ಉದ್ಯೋಗಾಧಿಕಾರಿ, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಗಳೂರು ಇವರನ್ನು ಹುದ್ದೆಯಿಂದ ತೆಗೆದು ಹಾಕುವ/(ವಜಾ ಮಾಡುವ) ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಶ್ರೀ ಎಸ್. ಡಿ. ಬಸವರಾಜು, ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಮಂಗಳೂರು ಮಹಾನಗರ ಪಾಲಿಕೆ ಕಛೇರಿ ಕಟ್ಟಡ, ಎಂ. ಜಿ. ರಸ್ತೆ, ಲಾಲ್‌ಬಾಗ್, ಮಂಗಳೂರು ಇವರನ್ನು ಲಂಚ ನಿರೋಧಕ ಕಾಯ್ದೆ-1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಈ ಮೂಲಕ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ. ಎಸ್. ವಿಶ್ವನಾಥಪ್ಪ

ಪೀಠಾಧಿಕಾರಿ

ಪಿ.ಆರ್. 1741 ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

FOREST, ECOLOGY AND ENVIRONMENT SECRETARIAT

Sub : Diversion of 9.15 ha. of forest land for wind energy in Jogimatti RF in favour of M/s ARC Power Generation (P) Ltd.,-Enhancement of allotted capacity of wind power project from 5 MW to 8 MW Reg.

Read :
1. Govt. Order No. FEE 112 FGL 2000, dated 04-12-2004
2. Letter No. A5(5)GFL.CR.4/2000-01, dated 18-09-2007 of Principal Chief Conservator of Forests, Bangalore.
3. State Government letter No. FEE 108 FLL 2007, dated 04-10-2007.
4. Letter F©A/11.2/222/KAR/2028, dated 28-02-2008 of Government of India, Ministry of Environment and Forests, Regional Office, Bangalore.
5. Letter No. A5(5)GFL.CR.4/2000-01, dated 12-06-2008 of Principal Chief Conservator of Forests, Bangalore.
6. State Government letter No. FEE 108 FLL 2007, dated 13-08-2009.
7. Letter No. F©A/11.2/222/KAR/9234, dated 08-06-2011 of Government of India, Ministry of Environment and Forests, Regional Office, Bangalore.

Preamble :

In Government Order read at (1) above for a diversion of 9.15 ha. of forest land for setting up of 5 MW Wind Power project in Jogimatti Reserve Forest Sy. No. 26 of Chitradurga Village in favour of M/s ARC Power Generation Limited, Bangalore lease for a period of 30 years, has been permitted.

The Principal Chief Conservator of Forests, Bangalore vide his letter dated 18-09-2007 read at (2) above has submitted the proposal as per the Energy Department vide their Order No. EN 42 NCE 2007, dated 15-02-2007 to obtain the approval of Government of India under Section 2 of The Forest (Conservation) Act, 1980 for revised land use plan for enhancement of capacity from 5 MW to 8 MW Wind Power Project in Jogimatti Reserve Forest Sy. No. 26 of Chitradurga Village in favour of M/s. ARC Power Generation Limited, Bangalore.

Accordingly the proposal was recommended to Government of India vide State Government letter dated 04-10-2007 read at (3) above.

The Government of India, Ministry of Environment and Forests, Regional Office, Bangalore vide their letter dated 28-02-2008 read at (4) above has given its in Principle (Stage I) approval for the revised land use pattern and enhancement of power capacity from 5 MW to 8 MW with certain conditions in favour of M/s ARC Power Generation (PL) Ltd., Gulbarga.

The Principal Chief Conservator of Forests, Bangalore vide his letter dated 12-06-2008 has furnished the compliance report read at (5) above and the same has been sent to Government of India vide State Government letter dated 13-08-2009 read at (6) above.

Government of India Ministry of Environment and Forests, Regional Office, Bangalore vide their letter dated 08-06-2011 read at (7) above has conveyed its approval (State-II) under Section 2 of the Forest (Conservation) Act, 1980 for revised land use pattern for enhancement of power capacity of wind power project from 5 MW to 8 MW in Jogimatti RF in favour of M/s ARC Power Generation (PL) Ltd., subject to certain conditions.

The proposal has been examined in detail and hence the Order

Government Order No. FEE 108 FLL 2007, Bangalore, dated 05-07-2011

In the circumstances explained in the preamble above, Government are pleased to accord sanction under section 2 of The Forest (Conservation) Act, 1980 for revised land use pattern for enhancement for power capacity of wind power project from 5 MW to 8 MW in Jogimatti RF in favour of M/s ARC Power Generation (PL) Ltd., subject to the following conditions.

1. The Principal Chief Conservator of Forests shall ensure all conditions stipulated in Government Order No. FEE 112 FGL 2000, dated 04-12-2004.
2. The Principal Chief Conservator of Forests shall furnish the co-ordinates of the corner pillars of the diverted forest area to the Ministry of Environment and Forests, Regional Office, Bangalore directly.

By Order and in the name of the Governor of Karnataka

H. M. Mallikarjuna Swamy

Under Secretary to Government

Forest, Ecology and Environment Department

P.R. 1742

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಜಲ್ಲಿಕಲ್ಲು ಕ್ರಷರ್ ಘಟಕಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವ ವಿಷಯದಲ್ಲಿ ಒಂದು ಸಮಗ್ರ ಕರಡು ಶಾಸನವನ್ನು ಸಿದ್ಧಪಡಿಸಲು ತಜ್ಞರ ಸಮಿತಿ ರಚಿಸುವ ಬಗ್ಗೆ.

ಪ್ರಸ್ತಾವನೆ :

ರಾಜ್ಯದಲ್ಲಿರುವ ಜಲ್ಲಿಕಲ್ಲು ಕ್ರಷರ್ ಘಟಕಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವ ವಿಚಾರದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 17078/1997 ಇದರಲ್ಲಿ ದಿನಾಂಕ 10-07-1998ರಲ್ಲಿ ಹೊರಡಿಸಿರುವ ಆದೇಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 08-05-2009ರಲ್ಲಿ ಹೊರಡಿಸಿರುವ ಆದೇಶದ ಪ್ರಕಾರ ಸ್ಥಿರೀಕರಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 7041/2011ರ ಮೇಲೆ ಸಲ್ಲಿಸಲಾಗಿದ್ದ ಐಎ2/2011ರ ಮೇಲೆ ದಿನಾಂಕ 11-03-2011ರಂದು ಹೊರಡಿಸಿದ ಆದೇಶದಲ್ಲಿ ಜಲ್ಲಿಕಲ್ಲು ಕ್ರಷರ್ ಘಟಕಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವ ವಿಚಾರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಕಾರ್ಯಗತಗೊಳಿಸಲು ಆರು ತಿಂಗಳ ಕಾಲಾವಕಾಶವನ್ನು ನೀಡಿದೆ. ಜಲ್ಲಿಕಲ್ಲು ಕ್ರಷರ್ ಘಟಕಗಳಿಂದ ಉಂಟಾಗುವ ಮಾಲಿನ್ಯವನ್ನು ನಿಯಂತ್ರಣ ಮಾಡುವ ದೃಷ್ಟಿಯಿಂದ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಹಲವಾರು ನಿರ್ದೇಶನಗಳನ್ನು ನೀಡಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮತ್ತು ಸರ್ವೋಚ್ಚ ನ್ಯಾಯಾಲಯವು ಸಹ ಈ ದಿಸೆಯಲ್ಲಿ ನಿರ್ದೇಶನಗಳನ್ನು ನೀಡಿರುವುದರಿಂದ, ಅವುಗಳನ್ನೆಲ್ಲಾ ಒಗ್ಗೂಡಿಸಿ, ಒಂದು ಸಮಗ್ರವಾದ ಕರಡು ಶಾಸನವನ್ನು ರಚಿಸಿ, ಕರ್ನಾಟಕ ಜಲ್ಲಿಕಲ್ಲು ಕ್ರಷರ್ ಘಟಕಗಳ ನಿಯಂತ್ರಣ ವಿಧೇಯಕವನ್ನು ಹೊರಡಿಸಬೇಕಾಗಿದೆ. ಈ ವಿಧೇಯಕದ ಜಾರಿಯಿಂದ ಮೇಲ್ಕಂಡ ಎಲ್ಲಾ ನಿರ್ದೇಶನಗಳನ್ನು ಜಾರಿಗೊಳಿಸುವ ಮೂಲಕ ಮಾಲಿನ್ಯ ಪ್ರಮಾಣವನ್ನು ಕಡಿಮೆಗೊಳಿಸಲು ಹಾಗೂ ಇದರಿಂದುಂಟಾಗುವ ದುಷ್ಪರಿಣಾಮಗಳನ್ನು ತಪ್ಪಿಸಲು ಸಹಕಾರಿಯಾಗುತ್ತದೆ. ಇಂತಹ ಒಂದು ಸಮಗ್ರ ಶಾಸನದ ಕರಡನ್ನು ಘನ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಮತ್ತು ಪರಿಣಿತರನ್ನೊಳಗೊಂಡ ಸಮಿತಿಯ ಮೂಲಕ ರಚಿಸುವುದು ಸೂಕ್ತವೆಂದು ಅಭಿಪ್ರಾಯಪಡಲಾಗಿದೆ.

ಈ ಹಿನ್ನೆಲೆಯಲ್ಲಿ, ಜಲ್ಲಿಕಲ್ಲು ಕ್ರಷರ್ ಘಟಕಗಳಿಂದುಂಟಾಗುವ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಾರಿಯಲ್ಲಿರುವ ಎಲ್ಲಾ ಮಾರ್ಗಸೂಚಿಗಳು, ನಿರ್ದೇಶನಗಳು ಹಾಗೂ ನ್ಯಾಯಾಲಯಗಳ ಆದೇಶಗಳನ್ನೊಳಗೊಂಡಂತೆ ಒಂದು ಸಮಗ್ರ ಶಾಸನ ರಚನೆಗೆ ಕರಡು ತಯಾರಿಸುವುದಕ್ಕಾಗಿ ಕೆಳಕಂಡವರನ್ನೊಳಗೊಂಡ ಸಮಿತಿಯನ್ನು ರಚಿಸಲು ನಿರ್ಧರಿಸಲಾಗಿದೆ.

1	ನ್ಯಾಯಮೂರ್ತಿ ಶ್ರೀ ಗುರುರಾಜನ್‌ರವರು, ನಿವೃತ್ತ ನ್ಯಾಯಮೂರ್ತಿಗಳು, ಘನ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು	ಅಧ್ಯಕ್ಷರು
2	ಸರ್ಕಾರದ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ	ಸದಸ್ಯರು
3	ಡಾ॥ ಮುದಕವಿ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	ಸದಸ್ಯರು
4	ಪ್ರೊಫೆಸರ್ ಎಸ್. ಮಂಜಪ್ಪ, ಅಧ್ಯಕ್ಷರು, ತಾಂತ್ರಿಕ ಸಲಹಾ ಸಮಿತಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು	ಸದಸ್ಯರು
5	ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು	ಸದಸ್ಯ-ಸಮಾವೇಶಕರು

ಅದರಂತೆ ಆದೇಶ

ಸರ್ಕಾರದ ಆದೇಶ ಸಂಖ್ಯೆ : ಅಪಜೀ 11 ಇಎಎ 2009, ಬೆಂಗಳೂರು, ದಿನಾಂಕ : 04-07-2011

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ ಜಲ್ಲಿಕಲ್ಲು ಕ್ರಷರ್ ಘಟಕಗಳಿಂದುಂಟಾಗುವ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಾರಿಯಲ್ಲಿರುವ ಎಲ್ಲಾ ಮಾರ್ಗಸೂಚಿಗಳು, ನಿರ್ದೇಶನಗಳು ಹಾಗೂ ನ್ಯಾಯಾಲಯಗಳ ಆದೇಶಗಳನ್ನೊಳಗೊಂಡಂತೆ ಒಂದು ಸಮಗ್ರ ಶಾಸನ ರಚನೆಗೆ ಕರಡು ತಯಾರಿಸುವುದಕ್ಕಾಗಿ ಕೆಳಕಂಡವರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

1	ನ್ಯಾಯಮೂರ್ತಿ ಶ್ರೀ ಗುರುರಾಜನ್‌ರವರು, ನಿವೃತ್ತ ನ್ಯಾಯಮೂರ್ತಿಗಳು, ಘನ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು	ಅಧ್ಯಕ್ಷರು
2	ಸರ್ಕಾರದ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ	ಸದಸ್ಯರು

3	ಡಾ॥ ಮುದಕವಿ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	ಸದಸ್ಯರು
4	ಪ್ರೊಫೆಸರ್ ಎಸ್. ಮಂಜಪ್ಪ, ಅಧ್ಯಕ್ಷರು, ತಾಂತ್ರಿಕ ಸಲಹಾ ಸಮಿತಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು	ಸದಸ್ಯರು
5	ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು	ಸದಸ್ಯ-ಸಮಾವೇಶಕರು

ಈ ಸಮಿತಿಯು ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 17078/1997 ಇದರಲ್ಲಿ ದಿನಾಂಕ 10-07-1998ರಲ್ಲಿ ಹೊರಡಿಸಿರುವ ಆದೇಶ, ಮಾನ್ಯ ಸರ್ವೋಚ್ಛ ನ್ಯಾಯಾಲಯದ ದಿನಾಂಕ 8-5-2009/11-3-2011ರ ಆದೇಶ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿ/ನಿರ್ದೇಶನಗಳು ಮುಂತಾದ ಎಲ್ಲಾ ಆದೇಶಗಳು ಹಾಗೂ ಮಾರ್ಗಸೂಚಿಗಳನ್ನು ಗಮನದಲ್ಲಿರಿಸಿಕೊಂಡು ಸೂಕ್ತವಾದ ಕರಡು ಸಮಗ್ರ ಶಾಸನವನ್ನು ಈ ಆದೇಶದ ದಿನಾಂಕದಿಂದ 15 ದಿನಗಳ ಅವಧಿಯಲ್ಲಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ಈ ಸಮಿತಿಯ ಕಾರ್ಯನಿರ್ವಹಣೆಗೆ ಅಗತ್ಯವಾದ ಎಲ್ಲಾ ನೆರವು ಮತ್ತು ವ್ಯವಸ್ಥೆಗಳನ್ನು ಕಲ್ಪಿಸತಕ್ಕದ್ದು. ಸಮಿತಿಯ ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ನಿಯಮಾನುಸಾರ ಲಭ್ಯವಾಗುವ ಸಭಾ ಭತ್ಯೆ/ಗೌರವ ಧನ, ಸಾರಿಗೆ ಭತ್ಯೆ ಮತ್ತಿತರ ಭತ್ಯೆಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಮನೋಹರ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1743 ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ಸಂಪೂರ್ಣ ಸ್ವಚ್ಛತಾ ಆಂದೋಲನದಡಿ ಪ್ರಸ್ತಾಪಿಸಿರುವ ಶೌಚಾಲಯ ನಿರ್ಮಾಣದ ಕಾಮಗಾರಿಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಕುರಿತು.

ಓದಲಾಗಿದೆ :

1. ನಿರ್ದೇಶಕರು, ರಾಜ್ಯ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಸಂಪೂರ್ಣ ಸ್ವಚ್ಛತಾ ಆಂದೋಲನ ಇವರ ಪತ್ರದ ಸಂಖ್ಯೆ ಗ್ರಾಅಪ/ಕನೀಸಂ/ಸಂ.ಸ್ವಆಂ/62/10-11, ದಿನಾಂಕ 18-02-2011.
2. ನಿರ್ದೇಶಕರು, ಎಂಜಿಎನ್‌ಆರ್‌ಇಜಿಎಸ್ ಇವರ ಅನಧಿಕೃತ ಟಿಪ್ಪಣಿ ಪತ್ರದ ಸಂ: ಗ್ರಾಅಪ 44, ಉಖಾಯೋ 2006, ದಿನಾಂಕ 04-05-2011.
3. ನಿರ್ದೇಶಕರು, ಎಂಜಿಎನ್‌ಆರ್‌ಇಜಿಎಸ್ ಇವರ ಪತ್ರದ ಸಂಖ್ಯೆ ಗ್ರಾಅಪ 153 ಉಖಾಯೋ 2011, ದಿನಾಂಕ 15-06-2011.
4. ನಿರ್ದೇಶಕರು, ರಾಜ್ಯ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಸಂಪೂರ್ಣ ಸ್ವಚ್ಛತಾ ಆಂದೋಲನ ಇವರು ದಿನಾಂಕ 24-06-2011 ರಂದು ಕಡತದಲ್ಲಿ ಅಂದಾಜು ಪತ್ರಿಕೆ ಹಾಗೂ ನಕ್ಷೆಯೊಂದಿಗೆ ಅಭಿಪ್ರಾಯ ನೀಡಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆ :

ಗ್ರಾಮೀಣ ಪ್ರದೇಶಗಳಲ್ಲಿ ಬಯಲು ಮಲ ವಿಸರ್ಜನೆ, ಸಂಪೂರ್ಣವಾಗಿ ನಿಲ್ಲಿಸಲು ಶೌಚಾಲಯ ನಿರ್ಮಾಣಕ್ಕಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 30 ಮಾನವ ದಿನಗಳ ಕೂಲಿ ವೆಚ್ಚವನ್ನು ಸಂಯೋಜನೆಯ (Convergence) ಮೂಲಕ ಭರಿಸಲು ನಿರ್ದೇಶಕರು, ರಾಜ್ಯ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಸಂಪೂರ್ಣ ಸ್ವಚ್ಛತಾ ಆಂದೋಲನ ಇವರು ಉಲ್ಲೇಖ (1)ರಲ್ಲಿ ಅಂದಾಜು ಪತ್ರಿಕೆಯೊಂದಿಗೆ ಸಲ್ಲಿಸಿದ್ದು, ಕೆಲವು ಕಾರಣಗಳಿಂದ ಸದರಿ ಕಾಮಗಾರಿಯ ನಿರ್ಮಾಣಕ್ಕೆ ಹೊರಡಿಸಿರುವ ಆದೇಶವನ್ನು ಉಲ್ಲೇಖ (2)ರಲ್ಲಿ ಹಿಂಪಡೆಯಲು ಸೂಚಿಸಲಾಗಿತ್ತು. ತದನಂತರ ಸೂಕ್ತವಾದ ಪ್ರಸ್ತಾವನೆಯನ್ನು ಅಂದಾಜು ಪತ್ರಿಕೆ ಹಾಗೂ ನಕ್ಷೆಯೊಂದಿಗೆ ಸಲ್ಲಿಸುವಂತೆ ನಿರ್ದೇಶಕರು, ರಾಜ್ಯ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಬೆಂಗಳೂರು ಇವರನ್ನು ಉಲ್ಲೇಖ (3)ರಲ್ಲಿ ಕೋರಲಾಗಿದ್ದು ಅದರಂತೆಯೇ ಉಲ್ಲೇಖ (4)ರಲ್ಲಿ ಕಡತದೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಶೌಚಾಲಯ ನಿರ್ಮಾಣ ಮಾಡಲು ಸಡಿಲು ಮಣ್ಣಿನಲ್ಲಿ 19 ಮಾನವ ದಿನಗಳಿಗೆ ಮತ್ತು ಗಟ್ಟಿ ಮಣ್ಣಿನಲ್ಲಿ 21 ಮಾನವ ದಿನಗಳಿಗೆ ಕೂಲಿ ವೆಚ್ಚವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಒಗ್ಗೂಡಿಕೆಯ ಮೂಲಕ ಅನುಷ್ಠಾನಗೊಳಿಸಬಹುದೆಂದು ಅಭಿಪ್ರಾಯವನ್ನು ನೀಡಿರುತ್ತಾರೆ. ಆದ್ದರಿಂದ ಸದರಿ ಅಂದಾಜು ಪತ್ರಿಕೆಯನ್ನು ಅಂಗೀಕರಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಅನುಷ್ಠಾನವಾಗುತ್ತಿರುವ ಸಂಪೂರ್ಣ ಸ್ವಚ್ಛತಾ ಆಂದೋಲನದಡಿ ಹಾಗೂ ಇತರೆ ಎಲ್ಲಾ ಯೋಜನೆಗಳಲ್ಲಿ ಪ್ರಸ್ತಾಪಿಸಿರುವ/ಪ್ರಸ್ತಾಪಿಸುವ ಶೌಚಾಲಯ ಕಾಮಗಾರಿಯ ನಿರ್ಮಾಣವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸಬಹುದೆಂದು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 44 ಉಖಾಯೋ 2006, ಬೆಂಗಳೂರು, ದಿನಾಂಕ : 25-06-2011

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಅನುಷ್ಠಾನವಾಗುತ್ತಿರುವ ಸಂಪೂರ್ಣ ಸ್ವಚ್ಛತಾ ಆಂದೋಲನದಡಿ ಹಾಗೂ ಇತರೆ ಎಲ್ಲಾ ಯೋಜನೆಗಳಲ್ಲಿ ಪ್ರಸ್ತಾಪಿಸಿರುವ/ಪ್ರಸ್ತಾಪಿಸುವ ವೈಯಕ್ತಿಕ ಶೌಚಾಲಯದ ಕಾಮಗಾರಿ ನಿರ್ಮಾಣವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ ಈ ಆದೇಶದೊಂದಿಗೆ ಲಗತ್ತಿಸಿರುವ ಅಂದಾಜು ಪತ್ರಿಕೆ ಹಾಗೂ ನಕ್ಷೆಯಂತೆ ಅಂದಾಜು ಪತ್ರಿಕೆಯಲ್ಲಿ ಸೂಚಿಸಿರುವ ಸಡಿಲು ಮಣ್ಣಿನಲ್ಲಿ 19 ಅಕುಶಲ ಮಾನವ ದಿನಗಳ ಕೂಲಿ ವೆಚ್ಚವನ್ನು ಮತ್ತು ಗಟ್ಟಿ ಮಣ್ಣಿನಲ್ಲಿ 21 ಅಕುಶಲ ಮಾನವ ದಿನಗಳ ವೆಚ್ಚವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುದಾನದಲ್ಲಿ ಭರಿಸುವ, ಸಾಮಗ್ರಿ

ವೆಚ್ಚವನ್ನು ಆಯಾ ಇತರೆ ಯೋಜನೆಗಳಲ್ಲಿ ಭರಿಸುವ ಮತ್ತು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಇತರೆ ಎಲ್ಲಾ ಯೋಜನೆಗಳಲ್ಲಿ ಪ್ರಸ್ತಾಪಿಸುವ ಶೌಚಾಲಯದ ನಿರ್ಮಾಣದ ಕಾಮಗಾರಿಯ ಮೊತ್ತ ಅಂದಾಜು ಪಟ್ಟಿಯ ಮೊತ್ತಕ್ಕೆ ಮೀರದಂತೆ ಕ್ರಮವಹಿಸತಕ್ಕದ್ದು.
2. ಒಂದು ವೇಳೆ ಕಾಮಗಾರಿಗೆ ಆದ ಖರ್ಚು ಅಂದಾಜು ಪತ್ರಿಕೆಗಿಂತ ಕಡಿಮೆಯಾದಲ್ಲಿ ಅದಕ್ಕೆ ಸೀಮಿತಗೊಳಿಸತಕ್ಕದ್ದು.
3. ಕಾಮಗಾರಿಯನ್ನು ಕೇವಲ ನೋಂದಾಯಿತ ಕಾರ್ಮಿಕರಿಂದ ನಿರ್ವಹಿಸತಕ್ಕದ್ದು
4. ಗುತ್ತಿಗೆದಾರರನ್ನು ಮತ್ತು ಯಂತ್ರಗಳನ್ನು ಅನುಷ್ಠಾನದಲ್ಲಿ ಬಳಸಲು ನಿಷೇಧಿಸಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಶಿವಶಂಕರ್

ನಿರ್ದೇಶಕರು

ಮಹಾತ್ಮಗಾಂಧಿ ರಾಷ್ಟ್ರಿಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

DETAILED ESTIMATE

Name of Work : Sample Detailed Estimate for Construction of Toilet & Soak pit

Head of A/c : Under MGNRGA for the Year 2010-11 based on Dharwad circle PWD SR 2010-2011

Sl. No.	Item of work	Measurements				Quantity	Unity	Rate	Amount
		No	L	B	D				
1	2	3	4	5	6	7	8	9	10

1. KSRB 2-2.1: Earthwork excavation for foundation of buildings, culverts, water supply, sanitary lines and electrical conduits either in pit or in trenches 1.5 m and above in width, in ordinary soil not exceeding 1.5 m in depth including dressing the bottom and sides of pits and trenches, stacking the excavated soil clear from edges of excavation with lead upto 50 m. after breaking of colds complete as per specifications, specification No. KBS 2.1 (a)/2,3,5, (P.No. 5,I No. 2,3 PWDSR10-11)

<u>In case of ordinary soil</u>

	No	L	B	D	Quantity	Rate	Amount
Toilet C/L	4	1.35	0.45	0.60	1.46 Cmtr		
Soak Pit 1.20 m dia and 1.50 depth							
	0.785	1.20	1.20	1.50	1.70 Cmtr		
					3.16 Cmtr	118.00	373.00

<u>In case of Hard soil</u> (P. No. 5, I No. 2.4 PWDSR10-11)

	No	L	B	D	Quantity	Rate	Amount
Toilet C/L	4	1.35	0.45	0.60	1.46 Cmtr		
Soak Pit 1.20 m dia and 1.50 depths							
	0.785	1.20	1.20	1.50	1.70 Cmtr		
					3.16 Cmtr	178.00	563.00

2. KSRB 5-1.1 Providing and construction granite/trap/basalt rubble stone masonry in foundation with CM 1:8 mortar (uncoursed) bond stones at two m. apart in each course including cost of materials, labour, curing complete as per specifications (P.No. 22, I No. 5.2 PWDSR 10-11)

	No	L	B	D	Quantity	Rate	Amount
	4	1.35	0.45	0.60	1.46 Cmtr	1980.00	2890.00

3. KSRB 5-1.1 providing and laying granite/trap/basalt cement concrete with including cost of materials, labour, curing etc complete as per specifications. (P. No. 12, I No. 4.7 PWDSR 10-11) CC 1;3;6 20 mm

	No	L	B	D	Quantity	Rate	Amount
	1	1.45	1.45	0.075	0.16 cum	3897.00	624.00

4. KSRB 5-13: Providing and constructing non-load bearing wall cement concrete cavities blocks (hollow blocks) of proportion 1:5:3 blocks of size 40 x10x20 cms (lxbxh) strength not less than 35 kg. per sqm with cement mortar 1:4 conforming to I.S. 2185 of 1967 having not less than 40 mm shell thickness 50% of total volume of block having two large cavities with 20 mm. Wall thickness in between including cost of materials, labour charges, scaffolding, curing complete as per specifications (P.No. 23, I No. 5.26 PWDSR 10-11)

	No	L	B	Quantity	Rate	Amount
Deductions	4	1.00	1.80	7.20 Smtr		
Door	1	0.60	1.80	1.08 Smtr		
Ventilator	1	0.30	0.20	0.06 Smtr		
				1.14 Smtr		
			Net Qty 7.20-1.14	6.06 Smtr	367.00	2224.00

5. KSRB 11-3: Providing and fixing white vitreous china clay, water Indian type (squatting pan) of size 580 mm with footrests, 100 mm S or P trap, (approved make) cutting and making good the wall and floor wherever required, including cost of materials, labour complete as per specifications. (P. No. 67, I No. 12.3 PWDSR10-11)

1 - - 1.00 Pan 903.00 903.00

6. Soak Pit dry wall for soakage lining dia 0.35 wide (W.S.)

3.14x1.50 -.30 1.50 2.11 Cum 700.00 1477.00

7. KSRB 12-11: Providing and laying in position to required level or slope 100 mm internal diameter slat glazed stoneware pipes grade A and jointing with stiff mixture of cement mortar in proportion of 1:1 testing of pipes and joints, including cost of materials, labour charges complete as per specifications (P. No. 60, I No. 11.1 PWD SR 10-11)

1 2.40 - 2.40 M 197.00 473.00

8. Burnt Stone Slabs 10 Cms thick (P. No. XV, I No. 412 PWDSR 10-11)

1 1.50 1.50 2.25 Smtr 290.00 653.00

9. KSRB 8.3-1: Providing and laying to required line and slope roofing with corrugated asbestos cement sheet 6 mm. Thick fixed with galvanized iron J or L hooks, bolts and nuts 8 mm Dia C.I plain and bitumen washers over the existing parings, rafters and trusses including cost of materials, labour, complete as per specifications. Specification No. KBS 8.5 (P. No. 41, I No. 8.3 PWDSR10-11)

1 1.50 1.50 2.25 Smtr 294.00 662.00

10. SOLID PANEL PVC DOOR SHUTTER Providing & fixing 30 mm thick factory made rigid foam Paneled door Shutters made from M.S. tube of 19 gauge thickness, size 19x19mm for styles and 15x15mm for top & bottom rails, covered with heat moulded PVC channel of 5 mm thick sheet & 30x50 mm wide to form styles & 5 mm thick & 75 mm wide PVC sheets for top rail, lock rail & bottom rail on either side & 5 mm thick 20 mm wide PVC sheet as gap insert for top rail & bottom rail, Panelling of 5 mm thick PVC sheet fitted in the M.S. Frame, Sealed to the styles & rails with 5.x30 mm PVC sheet beading on either side & joined together with solvent cement adhesive etc., Complete as per manufacturers specification & direction of Engineer-in-charge fixed to frames with 3 no's of 75 mm Aluminium hings. (P.No. 52, It. No. 9.83 PWD SR 10-11)

1 1.60 / 1.50 - 0.90 Smtr 1,550.00 1,395.00

11. SOLID PVC DOOR FRAME Providing & fixing factory made PVC Doorframe of size 50x47 mm with a wall thickness of 5 mm, made out of extruded 5 mm rigid PVC foam sheet metered cut at corners & Jointed 2 No's of 150 mm long brackets of 15x15mm M.S. square tube, the entire door frame to be reinforced with 19x19mm M.S.square tube of 19 gauge. The doorframe to be fixed to the wall using M.S. Screws of 65/80mm size complete as per manufacturers specifications & Direction of Engineer-incharge. (P.No. 52, It. No. 9.84 PWD SR 10-11)

Qty. vide I No. 10 0.90 Smtr 205.00 185.00

In case of ordinary soil
Total Amount Rs. 11859.00
In case of Hard soil
Total Amount Rs. 12049.00

R. P. Kulkarni
Additional Director (Tech.) & Chief Engineer
Karnataka Rural Water Supply & Sanitation Agency
2nd Floor, 'E' Block, KHB complex,
Cauvery Bhavan, K. G. Road, Bangalore-9.

Sample Estimate for construction of rural toilet with soak pit for approximate assessment of requirement of unskilled labour for payment under MGNREGS (As per)


Sl No.	Item	Unit	Quantity	SR/MR rate	Amount	Material Approximate Amount	Labour component: Skilled/semi		Unskilled: Ordinary soil			Unskilled: Hard soil			Remarks
							Description	Approximate Amount	No's	Rate	Amount	No's	Rate	Amount	
1	KSRB 2-2.1: Earthwork excavation for foundation of buildings, culverts, water supply, sanitary lines and electrical conduits either in pits or in trenches														Fractional vaules of

	1.5m and above in width, in ordinary soil not exceeding 1.5m in depth including dressing the bottom and sides of pits and trenches, stacking the excavated soil clear from edges of excavation with lead upto 50m. after breaking of colds complete as per specifications, specification No. KBS 2.1 (a)/2.3.5. (P.No. 5, I No. 2.3 PWDSR10-11)														mandays are rounded to next integer digi
	In case of ordinary soil	Cum	3.16	118	372.88	0		0	3	· 125	375	5	125	625	
	In case of Hard soil	Cum	3.16	178	562.48										
2	KSRB 5-1.1: Providing and constructing granite/trap/basalt rubble stone masonry in foundation with CM 1,8 mortar (uncoursed), bond stones at two m.apart in each course including cost of materials, labour, curing complete as per specifications (P. No. 22, I No. 5.2 PWDSR10-11)														
		Cum	1.46	###	2890.80	2265.81	1 masons	250	3	125	375	3	125	375	
3	KSRB 5-1.1: Providing and laying granite/trap/basalt cement concrete with including cost of materials, labour, curing etc., complete as per specifications (P. No. 12, 1 No. 4.7 PWDSR 10-11) CC 1;3;6.20 mm														
		Cum	0.16	###	623.52	248.52	½ masons	125	2	125	250	2	125	250	
4	4.KSRB 5-13: Providing and onstructing non-load bearing wall cement concrete cavities blocks (hollow blocks) of proportion 1:5:3 blocks of size 40x10x20 cms (lxbxh) strength not less than 35 kg. per sqm with cement mortar 1:4 conforming to I.S. 2185 of 1967 having not less than 40 mm shell thickness 50% of total volume of block having two large cavities with 20mm, Wall thickness in between including cost of materials, labour charges, scaffolding, curing complete as per specifications (P. No. 23, I No. 5.26 PWDSR10-11)														
		Sqmtr	6.06	367	2,224.02	1224.02	2 masons	500	4	125	500	4	125	500	-
5	5. KSRB 11-3: Providing and fixing white vitreous china clay, water Indian type (squatting pan of size 580 mm with footrests, 100 mm S or P trap (approved make) cutting and making good the wall and floor wherever required, including cost of materials, labour complete as per specifications (P. No. 67, I No. 12.3 PWDSR10-11)														
		Each No.	1	903	903.00	903	Plumber		0	125	0	0	125	0	

6	6.Soak Pit dry wall for soakage lining dia 0.35 wide(LS)														
		Sqmtr	2.11	700	1,477.02	727			6	125	750	6	125	750	-
7	7. KSRB 12-11: Providing and laying in position to required level or slope 100 mm internal diameter salt glazed stoneware pipes grade A and jointing with stiff mixture of cement mortar in proportion of 1:1, testing of pipes and joints. Including cost of materials, labour charges complete as per specifications. (P. No. 60, I No. 11.1 PWD SR 10-11).														
		rmt	2.4	197	472.80	222.8	Plumber	250	0	125	0	0	125	0	
8	8. Burnt Stone Slabs 10 Cms thick (P. No. XV, I No. 412 PWDSR 10-11														
		Sqmtr	2.25	290	652.50	652.5			0	125	0	0	125	0	
9	9. KSRB 8.3-1: Providing and laying to required line and slope roofing with corrugated asbestos cement sheet 6 mm. Thick fixed with galvanized iron J or L hooks, bolts and nuts 8 mm, Dia C.I plain and bitumen washers over the existing purilns, rafters and trusses including cost of materials, labour, complete as per specifications. Specification No. KBS 8. 5 (P. No. 41, I No. 8.3 PWDSR10-11)														
		Sqmtr	2.25	294	661.50	536.5			1	125	125	1	125	125	
10	10. SOLID PANEL PVC DOOR SHUTTER Providing & fixing 30 mm thick factory made rigid foam Panelled door Shutters made from M.S. tube of 19 gauge thickness, size 19x19 mm for styles and 15x15 mm for top & bottom rails, covered with heat moulded PVC channel of 5 mm thick sheet & 30x50 mm wide to form styles & 5 mm thick & 75 mm wide PVC sheets for top rail, lock rail & bottom rail on either side & 5 mm thick 20 mm wide PVC sheet as gap insert for top tail & bottom rail, Panelling of 5 mm thick PVC sheet fitted														

	in the M.S. Frame, Sealed to the styles & rails with 5x30 mm PVC sheet beading on either side & joined together with solvent cement adhesive etc., Complete as per manufactures specification & direction of Engineer-in-charge fixed to frames with 3 no.s of 75 mm. Aluminium hings. (P. No. 52, it. NO. 9.83 PWD SR 10-11)														
		Sqmtr	0.9	###	1,395.00	1395			0	125	0	0	125	0	
11	11. SOLID PVC DOOR FRAME Providing & fixing factory made PVC Doorframe of size 50x47 mm with a wall thickness of 5 mm, made out of extruded 5 mm rigid PVC foam sheet metered out at corners & Jointed 2 NO.s of 150 mm long brackets of 15x15 mm M. S. square tube, the entire door frame to be reinforced with 19x19 mm M. S. square tube of 19 gauge. The doorframe to be fixed to the wall using M. S. Screws of 65/80 mm size domplete as per manufacturers specifications & Direction of Engineer-incharge (P. NO. 52, it. No. 9.84 PWD SR 10-11)														
		Sqmtr	0.9	205	184.50	184.5			0	125	0	0	125	0	
	In case of ordinary soil Total Amount Rs. 11859.00				Total 8359.64		1125	19		2375	21		2625		
	In case of Hard soil Total Amout Rs. 12049.00								Man days			Man days			
	Hence if toilet as per above drawing and specifications in ***Ordinary soil*** *19 (ninteen) unskilled can be paid under MGNREGS Material skilled and semi skilled workers payment to be paid under convergence with other schemes. These calculations are for guidelines only actual calculations may be taken up case wise*														
	Hence if toilet as per above drawing and specifications in ***Hard soil*** *21 (twenty one) unskilled can be paid under MGNREGS Material skilled and semi skilled workers payment to be paid under convergence with other schemes. These calculations are for guidelines only actual calculations may be taken up case wise*														

ESTIMATE FOR RURAL SANITATION



Note: All dimensions in meters

R. P. KULKARNI
Additional Director (Tech.) & Chief Engineer
Karnataka Rural Water Supply & Sanitation Agency
2nd Floor, 'E' Block, KHB Complex,
Cauvery Bhavan, K. G. Road, Bangalore-9

ಪಿ. ಶಿವಶಂಕರ್
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರಿಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ. ಆರ್. 1744

ಒಳಾಡಳಿತ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಒಇ 61 ಸಿಡಬ್ಲ್ಯೂಪಿ 2008, ಬೆಂಗಳೂರು, ದಿನಾಂಕ : 7-6-2011

ವಿಷಯ : ಭಾರತೀಯ ರಿಸರ್ವ್ ಬ್ಯಾಂಕ್‌ನ ರಾಜ್ಯ ಮಟ್ಟದ ಸಮನ್ವಯ ಸಮಿತಿಯ ಸೂಚನೆಯನ್ವಯ ಬ್ಯಾಂಕುಗಳಲ್ಲಿನ ಹಣಕಾಸು ವ್ಯವಹಾರ ನಿರ್ವಹಣೆ ಸಂಸ್ಥೆಗಳನ್ನು ನಿಯಂತ್ರಿಸುವ ಬಗ್ಗೆ.

ಓದಲಾಗಿದೆ :
1. ಅಧಿಸೂಚನೆ ಸಂಖ್ಯೆ : ಎಇ 27 ಟಿಎಆರ್ 2007, ದಿನಾಂಕ : 12-12-2007.
2. ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ದಿನಾಂಕ : 24-5-2011 ರಂದು ನಡೆದ ರಾಜ್ಯ ಮಟ್ಟದ ಸಮನ್ವಯ ಸಮಿತಿಯ ಸಭೆ.

ಭಾರತೀಯ ರಿಸರ್ವ್ ಬ್ಯಾಂಕ್ ಅಡಿಯಲ್ಲಿ ರಾಜ್ಯ ಮಟ್ಟದ ಸಮನ್ವಯ ಸಮಿತಿಯು ಬ್ಯಾಂಕ್‌ಗಳಲ್ಲದ ಹಣಕಾಸು ನಿರ್ವಹಣಾ ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ನಿಯಂತ್ರಿಸುವ ಉದ್ದೇಶದಿಂದ ಕರ್ತವ್ಯ ನಿರತವಾಗಿದ್ದು, ಇಂತಹ ಸಂಸ್ಥೆಗಳು ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸುವುದನ್ನು ನಿಯಂತ್ರಣಕ್ಕೊಳಪಡಿಸುವುದಕ್ಕಾಗಿ ಕಾಲಕಾಲಕ್ಕೆ ರಾಜ್ಯ ಸರ್ಕಾರದೊಂದಿಗೆ ಸಮಾಲೋಚನೆ ನಡೆಸುತ್ತಿದೆ ಇಂತಹ ಸಂಸ್ಥೆಗಳು ಸಾರ್ವಜನಿಕರಿಂದ ಠೇವಣಿ ಸಂಗ್ರಹಣೆಗಳನ್ನು ನಿಯಂತ್ರಿಸಿ ಸಾರ್ವಜನಿಕರಿಗೆ ಮೋಸ ಮಾಡುವುದನ್ನು ತಡೆಗಟ್ಟಲು ಹಲವಾರು ಕ್ರಮ ಕೈಗೊಂಡಿದ್ದಾಗ್ಯೂ ನಿಯಂತ್ರಣ ಮೀರಿ ಹಲವಾರು ಸಂಸ್ಥೆಗಳು ಸಾರ್ವಜನಿಕರಿಗೆ ಮೋಸ ಮಾಡುತ್ತಿರುವುದನ್ನು ರಾಜ್ಯ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಗಮನಿಸಿವೆ. ಸಾರ್ವಜನಿಕರಿಂದ ಠೇವಣಿ ಸಂಗ್ರಹಣೆ ವಿಷಯದಲ್ಲಿ ನಿಯಂತ್ರಣಕ್ಕಾಗಿ ಕರ್ನಾಟಕ ಸರ್ಕಾರವು Karnataka Depositors Investment Protection Act 2004 (Karnataka Act of 2005) ಜಾರಿಗೆ ತಂದಿರುತ್ತದೆ.

ಮೋಸಕ್ಕೊಳಗಾದ ಠೇವಣಿದಾರರು ದೂರು ದಾಖಲಿಸುವ ಬಗ್ಗೆ ಮತ್ತು ಅಂತಹ ದೂರುಗಳನ್ನು ನಿರ್ವಹಿಸುವ ಬಗ್ಗೆ ಆರ್ಥಿಕ ಅಪರಾಧ ವಿಶ್ಲೇಷಣೆ ಅಡಿಯಲ್ಲಿ ಪೊಲೀಸ್ ಇಲಾಖೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನಿಸಿದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆರ್ಥಿಕ ಅಪರಾಧಗಳ ದೂರುಗಳನ್ನು ನಿರ್ವಹಿಸುವ ತನಿಖಾಧಿಕಾರಿಗಳಿಗೆ ವಿಶೇಷ ಅಧಿಕಾರಿ ನೀಡುವ ಬಗ್ಗೆ ರಾಜ್ಯ ಮಟ್ಟದ ಸಮನ್ವಯ ಸಮಿತಿಯಲ್ಲಿ ಪದೇ ಪದೇ ಜ್ಞಾಪಿಸುತ್ತಾ ಬಂದಿದೆ.

ಈ ಹಿನ್ನೆಲೆಯಲ್ಲಿ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಲಾಗಿದೆ ಮತ್ತು Karnataka Depositors Investment Protection Act 2004 ಅಡಿಯಲ್ಲಿ ಅಮಾಯಕ ಠೇವಣಿದಾರರ ಹಿತರಕ್ಷಣೆಗಾಗಿ ಎಲ್ಲಾ ಉಪ ವಿಭಾಗಾಧಿಕಾರಿಗಳು ಹಾಗೂ ಉಪ ವಿಭಾಗೀಯ ದಂಡಾಧಿಕಾರಿಗಳನ್ನು (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) ಸಕ್ಷಮ ಪ್ರಾಧಿಕಾರಿಗಳೆಂದು ನೇಮಕ ಮಾಡಿರುವುದನ್ನೂ ಭಾರತೀಯ ರಿಸರ್ವ್ ಬ್ಯಾಂಕ್‌ನ ಗಮನಕ್ಕೆ ತರಲಾಗಿದೆ.

Karnataka Depositors Investment Protection Act 2004 ರನ್ವಯ ಬೆಂಗಳೂರು ನಗರ ಜಿಲ್ಲೆ ಹೊರತು ಪಡಿಸಿ ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳು ಹಾಗೂ ಉಪ ವಿಭಾಗೀಯ ದಂಡಾಧಿಕಾರಿಗಳು ಅವರವರ ಕ್ಷೇತ್ರ ವ್ಯಾಪ್ತಿಯಲ್ಲಿ ಕಾಯ್ದೆಯ ಕಲಂ 5 ಉಪ ಕಲಂ 1 ರಡಿಯಲ್ಲಿ ಠೇವಣಿದಾರರು ತಮಗೆ ಮೋಸವಾದ ಬಗ್ಗೆ ಮನವಿ ಮಾಡಿದ್ದಲ್ಲಿ ಅಂತಹ ಠೇವಣಿದಾರರ ಹಿತರಕ್ಷಣೆಗಾಗಿ ಕಾಯ್ದೆಗನುಸಾರವಾಗಿ ಕ್ರಮ ಕೈಗೊಳ್ಳಲು ಅಧಿಕಾರ ಹೊಂದಿರುತ್ತಾರೆ. ಈ ಬಗ್ಗೆ ಆರ್ಥಿಕ ಇಲಾಖೆಯು ಹೊರಡಿಸಿರುವ ಅಧಿಸೂಚನೆ ಸಂಖ್ಯೆ : ಎಫ್‌ಡಿ 27 ಟಿಎಆರ್ 2007 ದಿನಾಂಕ : 12-12-2007 ರ ಪ್ರತಿಯೊಂದನ್ನು ಮಾಹಿತಿಗಾಗಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ. ಇಂತಹ ಪ್ರಸಂಗಗಳಲ್ಲಿ ಠೇವಣಿದಾರರ ಹಿತರಕ್ಷಣೆಯ ಜವಾಬ್ದಾರಿ ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳು ಹಾಗೂ ಉಪ ವಿಭಾಗೀಯ ದಂಡಾಧಿಕಾರಿಗಳದ್ದಾಗಿರುತ್ತದೆ ಎಂದು ಈ ಮೂಲಕ ಪುನರುಚ್ಚರಿಸಲಾಗಿದೆ. ಯಾವುದೇ ಠೇವಣಿದಾರರಿಗೆ ಮನವಿಯ ನಂತರವೂ ಹಿತರಕ್ಷಣೆಗೆ ಕ್ರಮ ಜಾರಿಯಾಗದಿರುವ ಪ್ರಕರಣಗಳು ಕಂಡು ಬಂದಲ್ಲಿ ಇಂತಹ ಪ್ರಕರಣಗಳಲ್ಲಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಿಗಳನ್ನು ಜವಾಬ್ದಾರರಾಗಿ ಪರಿಗಣಿಸಲಾಗುವುದು.

ರಾಘವೇಂದ್ರ ಹೆಚ್. ಔರಾದ್‌ಕರ್
ಸರ್ಕಾರದ ಕಾರ್ಯದರ್ಶಿ (ಸೆ.ಅ. & ಸ.ಸೇ)
ಒಳಾಡಳಿತ ಇಲಾಖೆ.

ಪಿ.ಆರ್. ನಂ. 1745

ಸಮಾಜ ಕಲ್ಯಾಣ ಸಚಿವಾಲಯ

ವಿಷಯ : ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ನೀಡುವ ವಾರ್ಷಿಕ ವಿದ್ಯಾರ್ಥಿ ವೇತನ ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 55 ಎಸ್‌ಇಡಬ್ಲ್ಯೂ 1978, ದಿನಾಂಕ : 10-10-1983.
2) ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 332 ಎಸ್‌ಇಡಬ್ಲ್ಯೂ 1991, ದಿನಾಂಕ : 12-1-1993.
3) ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಡಿ 445 ಪಕವಿ 1997, ದಿನಾಂಕ : 7-10-1997.
4) ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಡಿ 313 ಪಕವಿ 2002, ದಿನಾಂಕ : 2-7-2002.
5) ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಡಿ 409 ಪಕವಿ 2003, ದಿನಾಂಕ : 8-1-2004.

ಪ್ರಸ್ತಾವನೆ :

2011-12ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 116 ಈ ಕೆಳಗಿನಂತಿದೆ :-

"ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸದ ಒಂದರಿಂದ ಏಳನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಾರ್ಷಿಕ ವಿದ್ಯಾರ್ಥಿ ವೇತನವನ್ನು 75 ರೂ. ಗಳಿಂದ 250 ರೂ.ಗಳಿಗೆ ಹೆಚ್ಚಿಸಲಾಗುವುದು ಮತ್ತು 8 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 100 ರೂ. ಗಳಿಂದ 500 ರೂ.ಗಳಿಗೆ ಹೆಚ್ಚಿಸಲಾಗುವುದು. ಈ ಕಾರ್ಯಕ್ರಮದಡಿ ಸುಮಾರು 23 ಲಕ್ಷ ವಿದ್ಯಾರ್ಥಿಗಳು ಪ್ರಯೋಜನ ಪಡೆಯಲಿದ್ದಾರೆ.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಕಇ 122 ಸಮನ್ವಯ 2011, ಬೆಂಗಳೂರು, ದಿನಾಂಕ : 7-7-2011.

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೇಲೆ (1) ರಿಂದ (4) ರಲ್ಲಿ ಓದಲಾದ ಆದೇಶಗಳಂತೆ ಹಾಲಿ ನೀಡುತ್ತಿರುವ ವಾರ್ಷಿಕ ವಿದ್ಯಾರ್ಥಿ ವೇತನ ದರಗಳನ್ನು ಈ ಕೆಳಗಿನಂತೆ ಹೆಚ್ಚಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ :-

ತರಗತಿ	ಬಾಲಕರು		ಬಾಲಕಿಯರು	
	ಪ್ರಸ್ತುತ ದರ (ರೂ)	ಹೆಚ್ಚಿಸಲಾದ ದರ (ರೂ)	ಪ್ರಸ್ತುತ ದರ (ರೂ)	ಹೆಚ್ಚಿಸಲಾದ ದರ (ರೂ)
1 ರಿಂದ 5	75.00	250.00	75.00	250.00
6 ರಿಂದ 7	75.00	250.00	325.00	350.00
8 ರಿಂದ 10	100.00	500.00	600.00	700.00

ಈ ಪರಿಷ್ಕೃತ ದರಗಳು ದಿನಾಂಕ : 1-6-2011 ರಿಂದ ಅನ್ವಯವಾಗುವಂತೆ ಜಾರಿಗೆ ಬರುತ್ತವೆ.

1. ವಿದ್ಯಾರ್ಥಿ ವೇತನ ಪಡೆಯಲು ಅರ್ಹತೆ :

1.1 ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

1.2 ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ-ಕುಟುಂಬದ ವಾರ್ಷಿಕ ಆದಾಯ ಮಿತಿ-ರೂ. 2.00 ಲಕ್ಷ

1.3 ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ-ಕುಟುಂಬದ ವಾರ್ಷಿಕ ಆದಾಯ ಮಿತಿ-ರೂ. 1.45 ಲಕ್ಷ

1.4 ಈ ಸೌಲಭ್ಯವನ್ನು ಸರ್ಕಾರದ ಹಾಗೂ ಸರ್ಕಾರದ ಮಾನ್ಯತೆ/ಪರವಾನಿಗೆ ಪಡೆದ ಅನುದಾನರಹಿತ ಶಾಲೆಗಳಲ್ಲಿ ಓದುತ್ತಿರುವ ಎಲ್ಲಾ ವಿದ್ಯಾರ್ಥಿಗಳು ಪಡೆಯಬಹುದು.

1.5 ಆದರೆ ಸರ್ಕಾರದ ಹಾಗೂ ಸರ್ಕಾರದ ಅನುದಾನಿತ ವಿದ್ಯಾರ್ಥಿ ನಿಲಯಗಳಲ್ಲಿ/ವಸತಿ ಶಾಲೆಗಳಲ್ಲಿ ಇರುವ ವಿದ್ಯಾರ್ಥಿಗಳು (hostel students) ಪಡೆಯಲು ಅರ್ಹರಿರುವುದಿಲ್ಲ.

2. ವಿದ್ಯಾರ್ಥಿ ವೇತನ ಮಂಜೂರು ಮಾಡುವ ವಿಧಿವಿಧಾನ :

2.1 ವಿದ್ಯಾರ್ಥಿಗಳು ನಿಗದಿತ ಅರ್ಜಿಯನ್ನು (ಅನುಬಂಧ-1) ಶಾಲೆಯ ಮುಖ್ಯೋಪಾಧ್ಯಾಯರಿಗೆ ಸಲ್ಲಿಸಬೇಕು.

2.2 ಅಂತಹ ಅರ್ಜಿ ಜೊತೆಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಇವುಗಳನ್ನು ಸಂಬಂಧಪಟ್ಟ ತಹಶೀಲ್ದಾರ್‌ರಿಂದ ಪಡೆದು ಅರ್ಜಿಗೆ ಲಗತ್ತಿಸತಕ್ಕದ್ದು.

2.3 ಜಾತಿ ಪ್ರಮಾಣ ಪತ್ರ ಒಂದು ಬಾರಿ ನೀಡಿದಲ್ಲಿ ನಂತರದ ತರಗತಿಗಳಲ್ಲಿ ನೀಡುವ ಅವಶ್ಯಕತೆ ಇರುವುದಿಲ್ಲ.

2.4 ಆದಾಯ ಪ್ರಮಾಣ ಪತ್ರವನ್ನು ಮೂರು ವರ್ಷಕ್ಕೆ ಒಮ್ಮೆ ಹೊಸದಾಗಿ ನೀಡತಕ್ಕದ್ದು.

2.5 ಮುಖ್ಯೋಪಾಧ್ಯಾಯರು ಶಾಲೆಯ ಎಲ್ಲಾ ಅರ್ಜಿಗಳನ್ನು ಸೇರಿಸಿ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಯವರಿಗೆ ನೀಡುವುದು. ಅಂತಹ ಅರ್ಜಿಗಳ ವಿವರಗಳನ್ನು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ ಗಣಕಯಂತ್ರದಲ್ಲಿ ನಮೂದಿಸತಕ್ಕದ್ದು. ನಂತರ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ ಅರ್ಜಿಗಳನ್ನು ಪರಿಶೀಲಿಸಿ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡತಕ್ಕದ್ದು. ಪ್ರತಿ ವರ್ಷ ಅನುಬಂಧ-3ರಲ್ಲಿ ಒಟ್ಟು ಮಂಜೂರು ಮಾಡಿದ ವಿದ್ಯಾರ್ಥಿಗಳ ವಿವರಗಳನ್ನು ನಮೂದಿಸತಕ್ಕದ್ದು. ಅದರ ಪ್ರತಿಯನ್ನು ಸಂಬಂಧಿಸಿದ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಇವರ ಮಾಹಿತಿಗಾಗಿ ಸಲ್ಲಿಸುವುದು.

2.6 ಇದಕ್ಕೆ ಪರಿಶಿಷ್ಟ ಜಾತಿಗಳ ಕಲ್ಯಾಣ ಇಲಾಖೆ ಸೂಕ್ತ ಸಾಫ್ಟ್‌ವೇರ್ ಒದಗಿಸುವುದು.

2.7 ವಿದ್ಯಾರ್ಥಿ ವೇತನದ ಮೊತ್ತವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಅಥವಾ ಅವರ ತಂದೆ-ತಾಯಿಗಳ ಬ್ಯಾಂಕ್ ಖಾತೆಗೆ ಕಂಪ್ಯೂಟರ್ (EVT-Electronic Transfer) ಮುಖಾಂತರ ಜಮಾ ಮಾಡುವುದು. ಯಾವುದೇ ಕಾರಣಕ್ಕೂ ನಗದು ರೂಪದಲ್ಲಿ ನೀಡಬಾರದು.

3. ವಿದ್ಯಾರ್ಥಿ ವೇತನ ಕ್ಲೇಮ್ ನವೀಕರಿಸುವ ವಿಧಾನ :

3.1 ಮುಖ್ಯೋಪಾಧ್ಯಾಯರು ಪ್ರತಿ ವರ್ಷದ ಪ್ರಾರಂಭದಲ್ಲಿ ನಿಗದಿತ ನಮೂನೆಯಲ್ಲಿ (ಅನುಬಂಧ-2) ವಿದ್ಯಾರ್ಥಿಗಳ ಪಟ್ಟಿ ಮಾಡಿ ವಿದ್ಯಾರ್ಥಿ ವೇತನದ ಮಂಜೂರಾತಿಗೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಇವರಿಗೆ ಸಲ್ಲಿಸುವುದು. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಪರಿಶೀಲಿಸಿ ಸಂಬಂಧಪಟ್ಟ ಮೊತ್ತ ಮಂಜೂರು ಮಾಡಿ ಪಾವತಿಸುವುದು. (ಇಂತಹ ಪ್ರಕರಣಗಳಲ್ಲಿ ಹೊಸದಾಗಿ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ).

3.2 ಯಾವುದೇ ವಿದ್ಯಾರ್ಥಿಯು ಒಂದು ಶಾಲೆಯನ್ನು ಬಿಟ್ಟು ಇನ್ನೊಂದು ಶಾಲೆಗೆ ಹೋದಾಗ ಹೊಸದಾಗಿ ಸೇರಿದ ಶಾಲೆಯ ಮುಖ್ಯೋಪಾಧ್ಯಾಯರಿಗೆ ಅರ್ಜಿ ಸಲ್ಲಿಸತಕ್ಕದ್ದು. ಅಂತಹ ಸಂದರ್ಭಗಳಲ್ಲಿ ಹಿಂದಿನ ಶಾಲೆಯ ಮುಖ್ಯೋಪಾಧ್ಯಾಯರು ಸಂಬಂಧಪಟ್ಟ ಮಕ್ಕಳ ಹೆಸರುಗಳನ್ನು ಪಟ್ಟಿಯಿಂದ ತೆಗೆಯತಕ್ಕದ್ದು. ಯಾವುದೇ ಕಾರಣಕ್ಕೂ ಆ ವಿದ್ಯಾರ್ಥಿ ಹೆಸರಿನಲ್ಲಿ ವಿದ್ಯಾರ್ಥಿ ವೇತನ ಪಡೆಯತಕ್ಕದ್ದಲ್ಲ. ಒಂದು ಪಕ್ಷ ವಿದ್ಯಾರ್ಥಿ ವೇತನ ಪಡೆದಿದ್ದಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರೇ ಹೊಣೆಗಾರರಾಗಿರುತ್ತಾರೆ.

ಅಂತಹ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವೆಚ್ಚವನ್ನು ಕ್ರಮವಾಗಿ ತಾಲ್ಲೂಕು ಪಂಚಾಯತ್ 2225-00-101-0-68 (ಯೋಜನೆ/ಯೋಜನೇತರ) ರ ಅಡಿ ಹಾಗೂ 2225-00-102-0-68 (ಯೋಜನೆ/ಯೋಜನೇತರ) ರ ಅಡಿ ಭರಿಸತಕ್ಕದ್ದು.

ಇದಕ್ಕೆ ಆರ್ಥಿಕ ಇಲಾಖೆ ಸಹಮತಿಯನ್ನು ಟಿಪ್ಪಣಿ ಸಂಖ್ಯೆ : ಆಇ 370 ವೆಚ್ಚ-3/11, ದಿನಾಂಕ : 3-6-2011 ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಲೋಕನಾಥರಾವ್

ಸರ್ಕಾರದ ಅಧೀನ ಕಾರ್ಯದರ್ಶಿ-2,

ಸಮಾಜ ಕಲ್ಯಾಣ ಇಲಾಖೆ.

ಅರ್ಜಿ ನಮೂನೆ–ಅನುಬಂಧ–1

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸದೇ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ Days Scholarship ಪಡೆಯಲು ಅರ್ಜಿ ನಮೂನೆ

ಶೈಕ್ಷಣಿಕ ವರ್ಷ 20 –20

ಭಾವಚಿತ್ರ (ಮುಖ್ಯೋಪಾಧ್ಯಾಯರಿಂದ ದೃಢೀಕರಿಸಿದ್ದು)

1ನೇ ತರಗತಿಯಿಂದ 10 ನೇ ತರಗತಿಯವರೆಗೆ :-

1	ವಿದ್ಯಾರ್ಥಿ ಹೆಸರು	
2	ವಿದ್ಯಾರ್ಥಿಯ ಐಡಿ (ID)	
3	ತಂದೆ/ತಾಯಿ/ಪೋಷಕರ ಹೆಸರು	
4	ಹುಟ್ಟಿದ ದಿನಾಂಕ	
5	ಬಾಲಕ ಅಥವಾ ಬಾಲಕಿ	
6	ವಿದ್ಯಾರ್ಥಿಯ ಪೂರ್ಣ ವಿಳಾಸ	
7	ವ್ಯಾಸಂಗ ಮಾಡುತ್ತಿರುವ ಶಾಲೆಯ ಹೆಸರು ಮತ್ತು ವಿಳಾಸ	ಗ್ರಾಮ : ತಾಲ್ಲೂಕು : ಜಿಲ್ಲೆ :
8	ವ್ಯಾಸಂಗ ಮಾಡುತ್ತಿರುವ ತರಗತಿ	
9	ಪರಿಶಿಷ್ಟ ಜಾತಿ/ಪಂಗಡ (ದೃಢೀಕರಿಸಿದ ಪ್ರಮಾಣ ಪತ್ರ ಲಗತ್ತಿಸುವುದು)	
10	ತಂದೆ/ತಾಯಿ/ಪೋಷಕ ವೃತ್ತಿ/ಉದ್ಯೋಗ	
11	ಕುಟುಂಬದ ವಾರ್ಷಿಕ ಆದಾಯ (ದೃಢೀಕರಿಸಿದ ವಾರ್ಷಿಕ ಆದಾಯ ಪತ್ರ ಲಗತ್ತಿಸುವುದು)	
12	ವಿದ್ಯಾರ್ಥಿ ಅಥವಾ ತಂದೆ/ತಾಯಿ/ಪೋಷಕರ ಬ್ಯಾಂಕ್ ಖಾತೆ–ಬ್ಯಾಂಕಿನ ಹೆಸರು– ಬ್ಯಾಂಕಿನ Branch ಮತ್ತು ವಿಳಾಸ ವಿದ್ಯಾರ್ಥಿ ಖಾತೆ ನಂ.	
13	ಇತರೆ ಮಾಹಿತಿ	

ಮೇಲ್ಕಂಡ ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿರುತ್ತವೆ. ಒಂದು ವೇಳೆ ನಾನು ತಿಳಿಸಿರುವ ಮಾಹಿತಿ ಸುಳ್ಳು ಎಂದು ತಿಳಿದುಬಂದಲ್ಲಿ ಇಲಾಖೆಯು ವಿಧಿಸುವ ಯಾವುದೇ ಶಿಕ್ಷೆಗೆ ಬದ್ಧನಾಗಿರುತ್ತೇನೆ.

ತಂದೆ/ತಾಯಿ/ಪೋಷಕರ ಸಹಿ ಅಭ್ಯರ್ಥಿಯ ಸಹಿ

. . . .

ಕಛೇರಿಯ ಉಪಯೋಗಕ್ಕಾಗಿ ಮಾತ್ರ (ಮುಖ್ಯೋಪಾಧ್ಯಾಯರ ಕಛೇರಿ)

ಶಾಲಾ ಮುಖ್ಯಸ್ಥರು ತೆಗೆದುಕೊಳ್ಳಬೇಕಾದ ಕ್ರಮಗಳು

ನಾನು ಮೇಲ್ಕಂಡ ವಿವರಗಳನ್ನು ಶಾಲೆಯಲ್ಲಿ ಲಭ್ಯವಿರುವ ದಾಖಲು ಇತ್ಯಾದಿಗಳೊಂದಿಗೆ ಪರಿಶೀಲಿಸಿ ದೃಢೀಕರಿಸಿರುತ್ತೇನೆ.

ಮುಖ್ಯೋಪಾಧ್ಯಾಯರ ಸಹಿ ಮತ್ತು ಶಾಲೆಯ ಮೊಹರು

. . . .

ಕಛೇರಿಯ ಉಪಯೋಗಕ್ಕಾಗಿ ಮಾತ್ರ (ತಾಲ್ಲೂಕು ಕಛೇರಿ)

ಮಂಜೂರಾತಿ

ಪರಿಶೀಲಿಸಿ ಶ್ರೀ . . . . ಮಗ/ಮಗಳು ಕುಮಾರ/ಕುಮಾರಿ . . . . ಇವರಿಗೆ ರೂ. . . . . ವಿದ್ಯಾರ್ಥಿ ವೇತನವನ್ನು (Days Scholarship) ಮಂಜೂರು ಮಾಡಲಾಗಿದೆ.

ದಿನಾಂಕ :

ಸಹಿ

ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ

ಅನುಬಂಧ–2

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸದೇ ಇರುವ ವಿದ್ಯಾರ್ಥಿಗಳ Days Scholarship ಪಡೆಯಲು ನವೀಕರಣ ಮಾಡಬೇಕಾದ ಪಟ್ಟಿ

ಶಾಲೆಯ ಹೆಸರು ಮತ್ತು ವಿಳಾಸ : ಶೈಕ್ಷಣಿಕ ವರ್ಷ 20 – 20

ಕ್ರಮ ಸಂ.	ವಿದ್ಯಾರ್ಥಿಯ ಹೆಸರು	ವಿದ್ಯಾರ್ಥಿಯ ಐಡಿ (ID)	ಬಾಲಕ/ಬಾಲಕಿ	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ	ಈಗ ಓದುತ್ತಿರುವ ತರಗತಿ	ಹಿಂದಿನ ತರಗತಿ	ಹಿಂದಿನ ತರಗತಿಯಲ್ಲಿ ಮಂಜೂರಾದ ಮೊತ್ತ

ಮೇಲ್ಕಂಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನವೀಕರಿಸಲು ಕೋರಿದೆ.

ದಿನಾಂಕ :

ಮುಖ್ಯೋಪಾಧ್ಯಾಯರ ಸಹಿ ಮತ್ತು
ಶಾಲೆಯ ಮೊಹರು

ಸೂಚನೆ : ಇದನ್ನು ಸಂಬಂಧಿಸಿದ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯವರಿಗೆ ಕಳುಹಿಸತಕ್ಕದ್ದು.

ಅನುಬಂಧ–3

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸದೇ ಇರುವ ವಿದ್ಯಾರ್ಥಿಗಳಿಗೆ Days Scholarship ಮಂಜೂರು ಮಾಡಿದ ಪಟ್ಟಿ

ತಾಲ್ಲೂಕ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಯ ಹೆಸರು : . . . . ಶೈಕ್ಷಣಿಕ ವರ್ಷ : 20 –20

ಕ್ರ. ಸಂ.	ಶಾಲೆಯ ಹೆಸರು	ಶಾಲೆಯ ವಿಳಾಸ	ವಿದ್ಯಾರ್ಥಿಯ ಹೆಸರು	ವಿದ್ಯಾರ್ಥಿಯ ಐಡಿ (ID)	ಬಾಲಕ/ ಬಾಲಕಿ	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ	ಓದುತ್ತಿರುವ ತರಗತಿ	ಮಂಜೂರು ಮಾಡಿದ ಮೊತ್ತ	ಬ್ಯಾಂಕಿನ ಹೆಸರು	ಬ್ಯಾಂಕಿನ ಶಾಖೆ	ಬ್ಯಾಂಕ್ ಖಾತೆ ನಂ.	ಷರಾ

ಸೂಚನೆ :– ಪ್ರತಿ ವರ್ಷವು ಈ ವಿವರಗಳನ್ನು ಕಂಪ್ಯೂಟರ್‌ನಲ್ಲಿಟ್ಟು ಪಟ್ಟಿಯನ್ನು ತಯಾರಿಸಬೇಕು. ತಯಾರಿಸಿದ ಪಟ್ಟಿಯ ಒಂದು ಪ್ರತಿಯನ್ನು ಸಂಬಂಧಿಸಿದ ಶಾಲೆಗೆ ಕಳುಹಿಸತಕ್ಕದ್ದು.

ಸಹಿ

ದಿನಾಂಕ : ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ

ಪ್ರತಿ :

1. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ . . . .
2. ಶಾಲೆಯ ಮುಖ್ಯೋಪಾಧ್ಯಾಯರು . . . .

ಪಿ.ಆರ್.ನಂ.1746

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ನಗರಗಳಲ್ಲಿ ವಾಸಿಸುವ ನಾಗರೀಕರಿಗೆ ಉತ್ತಮ ಪರಿಸರ ಒದಗಿಸಲು ಸಸ್ಯೋದ್ಯಾನಗಳನ್ನು ನಿರ್ಮಿಸುವ ಬಗ್ಗೆ–ಹೊಸ ಯೋಜನೆ.

ಪ್ರಸ್ತಾವನೆ :

ನಗರಗಳಲ್ಲಿ ವಾಸಿಸುವ ನಾಗರೀಕರಿಗೆ ಉತ್ತಮ ಪರಿಸರ ಒದಗಿಸುವ ಸಲುವಾಗಿ ಬೆಂಗಳೂರು ನಗರದಲ್ಲಿ 4 ಸಸ್ಯೋದ್ಯಾನಗಳನ್ನು ಹಾಗೂ ಪ್ರತಿ ಜಿಲ್ಲಾ ಕೇಂದ್ರದ ಸಮೀಪದಲ್ಲಿ ಇದೇ ಮಾದರಿಯ 1 ಉದ್ಯಾನವನವನ್ನು 2011–12ನೇ ಸಾಲಿನಲ್ಲಿ ನಿರ್ಮಿಸುವ ಹೊಸ ಯೋಜನೆಯನ್ನು ಸರ್ಕಾರವು ರೂಪಿಸಿದ್ದು, ಯೋಜನೆಯ ರೂಪುರೇಷೆಗಳು ಈ ಕೆಳಗಿನಂತಿವೆ:

1. ಬೆಂಗಳೂರು ನಗರದ ಸಮೀಪ 4 ಹೊಸ ಸಸ್ಯೋದ್ಯಾನಗಳನ್ನು ನಿರ್ಮಿಸುವುದು. ಪ್ರತಿ ಸಸ್ಯೋದ್ಯಾನದ ವಿಸ್ತೀರ್ಣ ಸುಮಾರು 300 ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿರುತ್ತದೆ.

2. ಪ್ರತಿ ಜಿಲ್ಲೆಗೆ ಒಂದರಂತೆ ಒಟ್ಟು 29 ಸಸ್ಯೋದ್ಯಾನಗಳನ್ನು ನಿರ್ಮಿಸಲಾಗುವುದು. ಪ್ರತಿ ಸಸ್ಯೋದ್ಯಾನವು ಅಂದಾಜು 100 ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿರುತ್ತದೆ.

3. ಪ್ರತಿ ಸಸ್ಯೋದ್ಯಾನಕ್ಕೆ ಕಾಂಪೌಂಡ್ ಅಥವಾ ಚೈನ್‌ಲಿಂಕ್ ಮೆಶ್ ಬೇಲಿಯಿಂದ ಸಂರಕ್ಷಣೆ ಒದಗಿಸಲಾಗುವುದು.

4. ಪ್ರತಿ ಸಸ್ಯೋದ್ಯಾನ ಪ್ರದೇಶದಲ್ಲಿ ಮಣ್ಣು ಮತ್ತು ಸಂರಕ್ಷಣೆ (Soil moisture Conservation) ಕ್ರಮಗಳನ್ನು ಕೈಗೊಳ್ಳಲಾಗುವುದು.

5. ಸಸ್ಯೋದ್ಯಾನ ಪ್ರದೇಶದಲ್ಲಿ ಪ್ರತಿ ಹೆಕ್ಟೇರಿಗೆ ಗರಿಷ್ಠ 400 ರಂತೆ ಸ್ಥಳೀಯ ಹೂ ಬಿಡುವ, ಹಣ್ಣು ನೀಡುವ ಮತ್ತು ಸಾಂಪ್ರದಾಯಿಕ ಸಸಿಗಳನ್ನು ನೆಟ್ಟು ಬೆಳೆಸಲಾಗುವುದು.

6. ಪ್ರತಿ ಸಸ್ಯೋದ್ಯಾನದಲ್ಲಿ ಥೀಂ ಪಾರ್ಕ್, ಪವಿತ್ರ ವನಗಳು, ಬಯೋ-ಡೈವರ್ಸಿಟಿ ಪಾರ್ಕ್‌ಗಳನ್ನು ಪರಿಸರ ಶಿಕ್ಷಣ ಉದ್ದೇಶಕ್ಕಾಗಿ ನಿರ್ಮಿಸಲಾಗುವುದು.

7. ಸಸ್ಯೋದ್ಯಾನಕ್ಕೆ ಭೇಟಿ ನೀಡುವ ಪ್ರವಾಸಿಗಳಿಗಾಗಿ ಸೌಲಭ್ಯಗಳನ್ನು ನಿರ್ಮಿಸುವಾಗ ಮಕ್ಕಳಿಗಾಗಿ ಆಟದ ಸೌಲಭ್ಯಗಳು, ಚಾರಣಿಗರಿಗಾಗಿ ಟ್ರೆಕ್ಕಿಂಗ್ ಪಾಥ್ ನಿರ್ಮಾಣ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗುವುದು.

ನಾಗರೀಕರಿಗೆ ಉತ್ತಮ ಪರಿಸರ ಕಲ್ಪಿಸುವ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಅಪಜೀ 105 ಎಫ್‌ಎಪಿ 2011, ಬೆಂಗಳೂರು, ದಿನಾಂಕ : 5-7-2011 (1).

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ನಗರಗಳಲ್ಲಿ ವಾಸಿಸುವ ನಾಗರೀಕರಿಗೆ ಉತ್ತಮ ಪರಿಸರ ಒದಗಿಸುವ ಸಲುವಾಗಿ ಬೆಂಗಳೂರು ನಗರದಲ್ಲಿ ನಾಲ್ಕು ಸಸ್ಯೋದ್ಯಾನಗಳನ್ನು ಹಾಗೂ ಪ್ರತಿ ಜಿಲ್ಲಾ ಕೇಂದ್ರದ ಸಮೀಪದಲ್ಲಿ ಇದೇ ಮಾದರಿಯ ಒಂದು ಸಸ್ಯೋದ್ಯಾನವನ್ನು ರೂ. 5.00 (ಐದು ಕೋಟಿ ರೂಪಾಯಿಗಳು ಮಾತ್ರ) ಕೋಟಿಗಳ ವೆಚ್ಚದಲ್ಲಿ 2011-12ನೇ ಸಾಲಿನಲ್ಲಿ ಹೊಸ ಯೋಜನೆಯಾಗಿ ಅನುಷ್ಠಾನಗೊಳಿಸಲು ಸರ್ಕಾರ ಆದೇಶಿಸಿದೆ.

ಈ ಯೋಜನೆಗಾಗಿ ಹೊಸ ಲೆಕ್ಕಶೀರ್ಷಿಕೆಯನ್ನು ಮುಂದಿನ ಪೂರಕ ಅಂದಾಜಿನಲ್ಲಿ ಒದಗಿಸಲಾಗುವುದು. ಸದ್ಯಕ್ಕೆ ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2406-01-101-2-26-Development and Preservation of Devarakadu-139-Major Works" ಇದರಡಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಪಿಡಿ 25 ಪಿಎಫ್‌ಒ 2011, ದಿನಾಂಕ : 13-6-2011 ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಎಫ್‌ಡಿ 710 ವೆಚ್ಚ-5/2011, ದಿನಾಂಕ : 4-7-2011ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಪಿ. ರಾಮಕೃಷ್ಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. ನಂ. 1747 ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಶಾಲಾ ಮಕ್ಕಳಿಗೆ ಹಸಿರೀಕರಣದ ಬಗ್ಗೆ ಉತ್ತೇಜಿಸಲು ಮಗುವಿಗೊಂದು ಮರ, ಶಾಲೆಗೊಂದು ವನ ಎಂಬ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಪ್ರಸ್ತಾವನೆ:

ಶಾಲಾ ಮಕ್ಕಳನ್ನು ಹಸಿರೀಕರಣದ ಬಗ್ಗೆ ಉತ್ತೇಜಿಸಲು ಆಸಕ್ತಿಯಿರುವ ಮಕ್ಕಳ ಮೂಲಕ ಗಿಡ ನೆಡಿಸಲು ಹಾಗೂ ಯಾರ ಮನೆಯ ಆವರಣದಲ್ಲಿ ಅಥವಾ ಕೃಷಿ ಭೂಮಿಯಲ್ಲಿ ಜಾಗ ಲಭ್ಯವಿದೆಯೋ ಅವರುಗಳಿಗೆ ಸಸಿಗಳನ್ನು ಪೂರೈಸಿ ವಿದ್ಯಾರ್ಥಿಗಳ ಸ್ವಯಂ ಪ್ರೇರಣೆಯಿಂದ ಸಸಿಗಳನ್ನು ಬೆಳೆಸುವ ಮೂಲಕ ಪರಿಸರ ಪ್ರಜ್ಞೆ ಬೆಳೆಸುವುದು ಯೋಜನೆಯ ಉದ್ದೇಶವಾಗಿದೆ. ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ರಾಜ್ಯಾದ್ಯಂತ ಶಾಲಾ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಆವರಣಗಳಲ್ಲಿ ಗಿಡಗಳನ್ನು ನೆಡುವ ಯೋಜನೆಯನ್ನು ರೂಪಿಸಿದ್ದು, ಈ ಯೋಜನೆಯಲ್ಲಿ ಯಾವ ಯಾವ ಶಾಲಾ ಕಾಲೇಜುಗಳ ಆವರಣಗಳಲ್ಲಿ ಗಿಡಗಳನ್ನು ನೆಡುವ ಮೂಲಕ ಪರಿಸರ ಪ್ರಜ್ಞೆಯನ್ನು ಜಾಗೃತಗೊಳಿಸುವುದಾಗಿದೆ. ಇದಕ್ಕಾಗಿ 2011-12ನೇ ಸಾಲಿನಲ್ಲಿ ಮಗುವಿಗೊಂದು ಮರ, ಶಾಲೆಗೊಂದು ವನ ಎಂಬ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ಉದ್ದೇಶಿಸಿದ್ದು, ಅದರಂತೆ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ : ಅಪಜೀ 105 ಎಫ್‌ಎಪಿ 2011, ಬೆಂಗಳೂರು, ದಿನಾಂಕ : 05-07-2011 (2).

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಶಾಲಾ ಮಕ್ಕಳಲ್ಲಿ ಪರಿಸರ ಪ್ರಜ್ಞೆಯನ್ನು ಜಾಗೃತಿಗೊಳಿಸುವ ಹಾಗೂ ಪರಿಸರವನ್ನು ಸಂರಕ್ಷಿಸುವ ಉದ್ದೇಶದಿಂದ 2011-12ನೇ ಸಾಲಿನಲ್ಲಿ ರೂ. 1.00 (ಒಂದು ಕೋಟಿ ರೂಪಾಯಿಗಳು ಮಾತ್ರ) ಕೋಟಿ ವೆಚ್ಚದಲ್ಲಿ ಮಗುವಿಗೊಂದು ಮರ, ಶಾಲೆಗೊಂದು ವನ ಎಂಬ ಹೊಸ ಯೋಜನೆಯನ್ನು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ಯೋಜನೆಗಾಗಿ ಹೊಸ ಲೆಕ್ಕಶೀರ್ಷಿಕೆಯನ್ನು ಮುಂದಿನ ಪೂರಕ ಅಂದಾಜಿನಲ್ಲಿ ಒದಗಿಸಲಾಗುವುದು. ಸದ್ಯಕ್ಕೆ ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2406-01-101-2-26- Development and Preservation of Devarakadu-139-Major Works" ಇದರಡಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು, ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಪಿಡಿ 25 ಪಿಎಫ್‌ಒ 2011. ದಿನಾಂಕ 11-05-2011 ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 710 ವೆಚ್ಚ-5/2011. ದಿನಾಂಕ 04-07-2011ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಪಿ. ರಾಮಕೃಷ್ಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. ನಂ. 1748 ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ಎಸ್‌ಜಿಎಸ್‌ವೈ ಯೋಜನೆಯಡಿ 2011-2012ನೇ ಸಾಲಿನ ಅರ್ಧವಾರ್ಷಿಕ ಆರ್ಥಿಕ ಮತ್ತು ಭೌತಿಕ ಗುರಿ ನಿಗದಿ ಹಾಗೂ ಕ್ರಿಯಾ ಯೋಜನೆ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 3 ಅಂಅಸ/2011, ಬೆಂಗಳೂರು ದಿನಾಂಕ 01-04-2011 ಮತ್ತು ತಿದ್ದುಪಡಿ ದಿನಾಂಕ 02-04-2011.
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ ಜಿ-2011/01/2011-ಎಸ್‌ಜಿಎಸ್‌ವೈ-1/ದಿನಾಂಕ 11-04-2011.
3. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ ಜಿ-2011/01/2011-ಎಸ್‌ಜಿಎಸ್‌ವೈ-1 (9), (38), (67) ದಿನಾಂಕ 15-04-2011.
4. ಕೇಂದ್ರ ಸರ್ಕಾರದ ಅ.ಸ. ಪತ್ರ ಸಂಖ್ಯೆ : 1/12011/04/2011 ಎಸ್‌ಜಿಎಸ್‌ವೈ (ಸಿ) ದಿನಾಂಕ 10-05-2011.

ಪ್ರಸ್ತಾವನೆ :

ಓದಲಾಗಿದೆ (1) ರ ಆದೇಶದ ಮೇರೆಗೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಯನ್ನು 2011-12ನೇ ಸಾಲಿನಲ್ಲಿ ಮುಂದುವರೆಸಲಾಗಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು 2011-12 ನೇ ಸಾಲಿಗೆ ರಾಜ್ಯದಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ರೂ. 11,551.00 ಲಕ್ಷಗಳನ್ನು ಹಾಗೂ ಸಾಲ ನೀಡಿಕೆಗಾಗಿ ರೂ. 24,260.00 ಲಕ್ಷಗಳನ್ನು ನಿಗದಿಪಡಿಸಿ ಓದಲಾಗಿದೆ (2) ಮತ್ತು ಓದಲಾಗಿದೆ (4) ರಲ್ಲಿ ಅನುಕ್ರಮವಾಗಿ ಹಂಚಿಕೆ ಮಾಡಿದೆ. ಯೋಜನೆಯ ಮಾರ್ಗಸೂಚಿಯಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75:25 ರ ಅನುಪಾತದಲ್ಲಿ ಅನುದಾನವನ್ನು ಭರಿಸಬೇಕಾಗಿದೆ. ಇದರಂತೆ, ಕೇಂದ್ರ ರೂ. 8,663.00 ಲಕ್ಷ ಮತ್ತು ರಾಜ್ಯ ಸರ್ಕಾರ ರೂ. 2,888.00 ಲಕ್ಷಗಳನ್ನು ಭರಿಸಬೇಕಾಗಿದೆ.

2011-12ನೇ ಸಾಲಿನಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಎಸ್‌ಜಿಎಸ್‌ವೈ ಯನ್ನು ಪುನರ್ ರಚಿಸಿ ನ್ಯಾಷನಲ್ ರೂರಲ್ ಲೈವ್ಲಿ ಹುಡ್ ಮಿಷನ್ (ಎನ್‌ಆರ್‌ಎಲ್‌ಎಂ) ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಿರುವುದರಿಂದ, ಎಸ್‌ಜಿಎಸ್‌ವೈ ಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು 2011-12ನೇ ಸಾಲಿನ ಅರ್ಧ ವಾರ್ಷಿಕ ಆರ್ಥಿಕ ಮತ್ತು ಭೌತಿಕ ಗುರಿ ನಿಗದಿಪಡಿಸಿ, ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತಿಗಳಿಗೆ ನೀಡಬೇಕಾಗಿದೆ. ಎಸ್‌ಜಿಎಸ್‌ವೈ ಯಡಿ 2011-12 ನೇ ಸಾಲಿನ ಹಂಚಿಕೆ ಮಾಡಿದ ರೂ. 11,551.00 ಲಕ್ಷಗಳಲ್ಲಿ ಅರ್ಧದಷ್ಟು ಅಂದರೆ ರೂ. 5,775.33 ಲಕ್ಷಗಳಿಗೆ ಹಾಗೂ ಅನುದಾನದ ಶೇಕಡ 10 ರಷ್ಟು ತರಬೇತಿಗೆ, ಶೇಕಡ 10 ರಷ್ಟು ಸುತ್ತುನಿಧಿಗೆ ಶೇಕಡ 20 ರಷ್ಟು ಮೂಲಭೂತ ಸೌಕರ್ಯಕ್ಕೆ ಮತ್ತು ಶೇಕಡ 60 ರಷ್ಟು ಸಹಾಯಧನಕ್ಕೆ ನಿಗದಿ ಪಡಿಸಿ ಅರ್ಧವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಬೇಕಾಗಿರುವುದರಿಂದ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 17 ಎಸ್‌ಜೆವೈ 2011, ಬೆಂಗಳೂರು, ದಿನಾಂಕ : 06-07-2011

ಎಸ್‌ಜಿಎಸ್‌ವೈ ಯಡಿ 2011-12 ನೇ ಸಾಲಿಗೆ ಜಿಲ್ಲಾವಾರು ನಿಗದಿಪಡಿಸಿದ ಅರ್ಧ ವಾರ್ಷಿಕ ಆರ್ಥಿಕ ಮತ್ತು ಭೌತಿಕ ಗುರಿಯನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ 1, 2, 3 ಮತ್ತು 3ಎ ರಲ್ಲಿ, ತೆಗೆದುಕೊಳ್ಳಬಹುದಾದ ಆರ್ಥಿಕ ಚಟುವಟಿಕೆಗಳನ್ನು ಅನುಬಂಧ 4 ರಲ್ಲಿ, ತೆಗೆದುಕೊಳ್ಳಬಹುದಾದ ವಿವಿಧ ಚಟುವಟಿಕೆಗಳು ಅನುಬಂಧ-5 ರಲ್ಲಿ, ತರಬೇತಿ ನೀಡಲು ಗುರುತಿಸಿದ ತರಬೇತಿ ಕೇಂದ್ರಗಳನ್ನು ಅನುಬಂಧ-6 ರಲ್ಲಿ ನೀಡಲಾಗಿದೆ. ಇದರಂತೆ ಎಲ್ಲಾ ಜಿಲ್ಲಾ ಪಂಚಾಯತಿಗಳು ಕೆಳಕಂಡ ಷರತ್ತುಗಳನ್ವಯ ಕ್ರಮ ವಹಿಸುವುದು.

ಷರತ್ತುಗಳು:

- 2011-12ನೇ ಸಾಲಿನ ಜಿಲ್ಲಾ ಪಂಚಾಯತ್‌ಗಳಿಗೆ ಗುರಿ ನಿಗದಿಪಡಿಸುವಾಗ ಹಂಚಿಕೆಯ ಅರ್ಧಭಾಗಕ್ಕೆ ನೀಡಲಾಗಿದೆ. ಆದರೆ, ಜಿಲ್ಲಾ ಪಂಚಾಯತಿಗಳು ಕ್ರಿಯಾ ಯೋಜನೆ ತಯಾರಿಸುವಾಗ ಯೋಜನೆಯಡಿ ಲಭ್ಯವಿರುವ ಅನುದಾನ ಹಾಗೂ ಹಿಂದಿನ ಸಾಲುಗಳ ಭರಿಸಬೇಕಾದ ವೆಚ್ಚವಿದ್ದಲ್ಲಿ ಅದಕ್ಕೆ ಪ್ರಥಮ ಆದ್ಯತೆ ನೀಡಿ, ಅದಕ್ಕನುಗುಣವಾಗಿ ಕ್ರಿಯಾಯೋಜನೆ ತಯಾರಿಸಿ ಅನುಷ್ಠಾನಗೊಳಿಸತಕ್ಕದ್ದು.
- ಯೋಜನೆಯಡಿ ಆರ್ಥಿಕ, ಭೌತಿಕ, ಸಾಲ ನೀಡಿಕೆ (ಕ್ರೆಡಿಟ್ ಮೊಬಿಲೈಸೇಷನ್) ಮತ್ತು ವರ್ಗಾವಾರು ಗುರಿಯನ್ನು ನಿಗದಿಪಡಿಸಿರುವಂತೆ (ಅನುಬಂಧ 1, 2, 3 ಮತ್ತು 3ಎ) ಜಿಲ್ಲೆಗಳು ಪ್ರಗತಿಯನ್ನು ಸಾಧಿಸತಕ್ಕದ್ದು.
- 2011-12ನೇ ಸಾಲಿನಲ್ಲಿ ಪ್ರೈಮರಿ ಚಟುವಟಿಕೆಗೆ ಶೇಕಡ 70 ರಷ್ಟು (ಪ್ರೈಮರಿ ಚಟುವಟಿಕೆಗಳಾದ ಹೈನುಗಾರಿಕೆ ಮತ್ತು ಇತರೆ ಪ್ರಾಣಿಗಳ ಸಾಕಾಣಿಕೆ ಶೇಕಡ 60 ರಷ್ಟು ಹಾಗೂ ನೀರಾವರಿ ಮತ್ತು ಭೂಆಧಾರಿತ ಚಟುವಟಿಕೆಗಳಿಗೆ ಶೇಕಡ 10 ರಷ್ಟು) ಹಾಗೂ ಸೆಕೆಂಡರಿ ಮತ್ತು ಟರ್‌ಶಿಯರಿ ಚಟುವಟಿಕೆಗಳಿಗೆ ಶೇಕಡ 30 ರಷ್ಟನ್ನು ನಿಗದಿಪಡಿಸಲಾಗಿದೆ. ಜಿಲ್ಲೆಗಳು ಕ್ರಿಯಾ ಯೋಜನೆ ತಯಾರಿಸುವಾಗ, ಜಿಲ್ಲೆಯಲ್ಲಿನ ಪ್ರಮುಖ ಸೆಕೆಂಡರಿ ಮತ್ತು ಟರ್‌ಶಿಯರಿ ಚಟುವಟಿಕೆಗಳಿಗೆ ನಿಯಮಾನುಸಾರ ಆದ್ಯತೆ ನೀಡುವುದು.
- ಸದರಿ ಅರ್ಧ ವರ್ಷದಲ್ಲಿ ಸಹಾಯಧನವನ್ನು ಗುಂಪು ಫಲಾನುಭವಿಗಳಿಗೆ ಮಾತ್ರ ನೀಡುವುದು, ಆದರೆ ವೈಯಕ್ತಿಕ ಅಂಗವಿಕಲರಿಗೆ ಸಹಾಯಧನವನ್ನು ನೀಡಬಹುದು.
- ಎಸ್‌ಜಿಎಸ್‌ವೈ ಮಾರ್ಗಸೂಚಿಯಂತೆ, ಪರಿಶಿಷ್ಟ ಜಾತಿಗೆ ಶೇಕಡ 42, ಪರಿಶಿಷ್ಟ ಪಂಗಡಕ್ಕೆ ಶೇಕಡ 8, ಮಹಿಳೆಯರಿಗೆ ಶೇಕಡ 40, ಅಲ್ಪಸಂಖ್ಯಾತರಿಗೆ ಶೇಕಡ 15 ಹಾಗೂ ಅಂಗವಿಕಲರಿಗೆ ಶೇಕಡ 3 ರಷ್ಟು ಗುರಿಯನ್ನು ನೀಡಬೇಕಾಗಿದೆ. ಶೇಕಪಾವಾರು ಹಾಗೂ ವರ್ಗಾವಾರು ಸೌಲಭ್ಯವನ್ನು ಗಮನದಲ್ಲಿಟ್ಟುಕೊಂಡು ಕ್ರಿಯಾ ಯೋಜನೆ ತಯಾರಿಸುವುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಒಟ್ಟಾರೆ ಪ್ರಗತಿ ಕನಿಷ್ಠ 50 ರಷ್ಟು ಮತ್ತು ಅಂಗವಿಕಲರಿಗೆ ಹೆಚ್ಚಿನ ಆದ್ಯತೆ ನೀಡುವ ದೃಷ್ಟಿಯಿಂದ ಶೇಕಡ 4 ರಷ್ಟು ಗುರಿಯನ್ನು ನಿಗದಿಪಡಿಸಿದ್ದು, ಗರಿಷ್ಠ ಮಿತಿ ಇರುವುದಿಲ್ಲ.
- ಈಗಾಗಲೇ ಬ್ಯಾಂಕಿಗೆ ಕಳುಹಿಸಿದ ಅರ್ಜಿಗಳಿಗೆ ಸುತ್ತುನಿಧಿ ಮತ್ತು ಸಹಾಯಧನ ಬಿಡುಗಡೆಯಾಗದಿದ್ದಲ್ಲಿ ಅವುಗಳಿಗೆ ಆದ್ಯತೆ ನೀಡಿ ಕ್ರಿಯಾ ಯೋಜನೆಯಲ್ಲಿ ಅಳವಡಿಸತಕ್ಕದ್ದು.
- ಸರ್ಕಾರದಿಂದ ಅನುಮೋದನೆಯಾದ ತರಬೇತಿ ಸಂಸ್ಥೆಗಳಲ್ಲಿ ಮಾತ್ರ ತರಬೇತಿ ನೀಡುವುದು.

- ಮೂಲಭೂತ ಸೌಕರ್ಯದ ಅನುದಾನವನ್ನು ಈಗಾಗಲೇ ತೆಗೆದುಕೊಂಡಿರುವ ಕಟ್ಟಡ ಇತ್ಯಾದಿ ಇದ್ದಲ್ಲಿ ಅದಕ್ಕೆ ಆದ್ಯತೆ ನೀಡಿ ಪೂರ್ಣಗೊಳಿಸುವುದು. ಯಾವುದೇ ಹೊಸಕಟ್ಟಡ, ಇತ್ಯಾದಿಗಳನ್ನು ತೆಗೆದುಕೊಳ್ಳಬಾರದು.
- ತರಬೇತಿ ಮತ್ತು ಮೂಲಭೂತ ಸೌಕರ್ಯದ ನಿಧಿಯನ್ನು ಜಿಲ್ಲಾ ಪಂಚಾಯತಿಗಳೇ ಕಡ್ಡಾಯವಾಗಿ ಜಿಲ್ಲೆಯ ಅವಶ್ಯಕತೆಗನುಗುಣವಾಗಿ ನಿರ್ವಹಿಸುವುದು.
- ಕ್ರಿಯಾ ಯೋಜನೆ ರೂಪಿಸುವಾಗ ಕಾರ್ಯ ನಿರ್ವಹಿಸುತ್ತಿರುವ ಬೈಫ್ ಕೇಂದ್ರಗಳಿಗೆ ಪಾವತಿಸಬೇಕಾದ ಸೇವಾ ವೆಚ್ಚವನ್ನು ಅಳವಡಿಸಿಕೊಳ್ಳುವುದು.
- ಗ್ರಾಮೀಣ ಮಳಿಗೆ ನಿರ್ಮಾಣ (ವಿಲೇಜ್ ಹಾತ್) ಕ್ಕಾಗಿ ಬೇಕಾಗುವ ಪೂರ್ಣ ಅನುದಾನವನ್ನು ಎಸ್‌ಜಿಎಸ್‌ವೈ ಮೂಲಭೂತ ಸೌಕರ್ಯದಡಿ ಭರಿಸಲು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳತಕ್ಕದ್ದು. ಕೇಂದ್ರ ಸರ್ಕಾರದಿಂದ ವಿಲೇಜ್ ಹಾತ್ ನ ಎರಡನೇ ಕಂತಿನ ಅನುದಾನ ಬಂದ ನಂತರ ಈ ಅನುದಾನವನ್ನು ಎಸ್‌ಜಿಎಸ್‌ವೈ ಅನುಷ್ಠಾನಕ್ಕಾಗಿ ಉಪಯೋಗಿಸತಕ್ಕದ್ದು.
- ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಎಸ್‌ಜಿಎಸ್‌ವೈ ಸಭೆಯನ್ನು ಮಾರ್ಗಸೂಚಿಯನ್ವಯ ನಿಯತವಾಗಿ ಮಾಡುವುದು.
- ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ ಮಾಸಿಕ ಪ್ರಗತಿಯನ್ನು ನಿಗದಿತ ನಮೂನೆಗಳಲ್ಲಿ ಪ್ರತಿ ಮಾಹೆ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿ ಪ್ರತಿಯನ್ನು ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರು ಮಾಹಿತಿ ಸರಿಯಿರುವ ಬಗ್ಗೆ ದೃಢೀಕರಿಸಿ ಸ್ವಉದ್ಯೋಗ ಕಾರ್ಯಕ್ರಮಗಳ ಶಾಖೆಗೆ ತಲುಪಿಸುವುದು.
- 2010-11 ನೇ ಸಾಲಿನ ಆಡಿಟ್ ವರದಿಯನ್ನು ಜುಲೈ ತಿಂಗಳಲ್ಲಿ ಕಳುಹಿಸುವುದು.
- ಕೇಂದ್ರ ಸರ್ಕಾರಕ್ಕೆ ಎರಡನೇ ಕಂತಿನ ಹಣ ಬಿಡುಗಡೆಗೆ ಪ್ರಸ್ತಾವನೆ ಕಳುಹಿಸುವ ಮುನ್ನ ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಡಿ ಜಿಲ್ಲೆಗಳಲ್ಲಿ ಲಭ್ಯವಿರುವ ಹಣದ ಶೇಕಡ 60 ರಷ್ಟು ವೆಚ್ಚ ಮಾಡಿರಬೇಕು.
- ಜಿಲ್ಲಾಪಂಚಾಯತ್‌ಗಳಿಗೆ ಕೇಂದ್ರ ಸರ್ಕಾರದಿಂದ ಎಸ್‌ಜಿಎಸ್‌ವೈ ಯಡಿ 2ನೇ ಕಂತಿನ ಅನುದಾನ ನೇರವಾಗಿ ಸ್ವೀಕೃತವಾದಲ್ಲಿ ಅರ್ಧವರ್ಷಕ್ಕೆ ನೀಡಿರುವ ಗುರಿಯ ಆಧಾರದ ಮೇಲೆ ಉಳಿದ ಕ್ರಿಯಾ ಯೋಜನೆಯನ್ನು ಈ ಮಾದರಿಯಲ್ಲಿಯೇ ರೂಪಿಸಿ ಯೋಜನೆ ಅನುಷ್ಠಾನಗೊಳಿಸುವುದು.
- ಎನ್‌ಆರ್‌ಎಲ್‌ಎಂ ಅನುಷ್ಠಾನಕ್ಕೆ ಅಗತ್ಯವಿರುವ ಸಮುದಾಯ ಸಂಪನ್ಮೂಲ ವ್ಯಕ್ತಿ (ಕಮ್ಯೂನಿಟಿ ರಿಸೋರ್ಸ್ ಪರ್ಸನ್ಸ್) ಮತ್ತು ಸ್ವಸಹಾಯ ಸಂಘಗಳ ಲೆಕ್ಕ ಪತ್ರದ ನಿರ್ವಹಣೆಗಾರರ (ಬುಕ್ ಕೀಪರ್ಸ್) ತರಬೇತಿ ಮತ್ತು ಸರ್ಕಾರ ಅನುಮೋದನೆ ನೀಡುವ ವಿವಿಧ ಬಾಬ್ತುಗಳ ವೆಚ್ಚಗಳನ್ನು ಮೂಲಭೂತಸೌಕರ್ಯ ನಿಧಿಯಿಂದ ಭರಿಸುವುದು.
- ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಯವರು ನೀಡಿರುವ ಎನ್‌ಆರ್‌ಎಲ್‌ಎಂ ಯೋಜನೆಯ ಚೌಕಟ್ಟು (frame work) ಎರಡನೇ ಅಧ್ಯಾಯದಲ್ಲಿ ತಿಳಿಸಿರುವಂತೆ.
  - ಅ) ಸುತ್ತುನಿಧಿ ಮತ್ತು ಬಂಡವಾಳ ಸಹಾಯಧನಕ್ಕಾಗಿ ಕಡ್ಡಾಯವಾಗಿ ಶ್ರೇಣೀಕರಣವಾದ ಸ್ವಸಹಾಯ ಸಂಘಗಳ ಪ್ರಸ್ತಾವನೆಗಳನ್ನು ಮಾತ್ರ ಪರಿಗಣಿಸತಕ್ಕದ್ದು.
  - ಆ) ಆರ್ಥಿಕ ಚಟುವಟಿಕೆ ತೆಗೆದುಕೊಳ್ಳುವ ಸ್ವಸಹಾಯ ಸಂಘಗಳು ಸಲ್ಲಿಸಿದ ಅರ್ಜಿಗಳನ್ನು ಬ್ಯಾಂಕಿಗೆ ಕಳುಹಿಸುವಾಗ, ಸದರಿ ಸಂಘಗಳು ಈ ಹಿಂದೆ ಒಂದುಬಾರಿಯಾದರೂ ಸಾಲವನ್ನು ತೆಗೆದುಕೊಂಡು ಇದನ್ನು ಪೂರ್ಣವಾಗಿ ಮರುಸಂದಾಯ ಮಾಡಿಗಬೇಕು ಅಥವಾ ನಿಯತವಾಗಿ ಬ್ಯಾಂಕಿಗೆ ಮರುಪಾವತಿ ಮಾಡಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಡಾ: ಅಮಿತಾ ಪ್ರಸಾದ್

ಸರ್ಕಾರದ ಪ್ರಧಾನ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅನುಬಂಧ -1

ಸ್ವರ್ಣ ಜಯಂತಿ ಗ್ರಾಮಸ್ವರೋಜ್‌ಗಾರ್ ಯೋಜನೆಯಡಿ 2011-2012 (ಅರ್ಧವಾರ್ಷಿಕ)ನೇ ಸಾಲಿಗೆ ನಿಗದಿಗೊಳಿಸಿರುವ ಆರ್ಥಿಕ ಮತ್ತು ಭೌತಿಕ ಗುರಿ

ರೂ.ಲಕ್ಷಗಳಲ್ಲಿ

ಕ್ರ. ಸಂ.	ಜಿಲ್ಲಾ ಪಂಚಾಯತಿಯ ಹೆಸರು	2011-12ನೇ ಸಾಲಿನ ನಿಗದಿತ ಅನುದಾನ	2011-12ನೇ ಸಾಲಿನ ಅರ್ಧ ವಾರ್ಷಿಕ ಹಂಚಿಕೆ	ಮೂಲ ಭೂತ ಸೌಕರ್ಯ ಅಭಿವೃದ್ಧಿ ಗಾಗಿ	ತರಬೇತಿ ಗಾಗಿ	ಸುತ್ತು ನಿಧಿ	ಸಹಾಯಧನ ನೀಡಿಕೆಗಾಗಿ			ಸಾಲ ನೀಡಿಕೆ (ಪೂರ್ಣವರ್ಷಕ್ಕೆ) (ಕ್ರೆಡಿಟ್ ಮೊಬಿಲೈಜೇಷನ್)			ಸ್ವರೋಜ್‌ಗಾರಿಗಳ ಸಂಖ್ಯೆ			
							ಒಟ್ಟು	ಗುಂಪು ಸ್ವರೋಜ್ ಗಾರಿಗಳಿಗೆ	ವೈಯಕ್ತಿಕ ಅಂಗವಿಕಲ ಸ್ವರೋಜ್ ಗಾರಿಗಳಿಗೆ	ಒಟ್ಟು	ಗುಂಪು ಗಳಿಗೆ	ವೈಯಕ್ತಿಕ ಅಂಗವಿಕಲ ಸ್ವರೋಜ್ ಗಾರಿಗಳಿಗೆ	ಒಟ್ಟು ಸ್ವರೋಜ್ ಗಾರಿಗಳು	ಗುಂಪು ಗಳು	ಗುಂಪು ಸ್ವರೋಜ್ ಗಾರಿಗಳು **	ವೈಯಕ್ತಿಕ ಅಂಗವಿಕಲ ಸ್ವರೋಜ್ ಗಾರಿಗಳು
1	ಬಾಗಲಕೋಟೆ	272.61	136.31	27.26	13.63	13.63	81.78	78.51	3.27	572.49	549.59	22.90	975	79	942	33
2	ಬೆಂಗಳೂರು ಗ್ರಾ	150.43	75.21	15.04	7.52	7.52	45.13	43.32	1.81	315.90	303.26	12.64	538	43	520	18
3	ಬೆಂಗಳೂರು ನಗರ	116.07	58.03	11.61	5.80	5.80	34.82	33.43	1.39	243.74	233.99	9.75	415	33	[illegible]	14

4	ಬೆಳಗಾಂ	805.80	402.90	80.58	40.29	40.29	241.74	323.07	9.67	1692.18	1624.49	67.69	2882	232	2785	97
5	ಬಳ್ಳಾರಿ	640.27	320.13	64.03	32.01	32.01	192.08	184.40	7.68	1344.56	1290.78	53.78	2290	184	2213	77
6	ಬೀದರ್	453.77	226.89	45.38	22.69	22.69	136.13	130.69	5.45	952.92	914.81	38.12	1623	131	1568	54
7	ಬಿಜಾಪುರ	534.16	267.08	53.42	26.71	26.71	160.25	153.84	6.41	1121.74	1076.87	44.87	1910	154	1846	64
8	ಚಾಮರಾಜ ನಗರ	565.39	282.69	56.54	28.27	28.27	169.62	262.83	6.78	1187.31	1139.82	47.49	2022	163	1954	68
9	ಚಿಕ್ಕಮಗಳೂರು	256.75	128.37	25.67	12.84	12.84	77.02	73.94	3.08	539.17	517.60	21.57	918	74	887	31
10	ಚಿಕ್ಕಬಳ್ಳಾಪುರ	296.97	148.49	29.70	14.85	14.85	89.09	86.53	3.56	623.64	598.70	24.95	1062	86	1026	36
11	ಚಿತ್ರದುರ್ಗ	456.05	228.03	45.61	22.80	22.80	136.82	131.34	5.47	957.71	919.40	38.31	1631	131	1576	55
12	ದಕ್ಷಿಣ ಕನ್ನಡ	247.89	123.95	24.79	12.39	12.39	74.37	71.39	2.97	520.58	499,75	20.82	886	71	857	30
13	ದಾವಣಗೆರೆ	368.12	184.06	36.81	18.41	18.41	110.44	106.02	4.42	773.05	742.13	30.92	1316	106	1272	44
14	ಧಾರವಾಡ	229.64	114.82	22.96	11.48	11.48	68.89	66.14	2.76	482.24	462.95	19.29	821	66	794	28
15	ಗದಗ್	364,48	182.24	36.45	18.22	18.22	109.34	104.97	4.37	765.41	734.79	30.62	1303	105	1260	44
16	ಗುಲ್ಬರ್ಗಾ	458.01	229.01	45.80	22.90	22.90	137.40	131.91	5.50	961.83	923.35	38.47	1638	132	1583	55
17	ಹಾಸನ	332.72	166.36	33.27	16.64	16.64	99.82	95.82	3.99	698.71	670.76	27.95	1190	96	1150	40
18	ಹಾವೇರಿ	398.01	199.01	39.80	19.90	19.90	119.40	114.63	4.78	835.83	802.39	33.43	1423	115	1376	48
19	ಕೊಡಗು	93.53	46.77	9.35	4.68	4.68	28.06	26.94	1.12	196.42	188.56	7.86	334	27	323	11
20	ಕೋಲಾರ	335.52	167.76	33.55	16.78	16.78	100.66	96.63	4.03	704.59	676.41	28.18	1200	97	1160	40
21	ಕೊಪ್ಪಳ	572.65	286.33	57.27	28.63	28.63	171.80	164.92	6.87	1202.57	1154.47	48.10	2048	165	1979	69
22	ಮಂಡ್ಯ	433.12	216.56	43.31	21.66	21.66	129.94	124.74	5.20	909.55	873.17	36.38	1549	125	1497	52
23	ಮೈಸೂರು	527.89	263.95	52.79	26.39	26.39	158.37	152.03	6.33	1108.58	1064.23	44.34	1888	152	1824	63
24	ರಾಯಚೂರು	539.25	269.63	53.93	26.96	26.96	161.78	155.30	6.47	1132.43	1087.13	45.30	1928	155	1864	65
25	ರಾಮನಗರ	269.33	134.67	26.93	13.47	13.47	80.80	77.57	3.23	565.60	542.98	22.62	963	78	931	32
26	ಶಿವಮೊಗ್ಗ	458.71	229.35	45.87	22.94	22.94	137.61	132.11	5.50	963.28	924.75	38.53	1640	132	1585	55
27	ತುಮಕೂರು	679.95	339.97	67.99	34.00	34.00	203.98	195.82	8.16	1427.89	1370.77	57.12	2431	196	2350	82
28	ಉಡುಪಿ	201.81	100.91	20.18	10.09	10.09	60.54	58.12	2.42	423.81	406.86	16.95	722	58	697	24
29	ಉತ್ತರ ಕನ್ನಡ	285.96	142.98	28.60	14.30	14.30	85.79	82.36	3.43	600.52	576.50	24.02	1023	82	988	34
30	ಯಾದಗಿರಿ	205.79	102.89	20.58	10.29	10.29	61.74	59.27	2.47	432.15	414.87	17.29	736	59	711	25
		1550.67	5775.33	1155.07	577.53	577.53	3465.20	3326.59	138.61	24256.40	3286.14	970.26	41305	3327	39919	1386

** ಪ್ರತಿ ಗುಂಪಿಗೆ 12 ಸ್ವರೋಜ್‌ಗಾರಿಗಳೆಂದು ಅಂದಾಜಿಸಲಾಗಿದೆ.

ಜಿಲ್ಲೆಗಳು ಗುಂಪು ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದು, ವೈಯಕ್ತಿಕ – ಅಂಗವಿಕಲ ಸ್ವರೋಜ್‌ಗಾರಿಗಳಿಗೆ ಮಾತ್ರ

ಅನುಬಂಧ -2

ಸ್ವರ್ಣ ಜಯಂತಿ ಗ್ರಾಮಸ್ವರೋಜ್‌ಗಾರ್ ಯೋಜನೆಯಡಿ 2011-2012 (ಅರ್ಧವಾರ್ಷಿಕ)ನೇ ಸಾಲಿಗೆ ನಿಗದಿಗೊಳಿಸಿರುವ ಆರ್ಥಿಕ ಮತ್ತು ಭೌತಿಕ ಗುರಿ

ರೂ.ಲಕ್ಷಗಳಲ್ಲಿ

ಕ್ರ. ಸಂ.	ಜಿಲ್ಲಾ ಪಂಚಾಯಿತಿಯ ಹೆಸರು	2011-12ನೇ ಸಾಲಿನ ಅನುದಾನದ ಹಂಚಿಕೆ			2011-12ನೇ ಸಾಲಿನ ಅರ್ಧವಾರ್ಷಿಕ ಹಂಚಿಕೆ			ವರ್ಗಾವಾರು ನಿಗದಿತ ಅನುದಾನ (ಸಹಾಯಧನ)						
		ಒಟ್ಟು	ಕೇಂದ್ರದ ಪಾಲು	ರಾಜ್ಯದ ಪಾಲು	ಒಟ್ಟು	ಕೇಂದ್ರದ ಪಾಲು	ರಾಜ್ಯದ ಪಾಲು	ಒಟ್ಟು	ಪ.ಜಾತಿ	ಪ.ವರ್ಗ	ಅಲ್ಪಸಂಖ್ಯಾತರು	ಇತರರು	ಮಹಿಳೆಯರು	ಅಂಗವಿಕಲ (ವೈಯಕ್ತಿಕ)
1	ಬಾಗಲಕೋಟೆ	272.61	204.46	68.15	136.31	102.23	34.08	81.78	34.35	6.54	12.27	25.35	32.71	3.27
2	ಬೆಂಗಳೂರು ಗ್ರಾ	150.43	112.82	37.61	75.21	56.41	18.80	45.13	18.95	3.61	6.77	13.99	18.05	1.81
3	ಬೆಂಗಳೂರು ನಗರ	116.07	87.05	29.02	58.03	43.53	14.51	34.82	14.62	2.79	5.22	10.79	13.93	1:39
4	ಬೆಳಗಾಂ	805.80	604.35	201.45	402.90	302.18	100.73	241.74	101.53	19.34	36.26	74.94	96.70	9.67
5	ಬಳ್ಳಾರಿ	640.27	480.20	160.07	320.13	240.10	80.03	192.08	80.67	15.37	28.81	59.54	76.83	7.68
6	ಬೀದರ್	453.77	340.33	113.44	226.89	170.17	56.72	136.13	57.18	10.89	20.42	42.20	54.45	5.45
7	ಬಿಜಾಪುರ	534.16	400.62	133.54	267.08	200.31	66.77	160.25	67.30	12.82	24.04	49.68	64.10	6.41
8	ಚಾಮರಾಜನಗರ	565.39	424.04	141.35	282.69	212.02	70.67	169.62	71.24	13.57	25.44	52.58	67.85	6.78
9	ಚಿಕ್ಕಮಗಳೂರು	256.75	192.56	64.19	128.37	96.28	32.09	77.02	32.35	6.16	11.55	23.88	30.81	3.08
10	ಚಿಕ್ಕಬಳ್ಳಾಪುರ	296.97	222.73	74.24	148.49	111.37	37.12	89.09	37.42	7.13	13.36	27.62	35.64	3.56
11	ಚಿತ್ರದುರ್ಗ	456.05	342.04	114.01	228.03	171.02	57.01	136.82	57.46	10.95	20.52	42.41	54.73	5.47
12	ದಕ್ಷಿಣ ಕನ್ನಡ	247.89	185.92	61.97	123.95	92.96	30.99	74.37	31.23.	5.95	11.16	23.05	29.75	2.97
13	ದಾವಣಗೆರೆ	368.12	276.09	92.03	184.06	138.05	46.02	110.44	46.38	8.83	16.57	34.24	44.17	4.42
14	ಧಾರವಾಡ	229.64	172.23	57.41	114.82	86.12	28.71	68.89	28.93	5.51	10.33	21.36	27.56	2.76
15	ಗದಗ್	364,48	273.36	91.12	182.24	136.68	45.56	109.34	45.92	8.75	16.40	33.90	43.74	4.37
16	ಗುಲ್ಬರ್ಗಾ	458.01	343.51	114.50	229.01	171.76	57.25	137.40	57.71	10.99	20.61	42.60	54.96	5.50
17	ಹಾಸನ	332.72	249.54	83.18	166.36	124.77	41.59	99.82	41.92	7.99	14.97	30.94	39.93	3.99
18	ಹಾವೇರಿ	398.01	298.51	99.50	199.01	149.26	49.75	119.40	50.15	9.55	17.91	37.02	47.76	4.78
19	ಕೊಡಗು	93.53	70.15	23.38	46.77	35.08	11.69	28.06	11.79	2.24	4.21	8.70	11.22	1.12
20	ಕೋಲಾರ	335.52	251.64	83.88	167.76	125.82	41.94	100.66	42.28	8.05	15.10	31.20	40.26	4.03
21	ಕೊಪ್ಪಳ	572.65	429.49	143.16	286.33	214.75	71.58	171.80	72.15	13.74	25.77	53.26	68.72	6.87
22	ಮಂಡ್ಯ	433.12	324.84	108.28	216.56	162.42	54.14	129.94	54.57	10.39	19.49	40.28	51.97	5.20
23	ಮೈಸೂರು	527.89	395.92	131.97	263.95	197.96	65.99	158.37	66.51	12.67	23.76	49.09	63.35	6.33
24	ರಾಯಚೂರು	539.25	404.44	134.81	269.63	202.22	67.41	161.78	67.95	12.94	24.27	50.15	64.71	6.47
25	ರಾಮನಗರ	269.33	202.00	67.33	134.67	101.00	33.67	80.80	33.94	6.46	12.12	25.05	32.32	3.23
26	ಶಿವಮೊಗ್ಗ	458.71	344.03	114.68	229.35	172.02	57.34	137.61	57.80	11.01	20.64	42.66	55.04	5.50
27	ತುಮಕೂರು	679.95	509.96	169.99	339.97	254.98	84.99	203.98	85.67	16.32	30.60	63.24	81.59	8.16
28	ಉಡುಪಿ	201.81	151.36	50.45	100.91	75.68	25.23	60.54	25.43	4.84	9.08	18.77	24.22	2.42
29	ಉತ್ತರ ಕನ್ನಡ	285.96	214.47	71.49	142.98	107.24	35.75	85.79	36.03	6.86	12.87	26.59	34.32	3.43
30	ಯಾದಗಿರಿ	205.79	154.34	51.45	102.89	77.17	25.72	61.74	25.93	4.94	9.26	19.14	24.69	2.47
		11550.67	8663.00	2887.67	5775.33	4331.50	1443.83	3465.20	1455.38	277.22	519.78	1074.21	1386.08	138.61

ಅನುಬಂಧ -3

ಸ್ವರ್ಣ ಜಯಂತಿ ಗ್ರಾಮಸ್ವರೋಜ್‌ಗಾರ್ ಯೋಜನೆಯಡಿ 2011-2012 (ಅರ್ಧವಾರ್ಷಿಕ)ನೇ ಸಾಲಿಗೆ ನಿಗದಿಗೊಳಿಸಿರುವ ವರ್ಗವಾರು ಭೌತಿಕ ಗುರಿ

ಕ್ರ ಸಂ.	ಜಿಲ್ಲಾ ಪಂಚಾಯತಿಯ ಹೆಸರು	ಗುಂಪುಗಳು (ಸಂಖ್ಯೆಗಳಲ್ಲಿ)						ಗುಂಪು ಸ್ವರೋಜ್‌ಗಾರಿಗಳು (ಸಂಖ್ಯೆಗಳಲ್ಲಿ)						ದೈಹಿಕ ಅಂಗವಿಕಲರು	ಒಟ್ಟು
		ಒಟ್ಟು	ಪ. ಜಾತಿ	ಪ. ಪಂಗಡ	ಅಲ್ಪ ಸಂಖ್ಯಾತರು	ಇತರರು	ಮಹಿಳೆಯರು	ಒಟ್ಟು	ಪ. ಜಾತಿ	ಪ. ಪಂಗಡ	ಅಲ್ಪ ಸಂಖ್ಯಾತರು	ಇತರರು	ಮಹಿಳೆಯರು		
1	ಬಾಗಲಕೋಟೆ	79	33	6	12	24	31	942	396	75	141	292	377	32.71	975
2	ಬೆಂಗಳೂರು ಗ್ರಾ	43	18	3	6	13	17	520	218	42	78	161	208	18	538
3	ಬೆಂಗಳೂರು ನಗರ	33	14	3	5	10	13	401	168	32	60	124	160	14	415
4	ಬೆಳಗಾಂ	232	97	19	35	72	93	2785	1170	223	418	863	1114	97	2882
5	ಬಳ್ಳಾರಿ	184	77	15	28	57	74	2213	929	177	332	686	885	77	2290
6	ಬೀದರ್	131	55	10	20	41	52	1568	659	125	235	486	627	54	1623
7	ಬಿಜಾಪುರ	154	65	12	23	48	62	1846	775	148	277	572	738	64	1910
8	ಚಾಮರಾಜನಗರ	163	68	13	24	50	65	1954	821	156	293	606	782	68	2022
9	ಚಿಕ್ಕಮಗಳೂರು	74	31	6	11	23	30	887	373	71	133	275	355	31	918
10	ಚಿಕ್ಕಬಳ್ಳಾಪುರ	86	36	7	13	27	34	1026	431	82	154	318	411	36	1062
11	ಚಿತ್ರದುರ್ಗ	131	55	11	20	41	53	1576	662	126	236	489	630	55	1631
12	ದಕ್ಷಿಣ ಕನ್ನಡ	71	30	6	11	22	29	857	360	69	129	266	343	30	886
13	ದಾವಣಗೆರೆ	106	45	8	16	33	42	1272	534	102	191	394	509	44	1316
14	ಧಾರವಾಡ	66	28	5	10	21	26	794	333	63	119	246	317	28	821
15	ಗದಗ್	105	44	8	16	33	42	1260	529	101	189	390	504	44	1303
16	ಗುಲ್ಬರ್ಗಾ	132	55	11	20	41	53	1583	665	127	237	491	633	55	1638
17	ಹಾಸನ	96	40	8	14	30	38	1150	483	92	172	356	460	40	1190
18	ಹಾವೇರಿ	115	48	9	17	36	46	1376	578	110	206	426	550	48	1423
19	ಕೊಡಗು	27	11	2	4	8	11	323	136	26	48	100	129	11	334
20	ಕೋಲಾರ	97	41	8	14	30	39	1160	487	93	174	359	464	40	1200
21	ಕೊಪ್ಪಳ	165	69	13	25	51	66	1979	831	158	297	614	792	69	2048
22	ಮಂಡ್ಯ	125	52	10	19	39	50	1497	629	120	225	464	599	52	1549
23	ಮೈಸೂರು	152	64	12	23	47	61	1824	766	146	274	566	730	63	1888
24	ರಾಯಚೂರು	155	65	12	23	48	62	1864	783	149	280	578	745	65	1928
25	ರಾಮನಗರ	78	33	6	12	24	31	931	391	74	140	289	372	32	963
26	ಶಿವಮೊಗ್ಗ	132	55	11	20	41	53	1585	666	127	238	491	634	55	1640
27	ತುಮಕೂರು	196	82	16	29	61	78	2350	987	188	352	728	940	82	2431
28	ಉಡುಪಿ	58	24	5	9	18	23	697	293	56	105	216	279	24	722
29	ಉತ್ತರ ಕನ್ನಡ	82	35	7	12	26	33	988	415	79	148	306	395	34	1023
30	ಯಾದಗಿರಿ	59	25	5	9	18	24	711	299	57	107	220	284	25	736
		3327	1397	266	499	1031	1331	39919	16766	3194	5988	12375	15968	1386	41305

ಅನುಬಂಧ –3ಎ

ಸ್ವರ್ಣ ಜಯಂತಿ ಗ್ರಾಮಸ್ವರೋಜ್‌ಗಾರ್ ಯೋಜನೆಯಡಿ 2011–2012 (ಅರ್ಧವಾರ್ಷಿಕ)ನೇ ಸಾಲಿಗೆ ನಿಗದಿಗೊಳಿಸಿರುವ ಗುರಿ

ಕ್ರ. ಸಂ.	ಜಿಲ್ಲಾ ಪಂಚಾಯತಿಯ ಹೆಸರು	ಸುತ್ತು ನಿಧಿ		ತರಬೇತಿ		ರಚಿಸಬೇಕಾದ ಸ್ವಸಹಾಯ ಸಂಘಗಳ	ಗ್ರೇಡ್ 1 ಮತ್ತು 2 ರ ಹಂತಕ್ಕೆ ತರಬೇಕಾದ ಸ್ವಸಹಾಯ ಸಂಘಗಳ ಗುರಿ		ಅರ್ಜಿಗಳನ್ನು ಬ್ಯಾಂಕುಗಳಿಗೆ ಕಳುಹಿಸಬೇಕಾದ ಗುರಿ	ಫೆಡರೇಷನ್ ರಚನೆ ಮಾಡಬೇಕಾದ ಗುರಿ			ಬಡತನ ರೇಖೆಯಿಂದ ಮೇಲೆ ಬರಬೇಕಾದವರ ಗುರಿ (ಬಿಪಿಎಲ್ ನಿಂದ ಎಪಿಎಲ್ ಗೆ)
		ಆರ್ಥಿಕ ಗುರಿ (ರೂ.ಲಕ್ಷಗಳಲ್ಲಿ)	ಭೌತಿಕ ಗುರಿ (ಎಸ್‌ಹೆಚ್‌ಜಿಗಳು)	ಆರ್ಥಿಕ ಗುರಿ (ರೂ.ಲಕ್ಷಗಳಲ್ಲಿ)	ಭೌತಿಕ ಗುರಿ (ಸ್ವರೋಜ್‌ಗಾರಿಗಳು)		ಗ್ರೇಡ್–1 ಗುರಿ	ಗ್ರೇಡ್–2 ಗುರಿ		ಒಟ್ಟು ಗುರಿ	ಪ್ರತಿ ತಾಲ್ಲೂಕಿಗೆ ಒಂದರಂತೆ	ಪ್ರತಿ ಹೋಬಳಿಗೆ ಮೂರರಂತೆ	
1	ಬಾಗಲಕೋಟೆ	13.63	136	13.63	975	157	136	79	94	60	6	54	765
2	ಬೆಂಗಳೂರು ಗ್ರಾ	7.52	75	7.52	538	87	75	43	52	55	4	51	591
3	ಬೆಂಗಳೂರು ನಗರ	5.80	58	5.80	415	67	58	33	40	55	4	51	324
4	ಬೆಳಗಾಂ	40.29	403	40.29	2882	464	403	232	278	115	10	105	2270
5	ಬಳ್ಳಾರಿ	32.01	320	32.01	2290	369	320	184	221	88	7	81	1805
6	ಬೀದರ್	22.69	227	22.69	1623	261	227	131	157	95	5	90	1279
7	ಬಿಜಾಪುರ	26.71	267	26.71	1910	308	267	154	185	59	5	54	1505
8	ಚಾಮರಾಜನಗರ	28.27	283	28.27	2022	326	283	163	195	52	4	48	1591
9	ಚಿಕ್ಕಮಗಳೂರು	12.84	128	12.84	918	148	128	74	89	103	7	96	722
10	ಚಿಕ್ಕಬಳ್ಳಾಪುರ	14.85	148	14.85	1062	171	148	86	103	90	6	84	971
11	ಚಿತ್ರದುರ್ಗ	22.80	228	22.80	1631	263	228	131	158	72	6	66	1285
12	ದಕ್ಷಿಣ ಕನ್ನಡ	12.39	124	12.39	886	143	124	71	86	56	5	51	698
13	ದಾವಣಗೆರೆ	18.41	184	18.41	1316	212	184	106	127	78	6	72	1034
14	ಧಾರವಾಡ	11.48	115	11.48	821	132	115	66	79	47	5	42	649
15	ಗದಗ್	18.22	182	18.22	1303	210	182	105	126	38	5	33	1028
16	ಗುಲ್ಬರ್ಗಾ	22.90	229	22.90	1638	264	229	132	158	154	10	144	1310
17	ಹಾಸನ	16.64	166	16.64	1190	192	166	96	115	122	8	114	936
18	ಹಾವೇರಿ	19.90	199	19.90	1423	229	199	115	138	64	7	57	1120
19	ಕೊಡಗು	4.68	47	4.68	334	54	47	27	32	51	3	48	263
20	ಕೋಲಾರ	16.78	168	16.78	1200	193	168	97	116	80	5	75	809
21	ಕೊಪ್ಪಳ	28.63	286	28.63	2048	330	286	165	198	64	4	60	1615
22	ಮಂಡ್ಯ	21.66	217	21.66	1549	249	217	125	150	100	7	93	1217
23	ಮೈಸೂರು	26.39	264	26.39	1888	304	264	152	182	106	7	99	1487
24	ರಾಯಚೂರು	26.96	270	26.96	1928	311	270	155	186	116	5	111	1517
25	ರಾಮನಗರ	13.47	135	13.47	963	155	135	78	93	58	4	54	590
26	ಶಿವಮೊಗ್ಗ	22.94	229	22.94	1640	264	229	132	159	127	7	120	1291
27	ತುಮಕೂರು	34.00	340	34.00	2431	292	340	196	235	160	10	150	1915
28	ಉಡುಪಿ	10.09	101	10.09	722	116	101	58	70	30	3	27	569
29	ಉತ್ತರ ಕನ್ನಡ	14.30	143	14.30	1023	165	143	82	99	116	11	105	808
30	ಯಾದಗಿರಿ	10.29	103	10.29	736	119	103	59	71	116	11	105	563
		577.53	5775	577.53	41305	6653	5775	3327	3992	2411	176	2235	32587

ಅನುಬಂಧ-4

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿಯಲ್ಲಿ 2011-12ನೇ ಸಾಲಿನಲ್ಲಿ ಹೈನುಗಾರಿಕೆ ಜೊತೆಗೆ ಗುರುತಿಸಿದ ಇತರೆ ಆರ್ಥಿಕ ಚಟುವಟಿಕೆಗಳು.

ಕ್ರ.ಸಂ.	ಜಿಲ್ಲೆ	ಆರ್ಥಿಕ ಚಟುವಟಿಕೆಗಳು
1	ಬಾಗಲಕೋಟೆ	ಇಳಕಲ್ ಸೀರೆ ನೇಯ್ಗೆ
2	ಬೆಂಗಳೂರು (ನ)	ಕೋಳಿ ಸಾಕಾಣಿಕೆ
		ಮಷ್ರೋದ್ಯಮ ಮತ್ತು ಅಣಬೆ ಬೇಸಾಯ
		ಕುಂಬಾರಿಕೆ
		ಆಹಾರ ಉತ್ಪನ್ನ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ನೇಯ್ಗೆ
		ಕೈಮಗ್ಗ
3	ಬೆಂಗಳೂರು (ಗ್ರಾ)	ಮಷ್ರೋದ್ಯಮ
		ರೇಷ್ಮೆ, ರೇಷ್ಮೆ ನೇಯ್ಗೆ
		ಪ್ಲಾಸ್ಟಿಕ್ ಹೂ
		ಸಿದ್ಧ ಉಡುಪು
		ಗೊಂಬೆ ತಯಾರಿಕೆ
		ಕುಂಬಾರಿಕೆ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ಕಾಂಡಿಮೆಂಟ್ಸ್ ಮತ್ತು ಸಂಚಾರಿ ಉಪಾಹಾರ
4	ಬಳ್ಳಾರಿ	ಹಪ್ಪಳ ತಯಾರಿಕೆ
		ಲಂಬಾಣಿ ಉಡುಪು
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ಬಾಳೆ ನಾರಿನ ಉತ್ಪನ್ನ
		ಕಲ್ಲು ಕೆತ್ತನೆ
5	ಬೆಳಗಾಂ	ಕೊಲ್ಲಾಪುರಿ ಚಪ್ಪಲಿಗಳು
		ಸೆಣಬಿನ ಉತ್ಪನ್ನಗಳು
		ಕುಂಬಾರಿಕೆ
		ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ
6	ಬೀದರ್	ಬಿದರಿವೇರ್
		ಗಂಧದ ಮತ್ತು ಕರಕುಶಲ ವಸ್ತುಗಳ ತಯಾರಿಕೆ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
7	ಬಿಜಾಪುರ	ಕತ್ತಾಳೆ ಉತ್ಪನ್ನಗಳು
		ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ
		ಗನ್ನಿ ಬ್ಯಾಗ್
8	ಚಾಮರಾಜನಗರ	ಸೀಸಲ್ ಫೈಬರ್ ಕ್ರಾಫ್ಟ್
		ತೆಂಗಿನ ನಾರಿನ ಉತ್ಪನ್ನ
		ಕೈ ಕಸೂತಿ
		ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ
9	ಚಿತ್ರದುರ್ಗ	ಮೊಳಕಾಲ್ಮೂರು ಸೀರೆ (ರೇಷ್ಮೆ)
		ಬಾಳೆ ನಾರಿನ ವಸ್ತುಗಳ ತಯಾರಿಕೆ
		ಕಂಬಳಿ ನೇಯ್ಗೆ
		ತೆಂಗಿನ ನಾರಿನ ಉತ್ಪನ್ನ
		ತರಕಾರಿ, ಹಣ್ಣು ಮತ್ತು ಹೂವು ಶೈತ್ಯಾಗಾರ
		ತೆಂಗಿನ ಪೊರಕೆ
		ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ
10	ಚಿಕ್ಕಮಗಳೂರು	ಜೇನು ಸಾಕಾಣಿಕೆ

		ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ
		ಗುಡಿ ಕೈಗಾರಿಕೆ
11	ಚಿಕ್ಕಬಳ್ಳಾಪುರ	ಸಾಮುದಾಯಿಕ ಕೃಷಿ ತೋಟಗಾರಿಕೆ
		ಹುಣಸೆ ಸಂಸ್ಕರಣಾ ಘಟಕ
		ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ
		ಬಯೋ ಫರ್ಟಿಲೈಸರ್ – ಗೊಬ್ಬರ ಉತ್ಪನ್ನಗಳು
		ನೀರು ಪರೀಕ್ಷಾ ಘಟಕ
		ಮಾರ್ಜಕ
		ಪೌಷ್ಠಿಕ ಆಹಾರ
12	ಧಾರವಾಡ	ಕಸೂತಿ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
13	ದಾವಣಗೆರೆ	ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ಅಗರಬತ್ತಿ
14	ದಕ್ಷಿಣ ಕನ್ನಡ	ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ
		ಬಲೆ ನೇಯ್ಗೆ
		ಸಿದ್ಧ ಉಡುಪು ತಯಾರಿಕೆ
		ಫಿನಾಯಿಲ್, ಮಾರ್ಜಕ ತಯಾರಿಕೆ ಮತ್ತು ಸಿದ್ಧ ಉಡುಪು
		ಮೊಲ ಸಾಕಾಣಿಕೆ
15	ಗದಗ್	ನೇಯ್ಗೆ
		ಬಡಗಿ
		ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ
		ಪುಷ್ಪೋದ್ಯಮ
16	ಗುಲ್ಬರ್ಗ	ರೇಷ್ಮೆ
		ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ
17	ಹಾಸನ	ಕಾಫಿ ಕಾಂಡದ ವಿವಿಧ ರೀತಿಯ ಗೃಹಲಂಕಾರ ವಸ್ತುಗಳು
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ಕುಂಬಾರಿಕೆ
18	ಹಾವೇರಿ	ಕುಂಬಾರಿಕೆ
		ನೇಯ್ಗೆ
		ಕಂಬಳಿ ನೇಯ್ಗೆ
		ಆಹಾರ (ಶ್ಯಾವಿಗೆ)
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ಅಗರಬತ್ತಿ
19	ಕೊಡಗು	ಔಷಧ ಮತ್ತು ಸುಗಂಧ ಸಸ್ಯಗಳು, ಜೇನು ಸಾಕಾಣಿಕೆ
		ಫ್ಯಾಶನ್ ಡಿಸೈನ್
		ಪುಷ್ಪೋದ್ಯಮ
		ಎರೆಹುಳು ಗೊಬ್ಬರ ತಯಾರಿಕೆ
20	ಕೋಲಾರ	ಸಾಮುದಾಯಿಕ ಕೃಷಿ ತೋಟಗಾರಿಕೆ
		ಹುಣಸೆ ಸಂಸ್ಕರಣಾ ಘಟಕ
		ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ
		ಬಯೋ ಫರ್ಟಿಲೈಸರ್ – ಗೊಬ್ಬರ ಉತ್ಪನ್ನಗಳು
		ನೀರು ಪರೀಕ್ಷಾಘಟಕ
		[illegible]
		[illegible]

21	ಕೊಪ್ಪಳ	ಕಿನ್ನಾಳಗೊಂಬೆ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
22	ಮೈಸೂರು	ಮೆಣಸಿನಕಾಯಿಪುಡಿ
		ಅಗರಬತ್ತಿ
		ಕುಂಬಾರಿಕೆ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ಕಸೂತಿ
23	ಮಂಡ್ಯ	ವಿದ್ಯುತ್ ಮಗ್ಗ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ಕೈಮಗ್ಗ, ವಿದ್ಯುತ್ ಮಗ್ಗ
		ಕೈಮಗ್ಗ
24	ರಾಯಚೂರು	ರೇಷ್ಮೆ ಹೂವಿನ ಹಾರ ತಯಾರಿಕೆ
		ಎರೆಹುಳು ಗೊಬ್ಬರ ತಯಾರಿಕೆ
		ಅಗರಬತ್ತಿ
		ಫ್ಯಾಶನ್ ಡಿಸೈನ್
25	ರಾಮನಗರ	ಪುಷ್ಪೋದ್ಯಮ
		ರೇಷ್ಮೆ
		ಪ್ಲಾಸ್ಟಿಕ್ ಹೂ
		ಸಿದ್ಧ ಉಡುಪು
		ಗೊಂಬೆ ತಯಾರಿಕೆ
		ಕುಂಬಾರಿಕೆ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ಕಾಂಡಿಮೆಂಟ್ಸ್ ಮತ್ತು ಸಂಚಾರಿ ಉಪಹಾರ
		ರೇಷ್ಮೆ ನೇಯ್ಗೆ
26	ಶಿವಮೊಗ್ಗ	ಲಾವಂಚ ಎಣ್ಣೆ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
27	ತುಮಕೂರು	ರೇಷ್ಮೆ ನೇಯ್ಗೆ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ನಾರಿನ ಉತ್ಪನ್ನಗಳು
		ಉಣ್ಣೆ ನೇಯ್ಗೆ
28	ಉತ್ತರ ಕನ್ನಡ	ಕುಂಬಾರಿಕೆ
		ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ಬಿದರು ಉತ್ಪನ್ನ
29	ಉಡುಪಿ	ಎರೆಹುಳು ಗೊಬ್ಬರ ತಯಾರಿಕೆ
		ಫ್ಯಾಶನ್ ಡಿಸೈನ್
		ಟೆರಾಕೋಟ
30	ಯಾದಗಿರಿ	ರೇಷ್ಮೆ
		ಫ್ಯಾಶನ್ ಡಿಸೈನ್
		ಎರೆಹುಳು ಗೊಬ್ಬರ ತಯಾರಿಕೆ

ಅನುಬಂಧ-5

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ 2011-12ನೇ ಸಾಲಿನಲ್ಲಿ ನಿಗದಿಪಡಿಸಿದ ಚಟುವಟಿಕೆಗಳು ಗುರಿ (ಅರ್ಧ ವಾರ್ಷಿಕ)

ಕ್ರ ಸಂ.	ಜಿಲ್ಲಾ ಪಂಚಾಯತಿಯ ಹೆಸರು	ಚಟುವಟಿಕೆಗಳು			
		ಪ್ರೈಮರಿ (ಶೇ. 70)		ಸೆಕೆಂಡರಿ ಮತ್ತು ಟರ್‌ಶಿಯರಿ (ಶೇ. 30)	
		ಹೈನುಗಾರಿಕೆ, ಕುರಿ ಕೋಳಿ, ಹಂದಿ ಸಾಕಾಣಿಕೆಗಳು (ಶೇ. 60 ರಷ್ಟು)	ನೀರಾವರಿ ಮತ್ತು ಭೂಆಧಾರಿತ ಚಟುವಟಿಕೆ (ಶೇ. 10 ರಷ್ಟು)	ಜಿಲ್ಲೆಯಲ್ಲಿನ ಪ್ರಮುಖ ಸೆಕೆಂಡರಿ ಮತ್ತು ಟರ್‌ಶಿಯರಿ ಚಟುವಟಿಕೆಗಳಿಗೆ	ಒಟ್ಟು
1	2	3	4	5	6
1	ಬಾಗಲಕೋಟೆ	47	8	24	79
2	ಬೆಂಗಳೂರು ಗ್ರಾ	26	4	13	43
3	ಬೆಂಗಳೂರು ನಗರ	20	3	10	33
4	ಬೆಳಗಾಂ	139	23	70	232
5	ಬಳ್ಳಾರಿ	110	18	55	184
6	ಬೀದರ್	79	13	39	131
7	ಬಿಜಾಪುರ	92	15	46	154
8	ಚಾಮರಾಜನಗರ	98	16	49	163
9	ಚಿಕ್ಕಮಗಳೂರು	44	7	22	74
10	ಚಿಕ್ಕಬಳ್ಳಾಪುರ	52	9	26	86
11	ಚಿತ್ರದುರ್ಗ	79	13	39	131
12	ದಕ್ಷಿಣ ಕನ್ನಡ	43	7	21	71
13	ದಾವಣಗೆರೆ	64	11	32	106
14	ಧಾರವಾಡ	40	7	20	66
15	ಗದಗ್	63	11	32	105
16	ಗುಲ್ಬರ್ಗಾ	79	13	40	132
17	ಹಾಸನ	58	10	29	96
18	ಹಾವೇರಿ	69	12	35	115
19	ಕೊಡಗು	16	3	8	27
20	ಕೋಲಾರ	58	10	29	97
21	ಕೊಪ್ಪಳ	99	17	50	165
22	ಮಂಡ್ಯ	75	13	38	125
23	ಮೈಸೂರು	91	15	46	152
24	ರಾಯಚೂರು	93	16	47	155
25	ರಾಮನಗರ	47	8	23	78
26	ಶಿವಮೊಗ್ಗ	79	13	40	132
27	ತುಮಕೂರು	118	20	59	196
28	ಉಡುಪಿ	35	6	17	58
29	ಉತ್ತರ ಕನ್ನಡ	49	8	25	82
30	ಯಾದಗಿರಿ	35	6	18	59
	ಒಟ್ಟು	1996	333	998	3327

ಅನುಬಂಧ-6

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಲ್ಲಿ 2011-12ನೇ ಸಾಲಿಗೆ ಗುರುತಿಸಿದ ತರಬೇತಿ ಸಂಸ್ಥೆಗಳು ಮತು ವಿಳಾಸ

ಕ್ರ.ಸಂ.	ಜಿಲ್ಲೆಯ ಹೆಸರು	ತರಬೇತಿ ಸಂಸ್ಥೆಗಳ ಹೆಸರು ಮತ್ತು ವಿಳಾಸ
1	ಬಾಗಲಕೋಟೆ	1) ಬಿ.ವಿ.ವಿ. ಸಂಘ ಇಂಗ್-ವೈಶ್ಯ ಬ್ಯಾಂಕ್ ರೂಡ್ ಸೆಟ್ ಸಂಸ್ಥೆ, ಬಿವಿವಿ. ಸಂಘ ಕ್ಯಾಂಪಸ್, ಬಸ್ ನಿಲ್ದಾಣ ರಸ್ತೆ ಹತ್ತಿರ, ಬಾಗಲಕೋಟೆ-587 101
2	ಬೆಂಗಳೂರು (ಗ್ರಾ)	2) ಕೆನರಾ ಬ್ಯಾಂಕ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಮೈಕ್ರೋ ಫೈನಾನ್ಸ್ (ಸಿಬಿಟಿಐಎಂಎಫ್) ಸೊಣ್ಣಹಳ್ಳಿಪುರ, ಹಸಿಗಾಲ ಅಂಚೆ, ಹೊಸಕೋಟೆ ತಾಲ್ಲೂಕು, ಸೊಣ್ಣಹಳ್ಳಿಪುರ, 562114 ಬೆಂಗಳೂರು ಗ್ರಾಮಾಂತರ.
		3) ರೂಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು-562123, ಬೆಂಗಳೂರು (ಗ್ರಾ) ಜಿಲ್ಲೆ.
3	ಬೆಳಗಾಂ	4) ಸಿಂಡಿಕೇಟ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಎಂಟರ್‌ಪ್ರಿನರಶಿಪ್ ಡೆವಲಪ್‌ಮೆಂಟ್ (ಎಸ್‌ಐಆರ್‌ಡಿ), 1561, ಸಿಂಡಿಕೇಟ್ ಬ್ಯಾಂಕ್, 2ನೇ ಮಹಡಿ, ಮಾರುತಿಗಲ್ಲಿ, ಬೆಳಗಾಂ-590001.
4	ಬಳ್ಳಾರಿ	5) ಸಿಂಡಿಕೇಟ್ ರೂರಲ್ ಇನ್‌ಸ್ಟಿಟ್ಯೂಟ್ ಫಾರ್ ಎಂಟರ್‌ಪ್ರಿನರಶಿಪ್ ಡೆವಲಪ್‌ಮೆಂಟ್ (ಎಸ್‌ಐಆರ್‌ಡಿ), ಡಿ..ಐ.ಟಿ. ಕಾಂಪೌಂಡ್, ಹೊಸಪೇಟೆ ರಸ್ತೆ, ಬಳ್ಳಾರಿ-583102
5	ಬೀದರ	6) ಶಾರದಾ ರೂಡ್‌ಸೆಟ್ ಇನ್‌ಸ್ಟಿಟ್ಯೂಟ್, ಪ್ರತಾಪ್ ನಗರ, ಉದಗಿರಿ ರಸ್ತೆ, ಬೀದರ್-585402
6	ಬಿಜಾಪುರ	7) ರೂಡ್‌ಸೆಟ್ ಸಂಸ್ಥೆ, ಪಿ.ಬಿ.ನಂ. 12, ಪೆರೂರು ಕಾಲೋನಿ, ಬಿಜಾಪುರ-586 101
7	ಚಾಮರಾಜನಗರ	8) ಜೆ.ಎಸ್.ಎಸ್. ರೂಡ್‌ಸೆಟ್ ಸಂಸ್ಥೆ, ಮರಿಯಾಳ, ಚಾಮರಾಜನಗರ-571 313
8	ಚಿಕ್ಕಬಳ್ಳಾಪುರ	9) ಕೆನರಾ ಬ್ಯಾಂಕ್ ಆರ್‌ಸಿಟಿ, ಸಾಮರ್ಥ್ಯಸೌಧ, ಬಿಡಿಓ ಕ್ವಾರ್ಟರ್ಸ್, ವಾಪಸಂದ್ರ, ಬಡಾವಣೆ, ಬಿಬಿ ರಸ್ತೆ, ಚಿಕ್ಕಬಳ್ಳಾಪುರ
9	ಚಿಕ್ಕಮಗಳೂರು	10) ಕಾರ್ಪೋರೇಷನ್ ಬ್ಯಾಂಕ್, ಸೆಲ್ಫ್ ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಕಡೂರು ರಸ್ತೆ, ಚಿಕ್ಕಮಗಳೂರು-577 102
10	ಚಿತ್ರದುರ್ಗ	11) ರೂಡ್‌ಸೆಟ್ ಸಂಸ್ಥೆ, ಬನಶಂಕರಿ ಲೇ ಔಟ್, ಎನ್‌ಹೆಚ್-4, ಹೌಸಿಂಗ್ ಬೋರ್ಡ್ ಕಾಲೋನಿ ಹಿಂಭಾಗ, ಕೆಳಕೋಟೆ, ಚಿತ್ರದುರ್ಗ-577 501
11	ಧಾರವಾಡ	12) ರೂಡ್‌ಸೆಟ್ ಸಂಸ್ಥೆ, ಗಾಂಧಿನಗರ, ಧಾರವಾಡ-580 004
12	ದಾವಣಗೆರೆ	13) ಕೆನರಾ ಬ್ಯಾಂಕ್ ಸೆಲ್ಫ್ ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ದಾವಣಗೆರೆ
13	ದಕ್ಷಿಣಕನ್ನಡ	14) ರೂಡ್‌ಸೆಟ್ ಸಂಸ್ಥೆ, ಸಿದ್ಧವನ, ಉಜಿರೆ-574 020, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ
14	ಗದಗ	15) ಗದಗ ಇನ್‌ಸ್ಟಿಟ್ಯೂಟ್ ಫಾರ್ ಟ್ರೈನಿಂಗ್ ಇನ್ ಸೆಲ್ಫ್ ಎಂಪ್ಲಾಯಿಮೆಂಟ್ ಅಂಡ್ ರೂರಲ್ ಡೆವಲಪ್‌ಮೆಂಟ್ (ಜಿಐಟಿಎಸ್‌ಇಆರ್‌ಡಿ), ಕೆ.ಹೆಚ್.ಪಾಟೀಲ್ ಕೃಷಿ ವಿಜ್ಞಾನ ಕೇಂದ್ರ, ಕ್ಯಾಂಪಸ್ ಹುಲಕೋಟೆ, ಗದಗ್ ಜಿಲ್ಲೆ
15	ಗುಲ್ಬರ್ಗ	16) ಕೃಷ್ಣ ಇನ್‌ಸ್ಟಿಟ್ಯೂಟ್ ಫಾರ್ ಟ್ರೈನಿಂಗ್ ಇನ್ ಸೆಲ್ಫ್ ಎಂಪ್ಲಾಯಿಮೆಂಟ್ ಅಂಡ್ ರೂರಲ್ (ಕೆಐಟಿಎಸ್‌ಇಆರ್‌ಡಿ) ನಂ. 35-4-501 3, ದರ್ಗಾ ರಸ್ತೆ ಸಂತ್ರಾಸವಾಡಿ, ಹಳೆ ಎಂಪ್ಲಾಯಿಮೆಂಟ್ ಕಛೇರಿ ಎದುರು, ಗುಲ್ಬರ್ಗ-585 101
16	ಹಾಸನ	17) ಕೆನರಾ ಬ್ಯಾಂಕ್ ಸೆಲ್ಫ್ ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಹಾಸನ
17	ಹಾವೇರಿ	18) ವಿಜಯ ಬ್ಯಾಂಕ್ ಸೆಲ್ಫ್ ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ (ವಿಬ್‌ಸೆಟಿ) ಕೆ.ಎಸ್.ಎಫ್.ಸಿ. ಕಟ್ಟಡ ಮುಖ್ಯ ರಸ್ತೆ, ಹಾವೇರಿ-581 109
18	ಕೊಡಗು	19) ಕಾರ್ಪೋರೇಷನ್ ಬ್ಯಾಂಕ್ ಸೆಲ್ಫ್ ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, (COBSETI) ಮಡಕೇರಿ, ಕೊಡಗು
19	ಕೋಲಾರ	20) ರೂರಲ್ ಇಂಡಸ್ಟ್ರೀಸ್ ಅಂಡ್ ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, (ಆರ್‌ಸೆಟಿ), ಹೊನ್ನೇನಹಳ್ಳಿ-573 101 ಕೋಲಾರ ಜಿಲ್ಲೆ
20	ಕೊಪ್ಪಳ	21) ರೂಡ್‌ಸೆಟಿ ಇನ್ಸಿಟಿಟ್ಯೂಟ್, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಕೊಪ್ಪಳ
21	ಮೈಸೂರು	22) ರೂಡ್‌ಸೆಟಿ ಸಂಸ್ಥೆ, ಮುಖ್ಯ ರಸ್ತೆ, ಹಿನಕಲ್, ಮೈಸೂರು-570 017

22	ಮಂಡ್ಯ	23) ವಿಜಯಾಬ್ಯಾಂಕ್ ಸೆಲ್ಫ್ ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಮಂಡ್ಯ
23	ರಾಯಚೂರು	24) ರೂಡ್‌ಸೆಟಿ ಇನ್‌ಸ್ಟಿಟ್ಯೂಟ್, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ರಾಯಚೂರು
24	ರಾಮನಗರ	25) ಪೈಇನ್‌ಸ್ಟಿಟ್ಯೂಟ್ ಫಾರ್ ರೂರಲ್ ಡೆವಲಪ್‌ಮೆಂಟ್, ವಾಜರಹಳ್ಳಿ ರಾಮನಗರ
		26) ರೂರಲ್ ವುಮನ್ ಸೆಲ್ಫ್ ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ (ಆರ್‌ಡಬ್ಲ್ಯೂಎಸ್‌ಇಟಿಐ) ಹಾರೋಹಳ್ಳಿ, ಕನಕಪುರ ತಾಲ್ಲೂಕು ರಾಮನಗರ
25	ಶಿವಮೊಗ್ಗ	27) ರೂರಲ್ ಇಂಡಸ್ಟ್ರೀಸ್ ಅಂಡ್ ರಿಸೋರ್ಸ್ ಗೈಡೆನ್ಸ್ ಸೆಲ್ (ಆರ್‌ಯುಪಿಆರ್‌ಇಜಿ) ಹೊಳಲೂರು, ಶಿವಮೊಗ್ಗ
26	ತುಮಕೂರು	28) ಮೈಸೂರು ಬ್ಯಾಂಕ್ ಇನ್‌ಸ್ಟಿಟ್ಯೂಟ್ ಫಾರ್ ಪ್ರಮೋಷನ್ ಆಫ್ ಸೆಲ್ಫ್ ಎಂಪ್ಲಾಯ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ (ಮಿಪ್‌ಸೆಡ್) ಹಿರೇಹಳ್ಳಿ ಇಂಡಸ್ಟ್ರೀಯಲ್ ಏರಿಯಾ, ತುಮಕೂರು-572168
27	ಉತ್ತರಕನ್ನಡ	29) ಸಿಂಡಿಕೇಟ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಎಂಟರ್‌ಪ್ರಿನರ್‌ಶಿಪ್ ಡೆವಲಪ್‌ಮೆಂಟ್ (ಎಸ್‌ಐಆರ್‌ಡಿ) ಇಂಡಸ್ಟ್ರಿಯಲ್ ಎಸ್ಟೇಟ್, ಹೆಗಡೆ ರಸ್ತೆ, ರಘುನಾಥ್ ಬಿಲ್ಡಿಂಗ್, ಎನ್.ಹೆಚ್.17.
		30) ದೇಶಪಾಂಡೆ ರೂಡ್‌ಸೆಟ್ ಸಂಸ್ಥೆ, ದಾಂಡೇಲಿ ರೋಡ್, ಉದ್ಯೋಗ್ ವಿದ್ಯಾನಗರ, ಅಂಚೆ ಪೆಟ್ಟಿಗೆ ನಂ. 23, ಹಳಿಯಾಳ-581 329 ಉತ್ತರಕನ್ನಡ ಜಿಲ್ಲೆ
28	ಉಡುಪಿ	31) ರೂಡ್‌ಸೆಟಿ ಸಂಸ್ಥೆ, 52- ಹೇರೂರ್, ಬ್ರಹ್ಮಾವರ, ಉಡುಪಿ-576 213
		32) ಸಿಂಡಿಕೇಟ್ ಇನ್ಸಿಟಿಟ್ಯೂಟ್ ಆಫ್ ರೂರಲ್ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ (ಎಸ್‌ಐಆರ್‌ಡಿ), ಸಿಂಡಿಕೇಟ್ ಬ್ಯಾಂಕ್, 1ನೇ ಮಹಡಿ, ಸಿಂಡಿಕೇಟ್ ಶಾಖೆ, ಮಣಿಪಾಲ್-576119 ಉಡುಪಿ ಜಿಲ್ಲೆ

ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್ (ಎಟಿಡಿಸಿ ತರಬೇತಿ ಕೇಂದ್ರಗಳು)

1	ಬಾಗಲಕೋಟೆ	1) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ
2	ಬೆಂಗಳೂರು (ಗ್ರಾ)	2) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ರೂಡ್‌ಸೆಟಿ ಇನ್ಸಟಿಟ್ಯೂಟ್, ಅರಶಿನಕುಂಟೆ, ಬೆಂಗಳೂರು ತಾಲ್ಲೂಕು ಮತ್ತು ಜಿಲ್ಲೆ
3	ಬಳ್ಳಾರಿ	3) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ
4	ಬೆಳಗಾವಿ	4) ಗಾರ್ಮೆಂಟ್ ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ, ಶಿರ್ಪವಾಡಿ ಗ್ರಾಮ, ಯಕ್ಸಾಂಬಾ, ಚಿಕ್ಕೋಡಿ ತಾಲ್ಲೂಕು ಬೆಳಗಾವಿ
5	ಬೀದರ್	5) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ಶಾರದಾ ರೂಡ್‌ಸೆಟಿ, ಬೀದರ್
6	ಬಿಜಾಪುರ	6) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ರೂಡ್‌ಸೆಟಿ, ಬಿಜಾಪುರ
7	ಚಿಕ್ಕಮಗಳೂರು	7) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ಅರ್ಜುನ್ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಚಿಕ್ಕಮಗಳೂರು
8	ಚಿಕ್ಕಬಳ್ಳಾಪುರ	8) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ಎಟಿಐ ಕಟ್ಟಡ, ಚಿಕ್ಕಬಳ್ಳಾಪುರ
9	ಚಿತ್ರದುರ್ಗ	9) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ರೂಡ್‌ಸೆಟಿ, ಚಿತ್ರದುರ್ಗ
10	ದಾವಣಗೆರೆ	10) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ತರಳಬಾಳು ಫೌಂಡೇಷನ್, ಚೆನ್ನಗಿರಿ, ದಾವಣಗೆರೆ
11	ಧಾರವಾಡ	11) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ಎಟಿಐ, ಕಟ್ಟಡ, ಹುಬ್ಬಳ್ಳಿ, ಧಾರವಾಡ ಜಿಲ್ಲೆ
12	ಗದಗ್	12) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ಗದಗ್
13	ಗುಲ್ಬರ್ಗ	13) ಕೃಷ್ಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ಗುಲ್ಬರ್ಗ
14	ಹಾವೇರಿ	14) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ಕುಮಾರೇಶ್ವರ ಟ್ರಸ್ಟ್, ಹಾನಗಲ್, ಹಾವೇರಿ ಜಿಲ್ಲೆ
15	ಕೊಪ್ಪಳ	15) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ತಾಲ್ಲೂಕು ಪಂಚಾಯತಿ ಕಛೇರಿಯ ಹತ್ತಿರ, ಕೊಪ್ಪಳ

16	ಕೊಪ್ಪಳ	16) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ಹೆಚ್‌ಬಿಹೆಚ್‌ಆರ್‌ಐಸಿಟಿ, ರೂಡ್‌ಸೆಟಿ, ಕೊಪ್ಪಳ
17	ಮೈಸೂರು	17) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ಜೆಎಸ್‌ಎಸ್ ವಿದ್ಯಾಪೀಠ, ಕೆಆರ್‌ಎಸ್ ರಸ್ತೆ, ಮೈಸೂರು
18	ಮಂಡ್ಯ	18) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ಎಪಿಎಂಸಿ ಯಾರ್ಡ್, ಮದ್ದೂರು
19	ರಾಯಚೂರು	19) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ಎಸ್‌ಎಲ್‌ಎನ್ ಟೆಕ್ನಿಕಲ್ ಇನ್ಸಿಟ್ಯೂಟ್, ಯರಮರಸ್, ರಾಯಚೂರು
20	ಶಿವಮೊಗ್ಗ	20) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ಇಂಡಸ್ಟ್ರೀಯಲ್ ಅಸೋಸಿಯೇಷನ್, ಡಿಐಸಿ ಕಟ್ಟಡ, ನೆಹರೂ ರಸ್ತೆ, ಶಿವಮೊಗ್ಗ
		21) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ
		22) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ಮಹಾತ್ಮಗಾಂಧಿ ವಿದ್ಯಾಪೀಠ (ನೋಂ), ಅನವಳ್ಳಿ, ಸೊರಬ, ಶಿವಮೊಗ್ಗ
21	ತುಮಕೂರು	23) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ಎಟಿಐ ಕಟ್ಟಡ, ಬಸ್ ನಿಲ್ದಾಣದ ಎದುರು, ತುಮಕೂರು
22	ರಾಮನಗರ	24) ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್, ರಾಮನಗರ
23	ಉತ್ತರ ಕನ್ನಡ	25) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್ ದೇಶಪಾಂಡೆ ರೂಡ್‌ಸೆಟಿ, ಹಳಿಯಾಳ, ಉತ್ತರ ಕನ್ನಡ
24	ಉಡುಪಿ	26) ಅಪೆರಲ್ ಟ್ರೈನಿಂಗ್ ಮತ್ತು ಪ್ರೊಡಕ್ಷನ್ ಸೆಂಟರ್, ರೂಡ್‌ಸೆಟಿ, ಬ್ರಹ್ಮಾವರ, ಉಡುಪಿ

ಕರ್ನಾಟಕ ಕೃಷಿ ವಿಜ್ಞಾನ ಕೇಂದ್ರಗಳು

1	ಬಳ್ಳಾರಿ	1) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಹಗರಿ, ಬಳ್ಳಾರಿ ಜಿಲ್ಲೆ–583138
2	ಬೆಳಗಾಂ	2) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ತುಕನತ್ತಿ ತಾಲ್–ಗೋಕಾಕ್ ಬೆಳಗಾಂ–591 [illegible]4
3	ಬೀದರ್	3) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ನಂ. 58, ಜನವಾಡ, ಬೀದರ್–580 005
4	ಬಿಜಾಪುರ	4) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಸಂಶೋಧನಾ ಸಂಸ್ಥೆ, ನಂ. 18, ಬಿಜಾಪುರ–586101
5	ಚಾಮರಾಜನಗರ	5) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಸೀಡ್ ಫಾರಂ, ಹರಡನಹಳ್ಳಿ ಚಾಮರಾಜನಗರ ಜಿಲ್ಲೆ–571 313
6	ಚಿತ್ರದುರ್ಗ	6) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಬಾಬ್ಬುರ್ ಫಾರಂ ಹಿರಿಯೂರು–572 143, ಚಿತ್ರದುರ್ಗ ಜಿಲ್ಲೆ
7	ಚಿಕ್ಕಮಗಳೂರು	7) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಸಂಶೋಧನಾ ಸಂಸ್ಥೆ, ಮೂಡಿಗೆರೆ, ಚಿಕ್ಕಮಗಳೂರು–577132
8	ದಕ್ಷಿಣ ಕನ್ನಡ	8) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಸಂಶೋಧನಾ ಕೇಂದ್ರ, ದಕ್ಷಿಣ ಕನ್ನಡ, ಕನಕನಾಡ, ಮಂಗಳೂರು–575 002
9	ಧಾರವಾಡ	9) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಸಿದ್ದಾಪೂರ್ ಫಾರಂ, ಧಾರವಾಡ–580 003
10	ದಾವಣಗೆರೆ	10) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಅನುಭವ, ಮಂಟಪ, ಪಿ.ಬಿ.ನಂ. 303, ದಾವಣಗೆರೆ–577 004
11	ಗದಗ	11) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಗದಗ ಜಿಲ್ಲೆ–582205
12	ಗುಲ್ಬರ್ಗ	12) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಸಂಶೋಧನಾ ಕೇಂದ್ರ ಅಲಂದ್ ರೋಡ್ ಗುಲ್ಬರ್ಗ–585 101
13	ಹಾಸನ	13) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಕಂದಲಿ, ಹಾಸನ–573217

14	ಹಾವೇರಿ	14) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಹೆಮನಹಟ್ಟಿ, ರಾಣಿಬೆನ್ನೂರು, ಹಾವೇರಿ ಜಿಲ್ಲೆ-581 135
15	ಕೊಪ್ಪಳ	15) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಎ.ಆರ್.ಎಸ್.ಕ್ಯಾಂಪಸ್ ಕನಕಗಿರಿ ರೋಡ್, ಗಂಗಾವತಿ, ಕೊಪ್ಪಳ-583 227
16	ಕೊಡಗು	16) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಗೋಣಿಕೊಪ್ಪಲ್, ಕೊಡಗು ಜಿಲ್ಲೆ-571213
17	ಮಂಡ್ಯ	17) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ವಿ.ಸಿ.ಫಾರಂ ಮಂಡ್ಯ ಜಿಲ್ಲೆ-571 405
18	ಮೈಸೂರು	18) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ-571 129
19	ರಾಯಚೂರು	19) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಪಿ.ಬಿ.ನಂ. 24 ರಾಯಚೂರು ಜಿಲ್ಲೆ
20	ಶಿವಮೊಗ್ಗ	20) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಪಿ.ಬಿ.ನಂ. 126, ನವಿಲೆ ಶಿವಮೊಗ್ಗ ಜಿಲ್ಲೆ-577 204
21	ತುಮಕೂರು	21) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ತುಮಕೂರು ಜಿಲ್ಲೆ, ಕೋಣೆಹಳ್ಳಿ, ತಿಪಟೂರು-572 202
22	ಉತ್ತರ ಕನ್ನಡ	22) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಬನವಾಸಿ ರಸ್ತೆ, ಶಿರಸಿ-582401, ಉತ್ತರ ಕನ್ನಡ
23	ಉಡುಪಿ	23) ತರಬೇತಿ ಸಂಘಟಕರು, ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮಾವರ-575 213 ಉಡುಪಿ ಜಿಲ್ಲೆ

ಕರ್ನಾಟಕ ಜನ ಶಿಕ್ಷಣ ಸಂಸ್ಥಾನ ಹೆಸರು ಮತ್ತು ವಿಳಾಸ

1) ನಿರ್ದೇಶಕರು, ಜನ ಶಿಕ್ಷಣ ಸಂಸ್ಥಾನ ಸದ್ಗುರು ಬಿಲ್ಡಿಂಗ್, ದೋಬಿಘಾಟ್, ಉತ್ತರ ಕರ್ನಾಟಕ ತಾಲ್ಲೂಕು, ಕಾರವಾರ-581 301	2) ನಿರ್ದೇಶಕರು (ಐ.ಸಿ), ಜನ ಶಿಕ್ಷಣ ಸಂಸ್ಥಾನ, ಡಿ.ಟಿ.ಐ. ಕಾಂಪೌಂಡ್, ಮಿನಿ ವಿಧಾನಸೌಧ ಹತ್ತಿರ, ತುಮಕೂರು-572 101
3) ನಿರ್ದೇಶಕರು, ಜನ ಶಿಕ್ಷಣ ಸಂಸ್ಥಾನ, ಆಫೀಸ್ ಆಫ್ ದಿ ಪ್ರಿನ್ಸಿಪಾಲ್, ಬಿ.ವಿ.ವಿ.ಎಸ್. ಪಾಲಿಟೆಕ್ನಿಕ್ (ಆಟೋಮಾನಸ್) ಬಾಗಲಕೋಟೆ-587 101	4) ನಿರ್ದೇಶಕರು, ಜನ ಶಿಕ್ಷಣ ಸಂಸ್ಥಾನ 1ನೇ ಮೈನ್, 2ನೇ ಬ್ಲಾಕ್, 3ನೇ ಹಂತ, 7ನೇ ಕ್ರಾಸ್, ವಿನೋಬಾನಗರ, ಪೊಲೀಸ್ ಚೌಕಿ ಹತ್ತಿರ, ಶಿವಮೊಗ್ಗ-577 204
5) ನಿರ್ದೇಶಕರು, ಜನ ಶಿಕ್ಷಣ ಸಂಸ್ಥಾನ ನಂ. 1067, 1, ವಿ.ವಿ.ರಸ್ತೆ, ಮೈಸೂರು-570 004	6) ನಿರ್ದೇಶಕರು, ಜನ ಶಿಕ್ಷಣ ಸಂಸ್ಥಾನ 12-11-61, ಅರಬ್ ಮೊಹಲ್ಲಾ, ರಾಯಚೂರು-584 101
7) ನಿರ್ದೇಶಕರು, ಜನ ಶಿಕ್ಷಣ ಸಂಸ್ಥಾನ ಜೆ.ಎಸ್.ಎಸ್. ಇನ್ಸಿಟಿಟ್ಯೂಷನ್ ಕಾಂಪ್ಲೆಕ್ಸ್, 1ನೇ ಮುಖ್ಯ ರಸ್ತೆ, 38ನೇ ಕ್ರಾಸ್, ಕನಕಪುರ ರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು-560 008	

ಸರ್ಕಾರದಿಂದ ಮಂಜೂರಾತಿ ಆಗಿರುವ ಇತರೆ ತರಬೇತಿ ಸಂಸ್ಥೆಗಳು

1) ಸುಭೋದಿ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಸ್ಪೂರ್ತಿಧಾಮ, 9143, ಮಾಗಡಿ ಮುಖ್ಯ ರಸ್ತೆ, ಅಂಜನ ನಗರ, ಬಿಬಿಎಲ್ ಬಡಾವಣೆ ಎದುರು, ವಿಶ್ವನೀಡಂ ಅಂಚೆ, ಬೆಂಗಳೂರು-560 091	2) ಉನ್ನತಿ ಸೆಂಟರ್, ನಂ.1, ದೇವಸ್ಥಾನ ರಸ್ತೆ, ಸದಾನಂದನಗರ, ಎನ್‌ಜಿಇಎಫ್ ಲೇಔಟ್, ಬೆಂಗಳೂರು-560038
3) ಸ್ವಾಮಿ ವಿವೇಕಾನಂದ ಸಮಾಜ ಸೇವಾ ಸಂಸ್ಥೆ, ಸುತಗುಟ್ಟಿ, ಬೈಲಹೊಂಗಲ ತಾಲ್ಲೂಕು, ಬೆಳಗಾಂ ಜಿಲ್ಲೆ	

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ವ್ಯಾಪ್ತಿಯಡಿ ತರಬೇತಿ ಸಂಸ್ಥೆಗಳು

1) ಚಾಮರಾಜ ತಾಂತ್ರಿಕ ಸಂಸ್ಥೆ, ಮೈಸೂರು	2) ಕುಶಲಕರ್ಮಿ ತರಬೇತಿ ಸಂಸ್ಥೆಗಳು (ಒಟ್ಟು 21)

ಡಾ: ಅಮಿತಾ ಪ್ರಸಾದ್
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿಆರ್. 1749

ಸಹಕಾರ ಸಚಿವಾಲಯ

ವಿಷಯ : ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚನ್ನಪಟ್ಟಣ ಇದರ 2009-10ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಮುಂದೂಡುವ ಕುರಿತು.

ಓದಲಾಗಿದೆ :
1. ಶ್ರೀ ಸಿ.ಪಿ. ಯೋಗೇಶ್ವರ್, ಮಾನ್ಯ ಶಾಸಕರು, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಇವರ ಪತ್ರ ಸಂಖ್ಯೆ: ಸಸಸಿಕ/1457/11, ದಿನಾಂಕ: 08-06-2011.
2. ವ್ಯವಸ್ಥಾಪಕರು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚನ್ನಪಟ್ಟಣ ಇವರ ಪತ್ರ ಸಂಖ್ಯೆ: 285/2011-2012, ದಿನಾಂಕ: 30-05-2011 ಮತ್ತು 11-06-2011.

ಪ್ರಸ್ತಾವನೆ:

ಪಿಕಾರ್ಡ್ ಬ್ಯಾಂಕ್, ಚನ್ನಪಟ್ಟಣ ಇದರ 2009-10ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 31-03-2011ರೊಳಗೆ ನಡೆಸಬೇಕಾಗಿದ್ದು, ಮಾನ್ಯ ಶಾಸಕರ ಕ್ಷೇತ್ರದಲ್ಲಿ ವಿಧಾನಸಭಾ ಉಪಚುನಾವಣೆ ಮತ್ತು ನೀತಿ ಸಂಹಿತೆ ಜಾರಿಯಾದ್ದರಿಂದ ವಾರ್ಷಿಕ ಮಹಾಸಭೆಯನ್ನು ಮುಂದೂಡಿದ್ದು ದಿನಾಂಕ: 29-05-2011 ರಂದು ಬ್ಯಾಂಕಿನ ಅಧ್ಯಕ್ಷರು ಅಕಾಲಿಕ ಮರಣ ಹೊಂದಿರುವುದರಿಂದ ಕಾರ್ಯಕ್ರಮ ನಡೆಸಲು ವಿಳಂಬವಾಗುತ್ತದೆಂದು ಹಾಗೂ ಬ್ಯಾಂಕಿನ ನೂತನ ಕಟ್ಟಡವನ್ನು ಪ್ರಾರಂಭಿಸಿದ್ದು 2009-10ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಮತ್ತು ಕಟ್ಟಡದ ಉದ್ಘಾಟನೆಯನ್ನು ಏಕಕಾಲದಲ್ಲಿ ನಡೆಸಲು ತೀರ್ಮಾನಿಸಿರುವುದರಿಂದ ಬ್ಯಾಂಕಿನ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡ ಸೆಪ್ಟೆಂಬರ್ 2011 ರೊಳಗೆ ವಾರ್ಷಿಕ ಮಹಾಸಭೆಯನ್ನು ನಡೆಸಲು ಕಾಲಾವಕಾಶ ನೀಡಿ ಆದೇಶ ಹೊರಡಿಸಬೇಕೆಂದು ಮೇಲೆ ಓದಲಾದ(1)ರ ಪತ್ರದಲ್ಲಿ ಮಾನ್ಯ ಶಾಸಕರು, ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರಲ್ಲಿ ಕೋರಿರುತ್ತಾರೆ.

ಶ್ರೀ ಸಿ.ಪಿ. ಯೋಗೇಶ್ವರ್, ಮಾನ್ಯ ಶಾಸಕರು, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಇವರ ಪತ್ರ ಹಾಗೂ ವ್ಯವಸ್ಥಾಪಕರು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚನ್ನಪಟ್ಟಣ ಇವರು ಸಲ್ಲಿಸಿರುವ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಒ 113 ಸಿಎಲ್ಎಂ 2011, ಬೆಂಗಳೂರು, ದಿನಾಂಕ: 24-06-2011

ಪ್ರಸ್ತಾವೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚನ್ನಪಟ್ಟಣ ಇದರ 2009-10ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ: 30-09-2011 ವರೆಗೆ ಕಾಲಾವಕಾಶ ನೀಡಲು ಅನುಮತಿಯನ್ನು ನೀಡಲಾಗಿದೆ.

ಸೂಚನೆ:

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 30-09-2011ರ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 27(1)ರ ಪ್ರಕರಣದ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿಆರ್.ನಂ. 1750

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ದಿ ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತದ ದುಡಿಯುವ ಬಂಡವಾಳಕ್ಕಾಗಿ ಸರ್ಕಾರದಿಂದ ಆರ್ಥಿಕ ನೆರವು – 2011-12ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣದ ಬಿಡುಗಡೆ ಬಗ್ಗೆ.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತ ಇವರ ಪತ್ರ ಸಂಖ್ಯೆ: ಎಂಎಸ್‌ಕೋ/ಎಂಡಿ/ಡಿಒ/2011/08, ದಿನಾಂಕ: 16-06-2011.

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿನ ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತ ಇವರ ಪತ್ರದಲ್ಲಿ ಕಾರ್ಖಾನೆಯ ದುಡಿಯುವ ಬಂಡವಾಳದ ಸಲುವಾಗಿ 2011-12ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ರೂ. 1500.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತ ರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಐ 122 ಎಸ್‌ಜಿಎಫ್ 2011, ಬೆಂಗಳೂರು, ದಿನಾಂಕ: 13-07-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿ ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತ, ಮಂಡ್ಯ ಈ ಕಾರ್ಖಾನೆಗೆ 2011-12ನೇ ಸಾಲಿಗೆ ಕಾರ್ಖಾನೆಯ ದುಡಿಯುವ ಬಂಡವಾಳದ ಸಲುವಾಗಿ ಒದಗಿಸಲಾಗಿರುವ ರೂ. 1500.00 ಲಕ್ಷಗಳಲ್ಲಿ ಮೊದಲನೆ ಕಂತಾಗಿ ರೂ. 375.00 ಲಕ್ಷಗಳನ್ನು (ರೂಪಾಯಿ ಮುನ್ನೂರ ಎಪ್ಪತ್ತೈದು ಲಕ್ಷಗಳು ಮಾತ್ರ) ಲೆಕ್ಕ ಶೀರ್ಷಿಕೆ 4860-04-190-1-00 ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಹಣ ಸೆಳೆಯುವ ಅಧಿಕಾರಿಯು ಸಹಾಯಕ ನಿರ್ದೇಶಕರು (ಹೆಚ್.ಆರ್.ಡಿ ಆಡಳಿತ ಮತ್ತು ಇಎಂ) ಜಿಲ್ಲಾ ಕೈಗಾರಿಕಾ ಕೇಂದ್ರ ಮಂಡ್ಯ ಆಗಿದ್ದು ಸದರಿಯವರು ಹಣ ಸೆಳೆಯುವ ಬಿಲ್ಲನ್ನು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರ ಮೇಲು ಸಹಿಯೊಂದಿಗೆ ಖಜಾನೆಗೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಟಿಪ್ಪಣಿ ಸಂಖ್ಯೆ: ವಾಕೈ 124/ಆಂಆಸ(1)2011, ದಿನಾಂಕ: 08-07-2011ರಲ್ಲಿ ನೀಡಿರುವ ಸಹಮತಿಯನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ: 16-05-2008 ರಲ್ಲಿ ಸರ್ಕಾರದ ಆಡಳಿತ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಶಿವಶಂಕರ ನಾಯಕ್. ಎಲ್
ಪೀಠಾಧಿಕಾರಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿಆರ್.ನಂ. 1751

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಗೆ ರೈತರ ಬಾಕಿ ಪಾವತಿಸಲು ಮತ್ತು ಯಂತ್ರೋಪಕರಣಗಳ ಬದಲಾವಣೆಗೆ ರೂ. 22.00 ಕೋಟಿಗಳ ಅಲ್ಪಾವಧಿ ಸಾಲ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1. ಕ್ರಮ ಸಂಖ್ಯೆ: ಪಿ.ಎಸ್.ಎಸ್.ಕೆ/ಎಸ್.ಕೆ/435/2011-12, ದಿನಾಂಕ: 01-06-2011ರ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರ ಪತ್ರ.

2. ಕ್ರಮ ಸಂಖ್ಯೆ: ಡಿಎಸ್‌ಕೆ/ಎಫ್‌ಐಎನ್/16/2010-11, ದಿನಾಂಕ: 25-06-2011ರ ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರ ಪತ್ರ.

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತದ ಅಧ್ಯಕ್ಷರ ಪತ್ರದಲ್ಲಿ ಕಾರ್ಖಾನೆಯನ್ನು ಮುಂದಿನ ಹಂಗಾಮಿನ ಕಬ್ಬು ನುರಿತಕ್ಕೆ ಸಜ್ಜುಗೊಳಿಸಲು ಶುಚೀಕರಣ ಕೆಲಸ ಹಾಗೂ ಯಂತ್ರೋಪಕರಣಗಳು ಹಾಗೂ ಬಿಡಿ ಭಾಗಗಳನ್ನು ಖರೀದಿಸಲು ಅಂದಾಜು ರೂ. 8.08 ಕೋಟಿಗಳು ಬೇಕಾಗಿದ್ದು ಅಲ್ಪಾವಧಿ ಸಾಲದ ಅವಶ್ಯಕತೆ ಇರುತ್ತದೆ. ಕಾರ್ಖಾನೆಯಲ್ಲಿ ರೂ. 40.00 ಕೋಟಿಗಳ ಮೌಲ್ಯದ ಸಕ್ಕರೆ ದಾಸ್ತಾನು ಇದ್ದರೂ ಸಹ ಕೇಂದ್ರ ಸರ್ಕಾರವು ಮುಕ್ತ ಮಾರುಕಟ್ಟೆ ಸಕ್ಕರೆಯನ್ನು ಮಾರಾಟ ಮಾಡಲು ಸಕಾಲದಲ್ಲಿ ಸಕ್ಕರೆ ಬಿಡುಗಡೆ ಆದೇಶ ನೀಡದೆ ಇರುವುದರಿಂದ ರೈತರುಗಳಿಗೆ ಬಾಕಿ ಇರತಕ್ಕ ರೂ. 14.12 ಕೋಟಿ ಹಣ ಪಾವತಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿ ಆರ್ಥಿಕ ತೊಂದರೆಯಿಂದ ಶುಚೀಕರಣ ಕೆಲಸಗಳು ವಿಳಂಬವಾಗಿ ಸಕಾಲದಲ್ಲಿ ಮುಂದಿನ ಹಂಗಾಮು ಪ್ರಾರಂಭಿಸಲು ತೊಂದರೆಯಾಗುವುದರಿಂದ ಸರ್ಕಾರದ ವತಿಯಿಂದ ರೂ. 22.00 ಕೋಟಿಗಳ ಹಣವನ್ನು ಅಲ್ಪಾವಧಿ ಸಾಲದ ರೂಪದಲ್ಲಿ ಮಂಜೂರು ಮಾಡಿ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಕೋರಿರುವ ಅಲ್ಪಾವಧಿ ಸಾಲ ರೂ. 22.00 ಕೋಟಿಗಳು ಸೇರಿದಂತೆ ಒಟ್ಟು ರೂ. 47.00 ಕೋಟಿಗಳನ್ನು ಕಾರ್ಖಾನೆಯಲ್ಲಿ ಪ್ರಸಕ್ತ ದಾಸ್ತಾನು ಇರುವ ಸಕ್ಕರೆ ಮಾರಾಟದಿಂದ ಬರುವ ಹಣದಲ್ಲಿ ಮರುಪಾವತಿ ಮಾಡುವ ಷರತ್ತಿನೊಂದಿಗೆ ಕಾರ್ಖಾನೆಗೆ 2011-12ನೇ ಸಾಲಿನ ಪೂರ್ವಭಾವಿ ಸಿದ್ಧತೆಗಳಿಗಾಗಿ ಮತ್ತು ರೈತರ ಕಬ್ಬು ಬಿಲ್ಲು ಪಾವತಿಗಾಗಿ ರೂ. 22.00 ಕೋಟಿಗಳ ಅಲ್ಪಾವಧಿ ಸಾಲವನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಪರಿಗಣನೆಗೆ ಕಳುಹಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 63 ಸಸಕಾ 2011, ಬೆಂಗಳೂರು, ದಿನಾಂಕ: 12-07-2011

ಪ್ರಸ್ತಾವನೆಯಲ್ಲಿನ ವಿವರಗಳ ಹಿನ್ನೆಲೆಯಲ್ಲಿ, ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ರೂ. 10.00 ಕೋಟಿ (ಹತ್ತು ಕೋಟಿ ರೂಪಾಯಿಗಳು ಮಾತ್ರ)ಗಳನ್ನು ದುಡಿಯುವ ಬಂಡವಾಳವಾಗಿ ಸಾಧಿಲ್ವಾರು ನಿಧಿಯಿಂದ ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ:-

1. ಮಂಜೂರು ಮಾಡಲಾದ ಮೊಬಲಗನ್ನು ಮೊದಲು ಸಾದಿಲ್ವಾರು ನಿಧಿ ಲೆಕ್ಕ ಶೀರ್ಷಿಕೆ "8000-00-660-0-00-ಸಹಕಾರಕ್ಕೆ ಸಾಲ" ಇದರಡಿ ಬಿಡುಗಡೆ ಮಾಡಿ ನಂತರ ಲೆಕ್ಕಶೀರ್ಷಿಕೆ "6860-04-101-0-10- Loans to Pandavapur Sugar Factory" ಇದರಡಿಯಲ್ಲಿ ಪೂರಕ ಅಂದಾಜಿನಲ್ಲಿ ನಿಧಿಗೆ ಮರು ತುಂಬತಕ್ಕದ್ದು.
2. ಆರ್ಥಿಕ ಇಲಾಖೆಯು ರೂ. 10.00 ಕೋಟಿ ಮೊಬಲಗನ್ನು ಸಾಧಿಲ್ವಾರು ನಿಧಿಯಿಂದ ಬಿಡುಗಡೆ ಮಾಡಿ ಪ್ರತ್ಯೇಕ ಆದೇಶವನ್ನು ಹೊರಡಿಸುವುದು. ಪ್ರತ್ಯೇಕ ಆದೇಶವಿಲ್ಲದೇ ಈ ಆದೇಶದ ಮೇಲೆಯೇ ಮೊಬಲಗನ್ನು ಪಡೆಯುವಂತಿಲ್ಲ.
3. ಅಧಿಕಾರಿಯು ಸಾಧಿಲ್ವಾರು ನಿಧಿಯಿಂದ ಹಣವನ್ನು ಪಡೆಯಲು ಬಿಲ್ಲನ್ನು ಖಜಾನೆಗೆ ಸಲ್ಲಿಸಿದಾಗ ಹೊರಡಿಸಿದ ಪ್ರತ್ಯೇಕ ಆದೇಶವನ್ನು ಲಗತ್ತಿಸಿದ ನಂತರವೇ ಖಜಾನೆಯ ಹಣವನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳತಕ್ಕದ್ದು.
4. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ಒಂದಾವರ್ತಿ ತೀರುವಳಿಗೆ ಸಂಬಂಧಪಟ್ಟಂತೆ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯು ಅಂದಾಜು ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ದಿನಾಂಕ: 08-07-2011ರ ಆಇ 284 ವೆಚ್ಚ-2 ಮತ್ತು 10/2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ರಾಮಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಹಕಾರಿ ಸಕ್ಕರೆ)

ಪಿಆರ್.ನಂ. 1752

ಜಲಸಂಪನ್ಮೂಲ ಸಚಿವಾಲಯ

ವಿಷಯ : ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಮಲ್ಲಿದೇವನ ಹಳ್ಳಿ ಹತ್ತಿರ ಕುಂತಿ ಹೊಳೆಗೆ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಇ.ಐ.ಆರ್.ಎಲ್.ಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸನೀಇ 10 ನಯೋಕಾ 2007 ದಿನಾಂಕ: 13–05–2008.

2. ದಿನಾಂಕ: 01–06–2011ರ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು, ರವರ ಪತ್ರ ಸಂಖ್ಯೆ: ಮುಸದ/ತಾಂ.ಸ.2/ಚಿ.ಮ./ಕುಂತಿಹೊಳೆ/ಇ.ಐ.ಆರ್.ಎಲ್./2011–12/2165.

ಪ್ರಸ್ತಾವನೆ:

ಸರ್ಕಾರದ ಆದೇಶ ಸಂಖ್ಯೆ: ಸನೀಇ 10 ನಯೋಕಾ 2007 ದಿನಾಂಕ: 13–05–2008ರಲ್ಲಿ ಆರ್.ಐ.ಡಿ.ಎಫ್–13 ರಡಿ 162 ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಅವುಗಳ ಪೈಕಿ ರೂ. 20.00 ಲಕ್ಷದ ಅಂದಾಜು ಮೊತ್ತದ ಮೇಲ್ಕಂಡ ಕಾಮಗಾರಿ ಸೇರಿದೆ. ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರುರವರ ಕಛೇರಿ ನೋಂದಣಿ ಸಂಖ್ಯೆ: 747/2009–10ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಕಾಮಗಾರಿಯ ಅನುಷ್ಠಾನಕ್ಕಾಗಿ ಕೆ.ಎಸ್. ರಮೇಶ್, ಗುತ್ತಿಗೆದಾರರು ಇವರಿಗೆ ಟೆಂಡರ್ ಅನುಮೋದಿಸುವಾಗ ಚಾಲ್ತಿಯಲ್ಲಿದ್ದ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ರೂ. 19,12,066/– ಮೊತ್ತದ ಮೇಲೆ ಶೇಕಡ 1.63 ಹೆಚ್ಚಿನ ದರದಲ್ಲಿ ಅಂದರೆ ರೂ. 19,43,286/– ಮೊತ್ತಕ್ಕೆ ವಹಿಸಲಾಗಿರುತ್ತದೆ. ಕಾಮಗಾರಿ ಪ್ರಗತಿಯಲ್ಲಿದ್ದ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿಗಳು ಸ್ಥಳ ಪರಿವೀಕ್ಷಣೆ ಮಾಡಿ ನೀಡಿದ ಸೂಚನೆಗಳಂತೆ ಕಾಮಗಾರಿಯ ಕೆಲಸಗಳನ್ನು ನಿರ್ವಹಿಸಿದ್ದರಿಂದ ಕಾಮಗಾರಿಯ ವೆಚ್ಚದಲ್ಲಿ ಹೆಚ್ಚಳವಾಗಿದೆ. ವಾಸ್ತವಿಕ ಅವಶ್ಯಕತೆಗೆ ಅನುಗುಣವಾಗಿ ಕಾಮಗಾರಿಯಲ್ಲಿ 92,817/– ರೂ.ಗಳ ಹೆಚ್ಚಿನ ಆರ್ಥಿಕ ಹೊರೆ ಉಂಟಾಗಿದ್ದು, ಮೂಲ ಅಂದಾಜು ಮೊತ್ತ ರೂ. 20,00,000/– ಲಕ್ಷಕ್ಕೆ ಹೋಲಿಸಿದಾಗ ಶೇ. 4.64 ರಷ್ಟು ಹೆಚ್ಚಳ ಉಂಟಾಗಿದೆ. ಸದರಿ ಕಾಮಗಾರಿಯ ಹೆಚ್ಚುವರಿ ಕಾಮಗಾರಿಯ ಮೊತ್ತಕ್ಕೆ ಅನುಮೋದನೆ ಕೋರಿ ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರು ಮೇಲೆ ಓದಲಾದ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 47 ಅಪಿಬಂ (ತಾಂತ್ರಿಕ) 2011, ಬೆಂಗಳೂರು, ದಿನಾಂಕ: 13ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಮಲ್ಲಿದೇವನ ಹಳ್ಳಿ ಹತ್ತಿರ ಕುಂತಿ ಹೊಳೆಗೆ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಮಂಜೂರಾದ ಮೊತ್ತ ರೂ. 20.00 ಲಕ್ಷದ ಮೇಲೆ ಉಂಟಾಗಿರುವ ಹೆಚ್ಚುವರಿ ಆರ್ಥಿಕ ಹೊರೆ ರೂ. 92,817/– (ತೊಂಬತ್ತೆರಡು ಸಾವಿರದ ಎಂಟು ನೂರ ಹದಿನೇಳು ರೂ.ಗಳು ಮಾತ್ರ) ಪ್ರಸ್ತಾವನೆಗೆ (ಅನುಮೋದಿತ ಟೆಂಡರ್ ಪ್ರೀಮಿಯಮ್ ಮೊತ್ತವೂ ಸೇರಿ) ಈ ಬಾಬ್ತನ್ನು ಪರಿಷ್ಕೃತ ಅಂದಾಜಿನಲ್ಲಿ ಸೇರಿಸಿಕೊಳ್ಳುವ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ–1: ಟಿಎಫ್‌ಪಿ 2002 ದಿನಾಂಕ: 20–01–2003 ರ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿಆರ್.ನಂ. 1753

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಸಹಕಾರ ಸಚಿವಾಲಯ

ವಿಷಯ : ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ. ಬೆಂಗಳೂರು ಇದರ ಆಡಳಿತಗಾರರ ಅವಧಿ ವಿಸ್ತರಣೆ ಬಗ್ಗೆ.

ಓದಲಾಗಿದೆ : 1. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಯುಬಿಸಿ–5:ಮನವಿ:58:2006–07 ದಿನಾಂಕ: 12–12–2007.

2. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಯುಬಿಸಿ–5:ಮನವಿ:58:2006–07 ದಿನಾಂಕ: 30–05–2008.

ಪ್ರಸ್ತಾವನೆ:

ಭಾರತೀಯ ರಿಸರ್ವ್ ಬ್ಯಾಂಕಿನ ಪರಿವೀಕ್ಷಣಾ ವರದಿಯಲ್ಲಿ ಕಂಡು ಬಂದ ಗುರುತರ ಲೋಪದೋಷಗಳನ್ನು ಆಧರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30(1)ರಡಿ ಸಹಕಾರ ಸಂಘಗಳ ನಿಬಂಧಕರು ಸದರಿ ಬ್ಯಾಂಕಿನ ಆಡಳಿತ ಸಮಿತಿಯನ್ನು ರದ್ದುಗೊಳಿಸಿ ಮೇಲೆ ಓದಲಾದ (1) ಆದೇಶದಲ್ಲಿ ಆಡಳಿತಗಾರರನ್ನು ನೇಮಿಸಿದ್ದಾರೆ. ತದನಂತರ ಆಡಳಿತಗಾರರ ಅವಧಿಯನ್ನು ಕಾಲಕಾಲಕ್ಕೆ ವಿಸ್ತರಿಸಿದ್ದು ದಿನಾಂಕ: 02–06–2008 ರವರೆಗೆ ವಿಸ್ತರಿಸಿದ್ದು, ಸದರಿ ಆಡಳಿತಗಾರರ ಅವಧಿಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121 ರಡಿಯಲ್ಲಿ ದಿನಾಂಕ: 03–06–2008 ರಿಂದ 02–12–2008ರವರೆಗೆ ಆರು ತಿಂಗಳವರೆಗೆ ವಿಸ್ತರಿಸಬಹುದೆಂದು ಮೇಲೆ ಓದಲಾದ (2)ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಐ 109 ಸಿಎಲ್‌ಎಂ 2008, ಬೆಂಗಳೂರು, ದಿನಾಂಕ: 27–06–2008

ಪ್ರಸ್ತಾವನೆಯಲ್ಲಿ ವಿವರಿಸಿದ ಸಂಗತಿಗಳ ಹಿನ್ನೆಲೆಯಲ್ಲಿ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು ಇದರ ಆಡಳಿತಗಾರರ ಅವಧಿಯನ್ನು ದಿನಾಂಕ: 03–06–2008 ರಿಂದ 02–12–2008 ರವರೆಗೆ ವಿಸ್ತರಿಸಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ ಪ್ರಕರಣ 30(1) ಈ ಕೆಳಕಂಡ ಮಾರ್ಪಾಟುಗಳೊಂದಿಗೆ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು ಇದಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸುತ್ತದೆ. ಎಂದರೆ:–

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30 ಉಪಪ್ರಕರಣ (1)ರಲ್ಲಿನ "ಒಂದು ವರ್ಷ" ಎಂಬ ಪದಗಳಿಗೆ ಬದಲಾಗಿ "ಹದಿನೆಂಟು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ: 2) ಪ್ರಕರಣ 30 ಉಪ-ಪ್ರಕರಣ (1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 31-12-2008 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 30 ಉಪ-ಪ್ರಕರಣ (1)ರಲ್ಲಿನ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ಹುಚ್ಚಾಚಾರಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿಆರ್.ನಂ. 1754

ಸಹಕಾರ ಸಚಿವಾಲಯ

ವಿಷಯ : ಅಮಾನತ್ ಕೋ-ಆಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಇದರ ಆಡಳಿತಗಾರರ ಅವಧಿ ವಿಸ್ತರಣೆ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸಿಒ 109 ಸಿಎಲ್‌ಎಂ 2008 ದಿನಾಂಕ: 27-06-2008.
2. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಯುಬಿಸಿ-5:ಮನವಿ:58:2006-07 ದಿನಾಂಕ: 20-10-2008.

ಪ್ರಸ್ತಾವನೆ:

ಭಾರತೀಯ ರಿಸರ್ವ್ ಬ್ಯಾಂಕಿನ ಪರಿವೀಕ್ಷಣಾ ವರದಿಯಲ್ಲಿ ಕಂಡು ಬಂದ ಗುರುತರ ಲೋಪದೋಷಗಳನ್ನು ಆಧರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30(1)ರಡಿ ಸಹಕಾರ ಸಂಘಗಳ ನಿಬಂಧಕರು ಸದರಿ ಬ್ಯಾಂಕಿನ ಆಡಳಿತ ಸಮಿತಿಯನ್ನು ರದ್ದುಗೊಳಿಸಿ ದಿನಾಂಕ: 12-12-2007 ರಂದು ಆಡಳಿತಗಾರರನ್ನು ನೇಮಿಸಿದ್ದಾರೆ. ತದನಂತರ ಆಡಳಿತಗಾರರ ಅವಧಿಯನ್ನು ಕಾಲಕಾಲಕ್ಕೆ ವಿಸ್ತರಿಸಿದ್ದು ಓದಲಾದ 1ರ ಆದೇಶದಲ್ಲಿ ದಿನಾಂಕ: 03-12-2008 ರವರೆಗೂ ವಿಸ್ತರಿಸಿದ್ದು ಈ ಅವಧಿಯು ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ ಬ್ಯಾಂಕಿನ ಅಭಿವೃದ್ಧಿಯ ಹಿತದೃಷ್ಟಿಯಿಂದ ಆಡಳಿತಗಾರರ ಅವಧಿಯನ್ನು ದಿನಾಂಕ: 03-12-2008 ರಿಂದ 31-03-2010 ಮಾರ್ಚ್ 2010ರ ತನಕ ವಿಸ್ತರಿಸಲು ಮೇಲೆ ಓದಲಾದ (2)ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಒ 204 ಸಿಎಲ್‌ಎಂ 2008, ಬೆಂಗಳೂರು, ದಿನಾಂಕ: 05-12-2008

ಪ್ರಸ್ತಾವನೆಯಲ್ಲಿ ವಿವರಿಸಿದ ಸಂಗತಿಗಳ ಹಿನ್ನೆಲೆಯಲ್ಲಿ ಅಮಾನತ್ ಕೋ-ಆಪರೇಟಿವ್ ಬ್ಯಾಂಕ್ ನಿ, ಬೆಂಗಳೂರು ಇದರ ಆಡಳಿತಗಾರರ ಅವಧಿಯನ್ನು ದಿನಾಂಕ: 03-12-2008 ರಿಂದ 31-03-2010 ರವರೆಗೆ ವಿಸ್ತರಿಸಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ ಪ್ರಕರಣ 30(1) ಈ ಕೆಳಕಂಡ ಮಾರ್ಪಾಟುಗಳೊಂದಿಗೆ ಅಮಾನತ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ, ಬೆಂಗಳೂರು ಇದಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸುತ್ತದೆ. ಎಂದರೆ:-

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30 ಉಪಪ್ರಕರಣ (1)ರಲ್ಲಿನ "ಒಂದು ವರ್ಷ" ಎಂಬ ಪದಗಳಿಗೆ ಬದಲಾಗಿ "ಮೂವತ್ತನಾಲ್ಕು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ: 2) ಪ್ರಕರಣ 30 ಉಪ-ಪ್ರಕರಣ (1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 31-03-2010 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 30 ಉಪ-ಪ್ರಕರಣ (1)ರಲ್ಲಿನ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ಹುಚ್ಚಾಚಾರಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿಆರ್.ನಂ. 1755

ಸಹಕಾರ ಸಚಿವಾಲಯ

ವಿಷಯ : ಅಮಾನತ್ ಕೋ-ಆಪರೇಟಿವ್ ಬ್ಯಾಂಕ್ ಲಿ. ಬೆಂಗಳೂರು ಇದರ ಆಡಳಿತಗಾರರ ಅವಧಿ ವಿಸ್ತರಣೆ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸಿಒ 380 ಸಿಎಲ್‌ಎಂ 2010 ದಿನಾಂಕ: 04-05-2010.
2. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಯುಬಿಸಿ-5:ಮನವಿ:58:2006-07 ದಿನಾಂಕ: 05-04-2011.

ಪ್ರಸ್ತಾವನೆ:

ಅಮಾನತ್ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಇದರ ಆಡಳಿತಗಾರರ ಅವಧಿಯನ್ನು ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ದಿನಾಂಕ: 31-03-2011ರವರೆಗೆ ವಿಸ್ತರಿಸಿದ್ದು, ಈಗ ಸದರಿ ಅವಧಿಯು ಮುಕ್ತಾಯಗೊಂಡಿರುತ್ತದೆ. ಸದರಿ ಬ್ಯಾಂಕಿನ ಕಾರ್ಯನಿರ್ವಹಣೆ ಕುರಿತು ದಿನಾಂಕ: 24-01-2011 ರಂದು ನಡೆದ ಕಾರ್ಯನಿರ್ವಹಣೆ ಸಮಿತಿ ಸಭೆಯಲ್ಲಿ ಆಡಳಿತ ಮಂಡಳಿ ಚುನಾವಣೆ ನಡೆಸಲು ನಿರ್ಣಯಿಸಲಾಗಿ, ಬ್ಯಾಂಕಿನ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಅನುಮತಿ ಕೋರಿದೆ ಹಾಗೂ ಆಡಳಿತ ಮಂಡಳಿ ಚುನಾವಣೆ ನಡೆದು ಹೊಸ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಳ್ಳುವವರೆಗೆ ಅಥವಾ, ದಿನಾಂಕ: 01-04-2011 ರಿಂದ ಆರು ತಿಂಗಳವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆಡಳಿತಗಾರರ ಅವಧಿಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರ ಮೇರೆಗೆ ವಿಸ್ತರಿಸಲು ಸಹಕಾರ ಸಂಘಗಳ ನಿಬಂಧಕರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಒ 77 ಸಿಎಲ್‌ಎಂ 2011, ಬೆಂಗಳೂರು, ದಿನಾಂಕ: 25–05–2011

ಪ್ರಸ್ತಾವನೆಯಲ್ಲಿ ವಿವರಿಸಿದ ಸಂಗತಿಗಳ ಹಿನ್ನೆಲೆಯಲ್ಲಿ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು ಇದರ ಆಡಳಿತಗಾರರ ಅವಧಿಯನ್ನು ದಿನಾಂಕ: 01–04–2011 ರಿಂದ 30–09–2011 ರವರೆಗೆ ವಿಸ್ತರಿಸಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ ಪ್ರಕರಣ 30(1) ಈ ಕೆಳಕಂಡ ಮಾರ್ಪಾಟುಗಳೊಂದಿಗೆ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ, ಬೆಂಗಳೂರು ಇದಕ್ಕೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ. ಎಂದರೆ:–

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30 ಉಪಪ್ರಕರಣ (1)ರಲ್ಲಿನ "ಒಂದು ವರ್ಷ" ಎಂಬ ಪದಗಳಿಗೆ ಬದಲಾಗಿ "ಐವತ್ತೆರಡು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ: 2) ಪ್ರಕರಣ 30 ಉಪ–ಪ್ರಕರಣ (1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 30–09–2011 ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 30 ಉಪ–ಪ್ರಕರಣ (1)ರಲ್ಲಿನ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿಆರ್.ನಂ. 1756

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಜಿ. ಆಂಜನಪ್ಪ ಎ.ಎಸ್.ಐ., ಶ್ರೀರಾಮಪುರ ಪೊಲೀಸ್ ಠಾಣೆ ಮತ್ತು ಶ್ರೀ ರಾಮಚಂದ್ರಯ್ಯ, ಹೆಚ್.ಸಿ., ಸದಾಶಿವನಗರ ಪೊಲೀಸ್ ಠಾಣೆ, ಬೆಂಗಳೂರು, ಇವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: 66/ಡಿಇ–1/ಆರ್ 6 /2008 ದಿನಾಂಕ: 20–10–2009.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ. ಬೆಂಗಳೂರು ಇವರ ಆದೇಶ ಸಂಖ್ಯೆ: ಅಪೀಲು(4) 54/2009–10 (ಓ.ಬಿ. 17/2010–11) ದಿನಾಂಕ: 09–08–10.
3. ಅರ್ಜಿದಾರರುಗಳ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 13–10–2010 ಮತ್ತು 18–10–2010.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)63/2010–11 ದಿನಾಂಕ: 10–12–2010.

ಪ್ರಸ್ತಾವನೆ :

ಶ್ರೀ ಜಿ. ಅಂಜನಪ್ಪ ಎ.ಎಸ್.ಐ., ಮತ್ತು ರಾಮಚಂದ್ರಯ್ಯ, ಹೆಚ್.ಸಿ., ಇವರುಗಳು ಬೆಂಗಳೂರಿನ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷ್ಯತೆ, ಅಧಿಕಾರ ದುರುಪಯೋಗ ಪಡಿಸಿಕೊಂಡ ಕಾರಣದ ಮೇಲೆ ಕನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿ 8 ರೊಂದಿಗೆ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

ಶ್ರೀ ಜಿ. ಆಂಜನಪ್ಪ ಎ.ಎಸ್.ಐ., ಮತ್ತು ಶ್ರೀ ರಾಮಚಂದ್ರಯ್ಯ, ಹೆಚ್.ಸಿ.–3293, ಬಸವೇಶ್ವರನಗರ ಪೊಲೀಸ್ ಠಾಣೆ ಬೆಂಗಳೂರು ನಗರ ಆದ ನಿಮ್ಮನ್ನು ದಿ: 26–09–2008 ರಂದು ರಾತ್ರಿ ಕರ್ತವ್ಯಕ್ಕಾಗಿ ಕ್ರಮವಾಗಿ ಹೊಯ್ಸಳ–15 ವಾಹನ ಸಂಖ್ಯೆ: ಕೆಎಂ 2–ಜಿ–846ಕ್ಕೆ ಹಾಗೂ ಚೀತಾ–112, ವಾಹನ ಸಂಖ್ಯೆ ಕೆಎಂ 2 –ಜಿ– 777ಕ್ಕೆ ನೇಮಕ ಮಾಡಿ, ನೀವು ಬಸವೇಶ್ವರನಗರ ಠಾಣೆ ವ್ಯಾಪ್ತಿಯಲ್ಲಿ ಗಸ್ತು ಮಾಡಿ, ಯಾವುದೇ ಅಪರಾಧ, ಗಲಾಟೆ ವಗೈರೆ ನಡೆಯದಂತೆ ಕರ್ತವ್ಯ ನಿರ್ವಹಿಸಲು ನೇಮಕ ಮಾಡಿದ್ದು, ನೀವು ಸರಹದ್ದಿನ ವ್ಯಾಪ್ತಿಯಲ್ಲಿನ ಬಾರ್ ಅಂಡ್ ರೆಸ್ಟೋರೆಂಟ್, ಕೈಗಾಡಿ ವ್ಯಾಪಾರಿಗಳು, ರಸ್ತೆ ಬದಿಯ ಸಣ್ಣ ಕ್ಯಾಂಟೀನ್ ಹಾಗೂ ಗಣೇಶ ಉತ್ಸವ ನಡೆಸುತ್ತಿದ್ದ ಸ್ಥಳಗಳಿಗೆ ಹೋಗಿ ಸಂಬಂಧಪಟ್ಟವರಿಂದ ಅಕ್ರಮ ಸಂಭಾವನೆಯಾಗಿ ಹಣವನ್ನು ಪಡೆದುಕೊಂಡು, ಹಣಕ್ಕಾಗಿ ಸಾರ್ವಜನಿಕರೊಂದಿಗೆ ವಾಗ್ವಾದ ನಡೆಸಿ, ಸಾರ್ವಜನಿಕರ ಎದುರಿನಲ್ಲಿಯೇ ವಸೂಲಾದ ಹಣವನ್ನು ಪರಸ್ಪರ ಹಂಚಿಕೊಂಡ ಬಗ್ಗೆ ಸುವರ್ಣ ನ್ಯೂಸ್ ಚಾನೆಲ್‌ನವರ ಈ ಎಲ್ಲಾ ಕಾರ್ಯಗಳನ್ನು ವಿಡಿಯೋ ತೆಗೆದು ದೂರದರ್ಶನದಲ್ಲಿ ಪ್ರಸಾರ ಮಾಡಿದ್ದು, ನೀವು ನಿಮ್ಮಗಳ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಅಧಿಕಾರ ದುರುಪಯೋಗ ಪಡಿಸಿಕೊಂಡು ಪೊಲೀಸ್ ಇಲಾಖೆಯ ಗೌರವಕ್ಕೆ ಕುಂದುಂಟು ಮಾಡಿ, ಪೊಲೀಸ್ ಮ್ಯಾನ್ಯುಯಲ್ ಭಾಗ–1 ಆದೇಶ ಸಂ. 297ನ್ನು ಮೀರಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರುಗಳ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು, ಇವರ ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ : 20–10–2009ರ ಆದೇಶದಲ್ಲಿ ಅರ್ಜಿದಾರರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲಾಗಿದೆ ದಿ: 20–10–2008 ರಿಂದ 25–02–2009ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತಿನ ಅವಧಿಯಲ್ಲಿ ಪಡೆದ ಜೀವನಾಧಾರ ಭತ್ಯೆಗೆ ಸೀಮಿತಗೊಳಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರುಗಳ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 09–8–2010ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರದ

ದಂಡನಾದೇಶವನ್ನು ಮಾರ್ಪಡಿಸಿ ಇವರುಗಳನ್ನು ಸೇವೆಗೆ ಪುನರ್ ನೇಮಕ ಮಾಡಲಾಗಿದೆ. ಇವರುಗಳ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ ಒಂದು ವರ್ಷದ ಅವಧಿಗೆ ಮುಂದೂಡಲಾಗಿದೆ. ಅಮಾನತ್ತಿನಲ್ಲಿ ಕಳೆದ ಅವಧಿ ದಿನಾಂಕ: 20-10-2008 ರಿಂದ 25-02-2009ರ ವರೆಗಿನ ಅವಧಿಯನ್ನು ಸದರಿ ಅವಧಿಯಲ್ಲಿ ಪಡೆದ ಜೀವನಾಧಾರ ಭತ್ಯೆಗೆ ಸೀಮಿತಗೊಳಿಸಲಾಗಿದೆ ಕಡ್ಡಾಯ ನಿವೃತ್ತಿಗೊಳಿಸಿದ ದಿನಾಂಕದಿಂದ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ದಿನಾಂಕದವರೆಗಿನ ಅವಧಿಯನ್ನು ಕರ್ತವ್ಯದಿಂದ ಹೊರಗುಳಿದ ಅವಧಿ (Dies non) ಎಂದು ಪರಿಗಣಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರುಗಳು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರುಗಳು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 158 ಪೊಸಿಅ 2010, ಬೆಂಗಳೂರು, ದಿನಾಂಕ : 11-07-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಿ. ಆಂಜನಪ್ಪ ಎ.ಎಸ್.ಐ., ಶ್ರೀರಾಮಪುರ ಪೊಲೀಸ್ ಠಾಣೆ ಮತ್ತು ರಾಮಚಂದ್ರಯ್ಯ, ಹೆಚ್.ಸಿ., ಸದಾಶಿವನಗರ ಪೊಲೀಸ್ ಠಾಣೆ ಬೆಂಗಳೂರು ಇವರುಗಳು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1757 ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀಮತಿ ಜಯಚಿತ್ರ ಕೋಂ ದಿ: ಪಿ. ಕೇಶವಮೂರ್ತಿ, ಮಾಜಿ ಪಿ.ಸಿ., 8ನೇ ಪಡೆ ಕೆ.ಎಸ್.ಆರ್.ಪಿ. ಶಿವಮೊಗ್ಗ, ಇವರು ಸಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಕಮಾಂಡೆಂಟ್, ಕೆ.ಎಸ್.ಆರ್.ಪಿ. 8ನೇ ಪಡೆ, ಶಿವಮೊಗ್ಗ, ಇವರ ಆದೇಶ ಸಂಖ್ಯೆ: 57/ಡಿಇ/6/2002-03 ದಿ: 31-12-03.
2. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 16-3-2009.
3. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)22/2009-10 ದಿನಾಂಕ: 06-10-2009.

ಪ್ರಸ್ತಾವನೆ :

ಶ್ರೀ ಕೇಶವಮೂರ್ತಿ, ಇವರು 8ನೇ ಪಡೆ, ಕೆ.ಎಸ್.ಆರ್.ಪಿ.ಯಲ್ಲಿ ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯಕ್ಕೆ ನಿರಂತರವಾಗಿ ಅನಧಿಕೃತವಾಗಿ ಗೈರು ಹಾಜರಾಗಿ ಕರ್ತವ್ಯಕ್ಕೆ ನಿರ್ಲಕ್ಷತೆ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

ಶ್ರೀ ಪಿ. ಕೇಶವಮೂರ್ತಿ, ಪೇದೆ ಸಂ-31, 'ಡಿ' ದಳ, 8ನೇ ಪಡೆ ಕೆ.ಎಸ್.ಆರ್.ಪಿ. ಶಿವಮೊಗ್ಗ, ಆದ ನೀವು ದಿ: 26-8-02 ರಿಂದ 19-4-03ರ ವರೆಗೆ ಒಟ್ಟು 237 ದಿನಗಳು ಕರ್ತವ್ಯಕ್ಕೆ ನಿರಂತರವಾಗಿ ಅನಧಿಕೃತವಾಗಿ ಗೈರುಹಾಜರಿಯಾಗಿ ಕರ್ತವ್ಯ ನಿರ್ಲಕ್ಷ್ಯತೆ, ಬೇಜವಾಬ್ದಾರಿ ಮತ್ತು ಅಶಿಸ್ತನ್ನು ಪ್ರದರ್ಶಿಸಿರುವಿರಿ.

ದಿನಾಂಕ: 26-8-02 ರಿಂದ ನಿರಂತರವಾಗಿ ಕರ್ತವ್ಯ ಅನಧಿಕೃತವಾಗಿ ಗೈರುಹಾಜರಿಯಾಗಿದ್ದು ನಿಮ್ಮ ಗೈರು ಹಾಜರಿ ಅವಧಿಯು 21 ದಿನಗಳಿಗೂ ಮೀರಿದ್ದುದರಿಂದ ಹಾಗೂ ನಿಮಗೆ ವಿತರಿಸಲಾಗಿರುವ ಸರ್ಕಾರಿ ಕಿಟ್ ಸಾಮಗ್ರಿಗಳ ಸಹಿತ ಗೈರು ಹಾಜರಾಗಿದ್ದುದರಿಂದ ನಿಮಗೆ ಕೂಡಲೇ ಕರ್ತವ್ಯಕ್ಕೆ ಮರಳಿ ಹಾಜರಾಗುವಂತೆಯೂ, ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯವಾಗಿ, ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸೂಚಿಸಿ ಮಾನ್ಯ ಕಮಾಂಡೆಂಟ್ 8ನೇ ಪಡೆ ಕೆ.ಎಸ್.ಆರ್.ಪಿ. ಶಿವಮೊಗ್ಗರವರು ತಮ್ಮ ಪತ್ರ ಸಂಖ್ಯೆ: 57/ಡಿಇ/ಡಿಎನ್/2002-03 ದಿ: 21-10-2002 ರಂದು ಹೊರಡಿಸಿದ ಕರ್ತವ್ಯ ಪರಿತ್ಯಾಗ ಎಚ್ಚರಿಕೆ ಪತ್ರವನ್ನು ನೀವು ದಿನಾಂಕ: 25-10-2002 ರಂದು ಸ್ವೀಕರಿಸಿಯೂ ಸಹ ನೀವು ನಿಮ್ಮ ಕರ್ತವ್ಯಕ್ಕೆ ತಕ್ಷಣ ಹಾಜರಾಗದೆ ಹಿರಿಯ ಅಧಿಕಾರಿಗಳ ಆದೇಶವನ್ನು ಉಲ್ಲಂಘಿಸಿ ಅವಿಧೇಯತೆಯನ್ನು ಮತ್ತು ದುರ್ನಡತೆಯನ್ನು ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಕಮಾಂಡೆಂಟ್ ಕೆ.ಎಸ್.ಆರ್.ಪಿ. 8ನೇ ಪಡೆ ಶಿವಮೊಗ್ಗ, ಇವರ ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ : 31-12-2003ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ಅನಧಿಕೃತವಾಗಿ ಗೈರುಹಾಜರಾದ ಅವಧಿ ದಿನಾಂಕ 26-08-2002 ರಿಂದ 19-04-2003ರ ವರೆಗಿನ ಒಟ್ಟು 237 ದಿನಗಳನ್ನು ವೇತನ ರಹಿತ ರಜೆಯೆಂದು ಪರಿಗಣಿಸಲಾಗಿದೆ.

ಅ.ಪೊ.ಅ. ರವರು ದಿನಾಂಕ: 10-04-2004 ರಂದು ನಿಧನ ಹೊಂದಿರುವುದರಿಂದ ಅವರ ಪತ್ನಿ ಶ್ರೀಮತಿ ಜಯಚಿತ್ರ, ಇವರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ.

ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲವಾದ್ದರಿಂದ ಶಿಸ್ತು ಪ್ರಾಧಿಕಾರಿಯ ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 108 ಪೊಸಿಅ 2009, ಬೆಂಗಳೂರು, ದಿನಾಂಕ : 11-07-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀಮತಿ ಜಯಚಿತ್ರ ಕೋಂ ದಿ: ಪಿ. ಕೇಶವಮೂರ್ತಿ, ಮಾಜಿ ಪಿ.ಸಿ. 8ನೇ ಪಡೆ ಕೆ.ಎಸ್.ಆರ್.ಪಿ. ಶಿವಮೊಗ್ಗ ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಟಿ.ಎನ್. ರವಿಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1758

EDUCATION SECRETARIAT

Sub : Re-constitution of the State Level Committee for processing of applications for additional courses and additional intake in existing polytechnics.

Read :
1. Government. Order No. ED 381 TPE 2004, dated : 28-02-2005.
2. Letter No. DTE 38 DVP (2) 2010 Dated 18-10-2010 and 13-05-2011.
3. AICTE Public Notice for Academic year 2011-12 (Polytechnics)
4. Stay order passed in WP No. 7641/2011 filed by the Karnataka Private Polytechnic Association before the Hon'ble High Court of Karnataka.
5. WA No. 2476/2011 filed by AICTE against the orders in W.P. No. 7641/2011.

Preamble:

A State Level Committee under the Chairmanship of Principal Secretary, Higher Education Department was constituted vide G.O. read at (1) above for processing the following categories of applications as per the guidelines framed by the A.I.C.T.E

(A) The applications for increase in intake in the existing diploma in Engineering and Technology Institutes.

(B) The applications for the introduction of additional courses in the existing diploma in Engineering and Technology Institutes.

(C) The approval for grant if extension of approval beyond the year 2001-02 for existing diploma in Engineering and Technology Institutes.

2. The Director of Technical Education in his letters read at (2) above has proposed to include two members in the above said committee and requested for reconstitution of the State Level Committee.

3. A.I.C.T.E. New Delhi in their Public Notice dated 24-12-2010 read at (3) above has now withdrawn the delegation of powers to the State Government for the processing of application pertaining to Diploma level institutions in Engineering and Technology, which were earlier given in the letter No. 711-005/GDIP/ET 2001, dated 27-3-2001 vide ref (3) above from the academic year 2011-12.

4. The above Public Notice of the AICTE was challenged by the Karnataka Private Polytechnic Association before the Ho'ble High Court of Karnataka by WP No. 7641/2011 read at (4) above and Hon'ble High Court of Karnataka has stayed the AICTE Notification dated 24-12-2010.

5. The AICTE has filed a WA No. 2476/2011 before the Hon'ble High Court of Karnataka read at (6) above and the Hon'ble High Court after hearing has dismissed the same.

6. The Government have examined the proposal decided to re-constitute the State Level Committee. Hence the order.

Government Order No. : ED 119 TPE 2007, Bangalore, Dated: 7th July 2011

Government are pleased to re-constitute the State Level Committee for processing of applications for additional courses and additional intake in existing polytechnics in Karnataka for the year 2011-12 with the following members.

01	Principal Secretary to Government Higher Education Department, Government of Karnataka	Chairperson
02	Regional Officer, South Western Regional Office, AICTE, Bangalore	Member
03	Dr. S.C. Sharma, Vice-Chancellor, Tumkur University and Vice-President, Karnataka State Council for Higher Education, Bangalore.	Member

04	Executive Director, Karnataka Examinations Authority, Bangalore	Member
05	Principal, Government S.K.S.J.T. Instiiute, Bangalore	Member
06	Principal, University Visvesvaraya College of Engineering, Bangalore	Member
07	Director of Technical Education, Bangalore	Member Secretary

By Order and in the name of the Governor of Karnataka

B.N. Jagadeesh

Under Secretary to Government

Education Department

(Technical Education)

P.R. 1759

ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಜಿಲ್ಲಾ ಪಂಚಾಯತ್ ಯೋಜನಾ ಘಟಕದಲ್ಲಿರುವ ಯೋಜನೇತರ ತಾತ್ಕಾಲಿಕ ಹುದ್ದೆಗಳನ್ನು 2011-12ನೇ ಸಾಲಿನಲ್ಲಿ ಮುದುವರಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಯೋಇ 7 ಸಸಪ್ರ 2010, ದಿ: 10/06/2010
2. ಸರ್ಕಾರದ ಆದೇಶ ಸಂಖ್ಯೆ: ಪಿಡಿ 102 ಎಸ್‌ಎಂಸಿ 2006, ದಿ: 11/06/2007.
3. ಸರ್ಕಾರದ ಆದೇಶ ಸಂಖ್ಯೆ: ಪಿಡಿ 15 ಎಸ್‌ಎಂಸಿ 2010, ದಿ: 22/11/2010.
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ಇವರ ಪತ್ರ ಸಂಖ್ಯೆ: ಜಿಪತು/ಯೋಶಾ/ವಿವ/1/2011-12, ದಿ: 05-07-2011.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ಇವರ ಪತ್ರ ಸಂಖ್ಯೆ: ಜಿಪಯ/ಯೋಶಾ/75/10-11, ದಿ: 25-03-2010.

ಪ್ರಸ್ತಾವನೆ :

ಮೇಲೆ ಕ್ರಸಂ. 1 ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯದ 28 ಜಿಲ್ಲಾ ಪಂಚಾಯತ್‌ಗಳ ಯೋಜನಾ ಘಟಕದಲ್ಲಿರುವ 342 ತಾತ್ಕಾಲಿಕ ಯೋಜನೇತರ ಹುದ್ದೆಗಳನ್ನು 2010-11ನೇ ಸಾಲಿಗೆ ಅಂದರೆ ದಿನಾಂಕ: 01-04-2010 ರಿಂದ 31-03-2011 ರವರೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಮುಂದುವರೆಸಿದೆ.

ಮೇಲೆ ಕ್ರಸಂ. 2 ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 64 ತಾಲ್ಲೂಕು ಯೋಜನಾ ಘಟಕಗಳನ್ನು ಸೃಜಿಸಿ ಕೆಳಕಂಡ 64 ಹುದ್ದೆಗಳನ್ನು ಜಿಲ್ಲಾ ಪಂಚಾಯತ್‌ಗಳ ಯೋಜನಾ ಘಟಕಗಳಿಂದ ತಾಲ್ಲೂಕು ಯೋಜನಾ ಘಟಕಗಳಿಗೆ ಮರು ಹೊಂದಾಣಿಕೆ ಮುಖಾಂತರ ವರ್ಗಾವಣೆ ಮಾಡಿ ತಾಲ್ಲೂಕು ಯೋಜನಾ ಅಧಿಕಾರಿಗಳೆಂದು ನಾಮಕರಣ ಮಾಡಲಾಗಿದೆ.

1.	ಪ್ರಾದೇಶಿಕ ಯೋಜನಾಧಿಕಾರಿ	–	12 ಹುದ್ದೆಗಳು
2.	ಮಾನವ ಶಕ್ತಿ ಮತ್ತು ಪತ್ತು ಯೋಜನಾಧಿಕಾರಿ	–	25 ಹುದ್ದೆಗಳು
3.	ಸಾಂಖ್ಯಿಕ ಅಧಿಕಾರಿ	–	27 ಹುದ್ದೆಗಳು

ಸದರಿ ಆದೇಶದಲ್ಲಿ ತಾಲ್ಲೂಕು ಯೋಜನಾ ಘಟಕದ ಸಿಬ್ಬಂದಿ ವೇತನ ಮತ್ತು ಇತರೆ ಭತ್ಯೆಗಳನ್ನು ಅವರು ಪಡೆಯುತ್ತಿದ್ದ ಲೆಕ್ಕ ಶೀರ್ಷಿಕೆಯಲ್ಲಿಯೇ ಭರಿಸತಕ್ಕದೆಂದು ಕೂಡ ಸೂಚಿಸಲಾಗಿದೆ.

ತಾಲ್ಲೂಕು ಯೋಜನಾ ಘಟಕಗಳ ಹುದ್ದೆಗಳು ಯೋಜನಾ ಇಲಾಖೆಯ ಆಡಳಿತಾತ್ಮಕ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಈ ಘಟಕಗಳು ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಹಣಾಧಿಕಾರಿಗಳ ಆಡಳಿತ ನಿಯಂತ್ರಣದಲ್ಲಿ ಮತ್ತು ಆಯಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಯೋಜನಾಧಿಕಾರಿಗಳ ತಾಂತ್ರಿಕ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸತಕ್ಕದ್ದು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಂಪೂರ್ಣ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸತಕ್ಕದ್ದು.

ಮೇಲೆ ಕ್ರಸಂ. 3 ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿ ಎರಡನೇ ಹಂತವಾಗಿ 43 ತಾಲ್ಲೂಕು ಯೋಜನಾ ಘಟಕಗಳನ್ನು ತಾಲ್ಲೂಕು ಪಂಚಾಯತಿಗಳಲ್ಲಿ ಸೃಜಿಸಿ ಆದೇಶಿಸಲಾಗಿದೆ.

ಮುದುವರೆದು ಸದರಿ 43 ತಾಲ್ಲೂಕು ಯೋಜನಾ ಘಟಕಗಳಿಗೆ ತಾಲ್ಲೂಕು ಯೋಜನಾಧಿಕಾರಿಗಳನ್ನು ನೇಮಿಸುವ ಸಲುವಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ 43 ಸಹಾಯಕ ನಿರ್ದೇಶಕರುಗಳ ಹುದ್ದೆಗಳನ್ನು ರಾಜ್ಯ ವಲಯದಿಂದ ಜಿಲ್ಲಾ ಪಂಚಾಯತ್ ವಲಯಕ್ಕೆ ವರ್ಗಾಯಿಸಿ ಆದೇಶಿಸಲಾಗಿದೆ.

ಅದರಂತೆಯೇ ಸಂಬಂಧಪಟ್ಟ ಅಯಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ತಾಲ್ಲೂಕು ಪಂಚಾಯತ್ ಅಧಿಕಾರಿಗಳು ಸದರಿ ತಾಲ್ಲೂಕು ಯೋಜನಾಧಿಕಾರಿ ಹುದ್ದೆಗೆ ಅಗತ್ಯವಿರುವ ಮತ್ತು ಇತರೆ ಭತ್ಯೆಗಳಿಗಾಗಿ ಅನುದಾನವನ್ನು ಒದಗಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ತಾಲ್ಲೂಕು ಯೋಜನಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶದಲ್ಲಿ ನಿಗದಿಪಡಿಸಿರುವಂತೆ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

ಮೇಲೆ ಕ್ರಸಂ. 4 ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ತುಮಕೂರು ಇವರು ಯೋಜನಾ ಘಟಕದಲ್ಲಿರುವ ಯೋಜನೇತರ ಹುದ್ದೆಗಳು ಅತಿ ಅವಶ್ಯಕವಾಗಿರುವುದರಿಂದ ಹಾಗೂ ಹೊಸದಾಗಿ ಸೃಜನೆಯಾದ ತಾಲ್ಲೂಕು ಯೋಜನಾಧಿಕಾರಿ ಹುದ್ದೆಗಳನ್ನೂ ಸಹ ಆಡಳಿತಾತ್ಮಕ ಹಿತದೃಷ್ಟಿಯಿಂದ 2011-12ನೇ ಸಾಲಿಗೆ ಮುಂದುವರಿಸಬೇಕೆಂದು ಕೋರಿರುತ್ತಾರೆ.

ಮೇಲೆ ಕ್ರಸಂ. 5 ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಯಾದಗಿರಿ ಇವರು ಯೊಜನಾ ಘಟಕದಲ್ಲಿರುವ ಸದರಿ ಯೋಜನೇತರ ಹುದ್ದೆಗಳು ಅತಿ ಅವಶ್ಯಕವಾಗಿರುವುದರಿಂದ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಸ್ತಾಪಿಸಿರುವ ಹುದ್ದೆಗಳನ್ನು 2011-12ನೇ ಸಾಲಿಗೆ ಮುಂದುವರಿಸಬೇಕೆಂದು ಕೋರಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 59 ಭೂದಾಮ 2008, ದಿ: 26-12-2009 ರಲ್ಲಿ ಗುಲ್ಬರ್ಗಾ ಜಿಲ್ಲೆಯ ಸರಹದ್ದನ್ನು ವಿಭಜಿಸಿ, ಯಾದಗಿರಿ ಪಟ್ಟಣವನ್ನು ಹೊಸ ಜಿಲ್ಲೆಯಾಗಿ ಸೃಜಿಸಲಾಗಿದೆ.

ಹೊಸದಾಗಿ ಸೃಜನೆಯಾದ ಯಾದಗಿರಿ ಜಿಲ್ಲಾ ಪಂಚಾಯತ್‌ಗೆ ಈ ಕೆಳಕಂಡ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 202 ಕೆ.ಎಸ್.ಎಸ್. 2009, ದಿ: 26-11-2010 ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮಂಜೂರು ಮಾಡಲಾಗಿದೆ.

ಕ್ರಮ.ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳು
1.	ಮುಖ್ಯ ಯೋಜನಾಧಿಕಾರಿಗಳು	1
2.	ಯೋಜನಾ ಸಹಾಯಕ ಮತ್ತು ಮೌಲ್ಯಮಾಪನ ಅಧಿಕಾರಿ	1
3.	ತಾಲ್ಲೂಕು ಯೋಜನಾಧಿಕಾರಿ (ಪ್ರಾದೇಶಿಕ ಯೋಜನಾಧಿಕಾರಿ)	1
4.	ಯೋಜನಾ ಸಹಾಯಕರು (ಆರ್ಥಿಕ)	1
5.	ಯೋಜನಾ ಸಹಾಯಕರು (ಸಾಂಖ್ಯಿಕ)	1
6.	ಪ್ರಥಮ ದರ್ಜೆ ಸಹಾಯಕರು	1
7.	ದ್ವಿತೀಯ ದರ್ಜೆ ಸಹಾಯಕರು	1
8.	ಶೀಘ್ರಲಿಪಿಗಾರರು	1
9.	ಬೆರಳಚ್ಚುಗಾರರು	1
10.	ದಲಾಯತ್	1
11.	ವಾಹನ ಚಾಲಕರು	1
	ಒಟ್ಟು	11

ಯಾದಗಿರಿ ಜಿಲ್ಲಾ ಪಂಚಾಯಿತಿಯನ್ನು ಒಳಗೊಂಡಂತೆ ಹಾಗೂ ಹೊಸದಾಗಿ ಸೃಜನೆಯಾದ 43 ತಾಲ್ಲೂಕು ಯೋಜನಾಧಿಕಾರಿಗಳ ಹುದ್ದೆಗಳನ್ನು ಸಹ ಸೇರ್ಪಡೆ ಮಾಡಿಕೊಂಡು, ಒಟ್ಟು 29 ಜಿಲ್ಲಾ ಪಂಚಾಯತ್‌ಗಳಿಗೆ 2011-12ನೇ ಸಾಲಿಗೆ ಜಿಲ್ಲಾ ಪಂಚಾಯತ್‌ನ ಯೋಜನಾ ಘಟಕದಲ್ಲಿರುವ ಎಲ್ಲಾ ಯೋಜನೇತರ ತಾತ್ಕಾಲಿಕ ಹುದ್ದೆಗಳ ವಿವರ ಈ ಕೆಳಕಂಡಂತೆ ಇದೆ:-

ಕ್ರ ಸಂ.	ಹುದ್ದೆಗಳ ಹೆಸರು	28 ಜಿಲ್ಲೆಗಳಿಗೆ ಒಟ್ಟು ಮಂಜೂರಾಗಿರುವ ಹುದ್ದೆಗಳು	ಯಾದಗಿರಿ ಜಿ.ಪಂ.ಗೆ ಮಂಜೂರಾದ ಹುದ್ದೆಗಳು	ಒಟ್ಟು
1	2	3	4	5
1	ಮುಖ್ಯ ಯೋಜನಾಧಿಕಾರಿಗಳು	28	1	29
2	ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ	28	1	29
3	ತಾಲ್ಲೂಕು ಯೋಜನಾಧಿಕಾರಿಗಳು	63-3=60+43=103	1+2=3*	63+43
4	ಯೋಜನಾ ಸಹಾಯಕರು (ಆರ್ಥಿಕ)	26	1	27
5	ಯೋಜನಾಸಹಾಯಕರು (ಸಾಂಖ್ಯಿಕ)	24	1	25
6	ಪ್ರಥಮ ದರ್ಜೆ ಸಹಾಯಕರು	27	1	28
7	ದ್ವಿತೀಯ ದರ್ಜೆ ಸಹಾಯಕರು	36	1	37
8	ಶೀಘ್ರಲಿಪಿಗಾರರು	28	1	29
9	ಬೆರಳಚ್ಚುಗಾರರು	31	1	32
10	ದಲಾಯತ್	51	1	52
	ಒಟ್ಟು	342-3=382	10+2=12	394

ಆದುದರಿಂದ 29 ಜಿಲ್ಲಾ ಪಂಚಾಯತ್‌ಗಳ ಯೋಜನಾ ಘಟಕಗಳಲ್ಲಿರುವ ಎಲ್ಲಾ ಯೋಜನೇತರ ತಾತ್ಕಾಲಿಕ ಹುದ್ದೆಗಳನ್ನು 2011-12ನೇ ಸಾಲಿಗೆ ಅಂದರೆ ದಿನಾಂಕ: 01/04/2011 ರಿಂದ 31/03/2012ರ ವರೆಗೆ ಮತ್ತೊಂದು ವರ್ಷದ ಅವಧಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಮುಂದುವರೆಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಯೋಇ 09 ಸಸಪ್ರ 2011, ಬೆಂಗಳೂರು, ದಿನಾಂಕ : 11-07-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಆದೇಶದ ಅನುಬಂಧದಲ್ಲಿ ತೋರಿಸಿರುವ ರಾಜ್ಯದ 29 ಜಿಲ್ಲಾ ಪಂಚಾಯತ್‌ಗಳ ಯೋಜನಾ ಘಟಕದಲ್ಲಿರುವ ಈ ಕೆಳಕಂಡ 394 ತಾತ್ಕಾಲಿಕ ಯೋಜನೇತರ ಹುದ್ದೆಗಳನ್ನು ದಿನಾಂಕ: 01/04/2011 ರಿಂದ 31/03/2012 ವರೆಗೆ (ಎ.ದಿ.ಸೇ.) ಮತ್ತೊಂದು ವರ್ಷದ ಅವಧಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಮುಂದುವರೆಸಲು ಸರ್ಕಾರವು ಮಂಜೂರಾತಿ ನೀಡಿದೆ.

1.	ಮುಖ್ಯ ಯೋಜನಾಧಿಕಾರಿಗಳು	–	29
2.	ಯೋಜನಾ ಅಂದಾಜು ಮತ್ತು ಮೌಲ್ಯ ಮಾಪನ ಅಧೀಕಾರಿ	–	29
3.	ತಾಲ್ಲೂಕು ಯೋಜನಾಧಿಕಾರಿಗಳು	–	63+43
4.	ಯೋಜನಾ ಸಹಾಯಕರು (ಆರ್ಥಿಕ)	–	27
5.	ಯೋಜನಾ ಸಹಾಯಕರು (ಸಾಂಖ್ಯಿಕ)	–	25
6.	ಪ್ರಥಮ ದರ್ಜೆ ಸಹಾಯಕರು	–	28
7.	ದ್ವಿತೀಯ ದರ್ಜೆ ಸಹಾಯಕರು	–	37
8.	ಶೀಘ್ರಲಿಪಿಗಾರರು	–	29
9.	ಬೆರಳಚ್ಚುಗಾರರು	–	32
10.	ದಲಾಯತ್	–	52
	ಒಟ್ಟು	–	394

ಜಿಲ್ಲಾ ಪಂಚಾಯತ್‌ವಾರು ಯೋಜನಾ ಘಟಕಗಳಲ್ಲಿ ಮುಂದುವರಿಸಿದ ತಾತ್ಕಾಲಿಕ ಹುದ್ದೆಗಳ ವಿವರಗಳ ಈ ಆದೇಶದ ಅನುಬಂಧದಲ್ಲಿ ನೀಡಲಾಗಿದೆ. ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 3451-00-101-4-00 ಜಿಲ್ಲಾ ಪಂಚಾಯತ್ (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 96, ದಿನಾಂಕ: 10-07-1996 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ

ಸರ್ಕಾರಿ ಆದೇಶ ಸಂ. ಯೋಇ 9 ಸಸಪ್ರ 2011, ಬೆಂಗಳೂರು, ದಿನಾಂಕ: 11-07-2011ರ ಅನುಬಂಧ

ಕ್ರ ಸಂ	ಜಿಲ್ಲೆಗಳು	ಮುಖ್ಯ ಯೋಜನಾಧಿಕಾರಿ	ಪಿಎ ಇಒ	ತಾಲ್ಲೂಕು ಯೋಜನಾಧಿಕಾರಿಗಳು	ಯೋಜನಾ ಸಹಾಯಕರು ಆರ್ಥಿಕ	ಯೋಜನಾ ಸಹಾಯಕರು ಸಾಂಖ್ಯಿಕ	ಪ್ರ.ದ.ಸ	ದ್ವಿ.ದ.ಸ	ಶೀಘ್ರ ಲಿಪಿಗಾರರು	ಬೆರಳಚ್ಚುಗಾರರು	ದಲಾಯತ್
1	2	3	4	5	6	7	8	9	10	11	12
1	ಬೆಂಗಳೂರು (ನಗರ)	1	1	1	1	1	–	1	1	1	1
2	ಬೆಂಗಳೂರು (ಗ್ರಾ)	1	1	1	1	1	1	3	1	1	2
3	ಚಿತ್ರದುರ್ಗ	1	1	5	1	1	1	2	1	1	3
4	ಶಿವಮೊಗ್ಗ	1	1	2	1	1	1	2	1	1	3
5	ತುಮಕೂರು	1	1	8	1	1	1	1	1	1	2
6	ಕೋಲಾರ	1	1	5	1	1	1	1	1	1	2
7	ಚಿಕ್ಕಮಗಳೂರು	1	1	2	1	1	1	2	1	1	3
8	ದಕ್ಷಿಣ ಕನ್ನಡ	1	1	1	1	1	1	1	1	1	1
9	ಕೊಡುಗು	1	1	2	1	1	1	1	1	1	2
10	ಮೈಸೂರು	1	1	4	1	1	1	2	1	1	3
11	ಹಾಸನ	1	1	3	1	1	1	2	1	2	3
12	ಮಂಡ್ಯ	1	1	3	1	1	1	2	1	1	2

13	ಗುಲ್ಬರ್ಗ	1	1	9–3=6+1*	1	1	1	2	1	2	3
14	ಬೀದರ್	1	1	4	1	1	1	3	1	2	2
15	ಬಳ್ಳಾರಿ	1	1	5	1	1	1	1	1	1	2
16	ರಾಯಚೂರು	1	1	5	1	1	1	–	–	1	1
17	ಬೆಳಗಾವಿ	1	1	7	1	1	1	2	1	2	2
18	ಬಿಜಾಪುರ	1	1	5	1	1	1	1	1	1	1
19	ಉತ್ತರ ಕನ್ನಡ	1	1	4	1	1	1	1	1	1	3
20	ಧಾರವಾಡ	1	1	3	1	1	1	1	1	1	2
21	ಚಾಮರಾಜನಗರ	1	1	3	1	1	1	1	1	1	1
22	ಬಾಗಲಕೋಟೆ	1	1	3	1	1	1	1	1	1	1
23	ಕೊಪ್ಪಳ	1	1	4	1	–	1	–	1	1	1
24	ದಾವಣಗೆರೆ	1	1	4	–	1	1	–	1	1	1
25	ಉಡುಪಿ	1	1	1	1	–	1	–	1	1	1
26	ಹಾವೇರಿ	1	1	6	1	–	1	–	1	1	1
27	ಗದಗ	1	1	3	1	–	1	–	1	1	1
28	ರಾಮನಗರ	1	1	2	–	1	1	3	2	–	1
29	ಯಾದಗಿರಿ	1	1	3*	1	1	1	1	1	1	1
	ಒಟ್ಟು	29	29	63+43=106	27	25	28	37	29	32	52

ಟಿಪ್ಪಣಿ: ಗುಲ್ಬರ್ಗ ಜಿಲ್ಲಾ ಪಂಚಾಯತ್ ಯೋಜನಾ ಘಟಕದಲ್ಲಿರುವ 9 ತಾಲ್ಲೂಕು ಯೋಜನಾಧಿಕಾರಿಗಳ ಹುದ್ದೆಗಳ ಪೈಕಿ 3 ತಾಲ್ಲೂಕು ಯೋಜನಾಧಿಕಾರಿಗಳ ಹುದ್ದೆಗಳನ್ನು ಮರುಹೊಂದಾಣಿಕೆಯ ಮೂಲಕ ಯಾದಗಿರಿ ಜಿಲ್ಲಾ ಪಂಚಾಯತ್‌ಗೆ ವರ್ಗಾವಣೆಯಾಗಿರುತ್ತದೆ.

ಬಿ.ಚಿಕ್ಕರಾಜು
ಸರ್ಕಾರದ ಅಧೀನ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 1760

ಶಿಕ್ಷಣ ಸಚಿವಾಲಯ

ವಿಷಯ : ಬೆಂಗಳೂರಿನ ಸರ್ಕಾರಿ ಕೇಂದ್ರ ಮುದ್ರಣಾಲಯದಲ್ಲಿ ವಯೋ ನಿವೃತ್ತಿ ಹೊಂದಿ ಕಾಣೆಯಾಗಿರುವ ಶ್ರೀ ಚಿಕ್ಕಣ್ಣ ಇವರ ಪತ್ನಿ ಶ್ರೀಮತಿ ಜಯಮ್ಮ ಇವರಿಗೆ ಕುಟುಂಬ ವಿಶ್ರಾಂತಿ ವೇತನ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1) ದಿನಾಂಕ:23–09–2010ರ ಶ್ರೀಮತಿ ಜಯಮ್ಮ ಇವರ ಮನವಿ

2) ದಿನಾಂಕ: 21–03–1988ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಆರ್ಥಿಕ (ವಿಶೇಷ) 11 ಕುವಿವೇ/87

3) ದಿನಾಂಕ : 05–04–2011ರ ಸರ್ಕಾರಿ ಮುದ್ರಣಾಲಯ ನಿರ್ದೇಶಕರ ಪತ್ರ ಸಂಖ್ಯೆ:ಡಿಪಿಎಸ್/ಪಿಂಚಣಿ/191/2011–12.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಮನವಿಯಲ್ಲಿ ಶ್ರೀಮತಿ ಜಯಮ್ಮ ಇವರು ತನ್ನ ಪತಿ ಶ್ರೀ ಚಿಕ್ಕಣ್ಣ ಬಿನ್ ಗಾಳಪ್ಪ ಇವರು ದಿನಾಂಕ 8–1–2007ರಿಂದ ಕಾಣೆಯಾಗಿದ್ದು, ಈ ಬಗ್ಗೆ ನೆಲಮಂಗಲ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಲಾಗಿ ಸದರಿಯವರನ್ನು ಹುಡುಕಲು ಮಾಡಿದ ಪ್ರಯತ್ನ ವಿಫಲವಾಗಿದೆಯೆಂದು ಪೊಲೀಸ್ ಇಲಾಖೆಯು ದಿನಾಂಕ 20–12–2009 ರಂದು ಸಲ್ಲಿಸಿರುವ ವರದಿಯನ್ವಯ ತನಗೆ ಪಿಂಚಣಿ ಮಂಜೂರು ಮಾಡಿಕೊಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಕಾಣೆಯಾದ ಪೆನ್‌ಷನ್‌ದಾರರ ಕುಟುಂಬಕ್ಕೆ ಪೆನ್‌ಷನ್‌ದಾರರು ಕಣ್ಮರೆಯಾದ ದಿನಾಂಕದಿಂದ ಒಂದು ವರ್ಷದ ಅವಧಿಯು ಕಳೆದ ಬಳಿಕ ಅಂತಹ ನೌಕರರು ಮಾಡಿರುವ ನಾಮ ನಿರ್ದೇಶನವನ್ನು ಗಮನದಲ್ಲಿಟ್ಟುಕೊಂಡು ಕುಟುಂಬ ವಿಶ್ರಾಂತಿ ವೇತನವನ್ನು ಮಂಜೂರು ಮಾಡಲು ಅವಕಾಶವನ್ನು ಕಲ್ಪಿಸಿದೆ.

ಮೇಲೆ (3)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ನಿರ್ದೇಶಕರು, ಸರ್ಕಾರಿ ಮುದ್ರಣಾಲಯ ರವರು ಸರ್ಕಾರಿ ಮುದ್ರಣ ಇಲಾಖೆಯಲ್ಲಿ ಶ್ರೀ ಚಿಕ್ಕಣ್ಣ ಎಂಬುವರು ಹೆಡ್ ಕ್ಯಾಸ್ಟರ್ ಆಗಿ ದಿನಾಂಕ 19–8–1996ರಂದು ಸರ್ಕಾರಿ ಸೇವೆಯಿಂದ ವಯೋ ನಿವೃತ್ತಿ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ. ಸದರಿಯವರ ಪತ್ನಿಯಾದ ಶ್ರೀಮತಿ ಜಯಮ್ಮ ಎಂಬುವರು ದಿನಾಂಕ 2–2–2011 ರಂದು ಮನವಿಯೊಂದನ್ನು ಸಲ್ಲಿಸಿ ತನ್ನ ಪತಿಯು ದಿನಾಂಕ 8–1–2007 ರಿಂದ ಕಾಣೆಯಾಗಿರುತ್ತಾರೆಂದು ತಿಳಿಸಿರುತ್ತಾರೆ. ಈ ಸಂಬಂಧ ನೆಲಮಂಗಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ಪತ್ತೆಯಾಗಿರುವುದಿಲ್ಲವೆಂದು ಪೊಲೀಸರು ವರದಿ ನೀಡಿರುವುದಾಗಿ ತಿಳಿಸಲಾಗಿದೆ. ಪ್ರಕರಣವನ್ನು ವಿವರವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 208 ಇಎಸ್‌ಡಬ್ಲ್ಯೂ 2010, ಬೆಂಗಳೂರು, ದಿನಾಂಕ:12-7-2011

ಸರ್ಕಾರಿ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯಲ್ಲಿ ಹೆಡ್ ಕ್ಯಾಸ್ಟರ್ ಆಗಿ ವಯೋ ನಿವೃತ್ತಿ ಹೊಂದಿರುವ ಶ್ರೀ ಚಿಕ್ಕಣ್ಣ ರವರು ದಿನಾಂಕ: 8-1-2007 ರಿಂದ ಕಾಣೆಯಾಗಿರುವ ಹಿನ್ನೆಲೆಯಲ್ಲಿ ದಿನಾಂಕ 21-3-1988ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಆರ್ಥಿಕ (ವಿಶೇಷ) 11 ಕುವಿವೇ 87 ರಲ್ಲಿನ ಷರತ್ತಿಗೊಳಪಟ್ಟು ಶ್ರೀಮತಿ ಜಯಮ್ಮ ಕೋಂ ಚಿಕ್ಕಣ್ಣ ಇವರಿಗೆ ಲಭ್ಯವಾಗುವ ಕುಟುಂಬ ವಿಶ್ರಾಂತಿ ವೇತನ ಹಾಗೂ ಬಾಕಿ ಇರುವ ಪೆನ್‌ಷನ್ ಮೊಬಲಗನ್ನು ಪಾವತಿ ಮಾಡಲು ಸರ್ಕಾರವು ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಈ ಆದೇಶವನ್ನು ಅ.ಟಿ. ಸಂಖ್ಯೆ: ಆಇ(ವಿ) 112 ಪಿಇಎನ್-1/2011 ದಿನಾಂಕ: 30-5-2011 ರಲ್ಲಿ ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)ಯ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಿ.ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ)
ಶಿಕ್ಷಣ ಇಲಾಖೆ.

ಪಿ.ಆರ್.1761

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶ್ರೀ ಜಿ.ಎಂ. ರವೀಂದ್ರ, ಸಹಕಾರ ಸಂಘಗಳ ಜಂಟಿ ನಿಬಂಧಕರು ಇವರು ಮರುಸ್ಥಳ ನಿಯುಕ್ತಿಗಾಗಿ ನಿರೀಕ್ಷಿಸಿದ ಅವಧಿಯನ್ನು ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಪರಿಗಣಿಸುವ ಬಗ್ಗೆ.

ಓದಲಾಗಿದೆ: 1) ಸಂಖ್ಯೆ ಸಇ 118 ಎಸಸೇ 2011 ದಿನಾಂಕ 27-4-2011ರ ಅಧಿಸೂಚನೆ.
2) ಕ್ರಮ ಸಂಖ್ಯೆ ವಾಕೈ 45 ಸಸಕಾ 2011, ದಿನಾಂಕ 24-5-2011ರ ಅಧಿಸೂಚನೆ
3) ದಿನಾಂಕ 30-5-2011ರ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ.) ರವರ ಪತ್ರ
4) ಅಧಿಸೂಚನೆ ಸಂಖ್ಯೆ ವಾಕೈ 45 ಸಸಕಾ 2011, ದಿನಾಂಕ 10-6-2011.
5) ಅಧಿಸೂಚನೆ ಸಂಖ್ಯೆ ಸಇ 186 ಎಸಸೇ 2011 ದಿನಾಂಕ 10-6-2011.
6) ಶ್ರೀ ಜಿ.ಎಂ. ರವೀಂದ್ರ, ಸಹಕಾರ ಸಂಘಗಳ ಜಂಟಿ ನಿಬಂಧಕರು ಇವರ ದಿನಾಂಕ 14-6-2011ರ ಮನವಿ.

ಪ್ರಸ್ತಾವನೆ :

ಮೇಲೆ (1)ರಲ್ಲಿನ ದಿನಾಂಕ 27-4-2011ರ ಅಧಿಸೂಚನೆಯಲ್ಲಿ ಸಹಕಾರ ಇಲಾಖೆಯು ಶ್ರೀ ಜಿ.ಎಂ.ರವೀಂದ್ರ, ಸಹಕಾರ ಸಂಘಗಳ ಜಂಟಿ ನಿಬಂಧಕರು ಇವರನ್ನು ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಖಾಲಿ ಹುದ್ದೆಗೆ ನೇಮಿಸುವ ಸಲುವಾಗಿ ಇವರ ಸೇವೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಶಕ್ಕೆ ನೀಡಿರುತ್ತದೆ. ಈ ಆದೇಶದನ್ವಯ ಶ್ರೀ ಜಿ.ಎಂ. ರವೀಂದ್ರರವರು ದಿನಾಂಕ 2-5-2011ರಂದು ಪೂರ್ವಾಹ್ನ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಕರ್ತವ್ಯ ವರದಿ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರಲ್ಲಿನ ದಿನಾಂಕ 24-5-2011ರ ಅಧಿಸೂಚನೆಯಲ್ಲಿ ಜಿ.ಎಂ. ರವೀಂದ್ರ, ಸಹಕಾರ ಸಂಘಗಳ ಜಂಟಿ ನಿಬಂಧಕರು, ಇವರನ್ನು ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಎಂ.ಕೆ. ಹುಬ್ಬಳ್ಳಿ ಇಲ್ಲಿಗೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ (3)ರಲ್ಲಿನ ಪತ್ರದಲ್ಲಿ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತದವರು ಶ್ರೀ ಜಿ.ಎಂ. ರವೀಂದ್ರ ರವರ ಸೇವೆಯನ್ನು ಹಿಂದಕ್ಕೆ ಪಡೆಯುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ (4)ರಲ್ಲಿನ ದಿನಾಂಕ 10-6-2011ರ ಅಧಿಸೂಚನೆಯಲ್ಲಿ ಶ್ರೀ ಜಿ.ಎಂ. ರವೀಂದ್ರರವರನ್ನು ಮುಂದಿನ ಆದೇಶದವರೆಗೆ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಇಲ್ಲಿನ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯಲ್ಲಿ ಮರುಸ್ಥಳ ನಿಯುಕ್ತಿ ನೀಡಿ ಮುಂದುವರೆಸಲಾಗಿದೆ.

ಮೇಲೆ (5)ರಲ್ಲಿ ಓದಲಾಗಿರುವ ದಿನಾಂಕ 10-6-2011ರ ಅಧಿಸೂಚನೆಯಲ್ಲಿ ಸಹಕಾರ ಇಲಾಖೆಯು ಶ್ರೀ ಜಿ.ಎಂ. ರವೀಂದ್ರ ಸಹಕಾರ ಸಂಘಗಳ ಜಂಟಿ ನಿಬಂಧಕರ ಸೇವೆಯನ್ನು ಹಿಂದಕ್ಕೆ ಪಡೆದಿರುತ್ತದೆ.

ಮೇಲೆ (6)ರಲ್ಲಿ ಓದಲಾದ ದಿನಾಂಕ 14-6-2011ರ ಮನವಿಯಲ್ಲಿ ಶ್ರೀ ಜಿ.ಎಂ. ರವೀಂದ್ರ, ಸಹಕಾರ ಸಂಘಗಳ ಜಂಟಿ ನಿಬಂಧಕರು ಇವರು ದಿನಾಂಕ 2-5-2011ರಿಂದ 13-6-2011ರವರೆಗೆ ಇಲಾಖೆಯಲ್ಲಿ ಮರು ಸ್ಥಳ ನಿಯುಕ್ತಿಗಾಗಿ ನಿರೀಕ್ಷಿಸಿದ ಅವಧಿಯನ್ನು ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಘೋಷಣೆ ಮಾಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 45 ಸಸಕಾ 2011, ಬೆಂಗಳೂರು, ದಿನಾಂಕ 12-7-2011.

ಶ್ರೀ ಜಿ.ಎಂ. ರವೀಂದ್ರ ಜಂಟಿ ನಿಬಂಧಕರು ಸಹಕಾರ ಇಲಾಖೆರವರು ದಿನಾಂಕ 2-5-2011 ರಿಂದ 10-6-2011ರವರೆಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಸ್ಥಳ ನಿಯುಕ್ತಿ ನಿರೀಕ್ಷೆಯಲ್ಲಿದ್ದ ಅವಧಿಯನ್ನು (ಎರಡೂ ದಿನಗಳು ಸೇರಿ) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1957ರ ನಿಯಮ 8(15)(ಎಫ್) ಪ್ರಕಾರ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ರಾಮಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಹಕಾರಿ ಸಕ್ಕರೆ)

ಪಿ.ಆರ್.1762

ಕಂದಾಯ ಸಚಿವಾಲಯ

ವಿಷಯ : ಅಮಾನತ್ತಿನಲ್ಲಿರುವ ಶ್ರೀ ಕೆ. ರಮೇಶ್, ಶಾಖಾಧಿಕಾರಿ, ಭೂ ಸ್ವಾಧೀನ-1 ಶಾಖೆ ಮತ್ತು ಶ್ರೀ ಮಲ್ಲಿಕಾರ್ಜುನ ರಾಮಚಂದ್ರಪ್ಪ, ಸಹಾಯಕರು, ಭೂ ಸ್ವಾಧೀನ-1 ಶಾಖೆ, ಕಂದಾಯ ಇಲಾಖೆ ಇವರುಗಳ ಅಮಾನತ್ತನ್ನು ತೆರವುಗೊಳಿಸಿ ಸೇವೆಯಲ್ಲಿ ಪುನರ್ ಸ್ಥಾಪನೆ ಮಾಡುವ ಬಗ್ಗೆ-ಆದೇಶ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ:ಕಂಇ 174 ಸಮಿತಿ 2011 ದಿನಾಂಕ 30-6-2011.

ಪ್ರಸ್ತಾವನೆ :

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ತಿಳಿಸಿರುವ ಕರ್ತವ್ಯ ನಿರ್ಲಕ್ಷತೆ ಹಾಗೂ ದುರ್ನಡತೆಗಾಗಿ ಶ್ರೀ ಕೆ.ರಮೇಶ್, ಶಾಖಾಧಿಕಾರಿ, ಭೂ ಸ್ವಾಧೀನ-1 ಶಾಖೆ ಮತ್ತು ಶ್ರೀ ಮಲ್ಲಿಕಾರ್ಜುನ ರಾಮಚಂದ್ರಪ್ಪ, ಸಹಾಯಕರು, ಭೂ ಸ್ವಾಧೀನ-1 ಶಾಖೆ, ಕಂದಾಯ ಇಲಾಖೆ ಇವರುಗಳನ್ನು ವಿಚಾರಣೆ ಬಾಕಿ ಇಟ್ಟು ಸೇವೆಯಿಂದ ಅಮಾನತ್ತಿನಲ್ಲಿಡಲಾಗಿರುತ್ತದೆ.

ಶ್ರೀ ಮಲ್ಲಿಕಾರ್ಜುನ ರಾಮಚಂದ್ರಪ್ಪ, ಸಹಾಯಕರು, ಭೂ ಸ್ವಾಧೀನ-1 ಶಾಖೆ, ಕಂದಾಯ ಇಲಾಖೆ ಇವರು ದಿನಾಂಕ 5-7-2011ರಂದು ಮನವಿ ಸಲ್ಲಿಸಿ ತಾವು ಶಾಖೆಗೆ ಬಂದಾಗಿನಿಂದ ತಮ್ಮ ಕರ್ತವ್ಯಗಳನ್ನು ಯಾವುದೇ ದೂರುಗಳಿಗೆ ಅವಕಾಶವಿಲ್ಲದಂತೆ ಪ್ರಾಮಾಣಿಕವಾಗಿ ನಿರ್ವಹಿಸುತ್ತಾ ಬಂದಿರುವುದಾಗಿ ಹಾಗೂ ತಮಗೆ ತೀವ್ರ ಕೌಟುಂಬಿಕ ಸಮಸ್ಯೆಗಳು ಇದ್ದು, ಅವುಗಳನ್ನು ಪರಿಗಣಿಸಿ ಅಮಾನತ್ತನ್ನು ತೆರವುಗೊಳಿಸುವಂತೆ ಕೋರಿರುತ್ತಾರೆ. ದಿನಾಂಕ 30-6-2011ರ ಸರ್ಕಾರಿ ಆದೇಶದಲ್ಲಿ ತಿಳಿಸಿರುವ ನ್ಯಾಯಾಲಯ ಪ್ರಕರಣಗಳು ಇನ್ನೂ ಇತ್ಯರ್ಥಗೊಳ್ಳದೆ ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ.

ಈ ಹಿನ್ನೆಲೆಯಲ್ಲಿ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು, ಅವರ ಅಮಾನತ್ತನ್ನು ತೆರವುಗೊಳಿಸಿ ಸರ್ಕಾರಿ ಸೇವೆಯಲ್ಲಿ ಪುನರ್ ಸ್ಥಾಪನೆ ಮಾಡಲು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 174 ಸಮಿತಿ 2011, ಬೆಂಗಳೂರು, ದಿನಾಂಕ:11ನೇ ಜುಲೈ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಅಶೋಕ್‌ಕುಮಾರ್ ಸಿ. ಮನೋಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಆದ ನಾನು ಶ್ರೀ ಕೆ. ರಮೇಶ್, ಶಾಖಾಧಿಕಾರಿ, ಭೂ ಸ್ವಾಧೀನ-1 ಶಾಖೆ ಮತ್ತು ಶ್ರೀ ಮಲ್ಲಿಕಾರ್ಜುನ ರಾಮಚಂದ್ರಪ್ಪ, ಸಹಾಯಕರು, ಭೂ ಸ್ವಾಧೀನ-1 ಶಾಖೆ, ಕಂದಾಯ ಇಲಾಖೆ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು, ಅಮಾನತ್ತು ಆದೇಶವನ್ನು ಹಿಂತೆಗೆದುಕೊಂಡು, ತಕ್ಷಣದಿಂದ ಜಾರಿಗೆ ಬರುವಂತೆ, ಸೇವೆಯಲ್ಲಿ ಪುನರ್ ಸ್ಥಾಪನೆ ಮಾಡಿ ಆದೇಶಿಸಿರುತ್ತೇನೆ.

ಇವರ ಸ್ಥಳನಿಯುಕ್ತಿ ಬಗ್ಗೆ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಅಶೋಕ್‌ಕುಮಾರ್ ಸಿ. ಮನೋಲಿ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ.

ಪಿ.ಆರ್.1763

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಂ.ಎಸ್. ಟಂಕಸಾಲಿ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ(ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಬೈಲಹೊಂಗಲ ಇವರಿಗೆ ಆಯ್ಕೆಕಾಲಿಕ ವೇತನ ಶ್ರೇಣಿಯನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಅಧಿಸೂಚನೆ ಸಂಖ್ಯೆ: ಲಾ 56 ಪಿಪಿಇ 99 , ದಿನಾಂಕ:12-01-2000
2) ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 493 ಪಿಪಿಇ 2007, ದಿನಾಂಕ:17-12-2007
3) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂಖ್ಯೆ:ಡಿಪಿಎನ್/ಸಿಶಾ:1(ಎ)/53/2010-11, ದಿನಾಂಕ:8-12-2010

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯ ಕ್ರಮ ಸಂಖ್ಯೆ 8 ರನ್ವಯ ಶ್ರೀ ಎಂ.ಎಸ್. ಟಂಕಸಾಲಿ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ,ಬೈಲಹೊಂಗಲ ಇವರು ಸಹಾಯಕ ಸರ್ಕಾರಿ ಅಬಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ 21-01-2000ರ ಪೂರ್ವಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯನ್ವಯ ಶ್ರೀ ಎಂ.ಎಸ್. ಟಂಕಸಾಲಿ ಇವರ ಪರಿವೀಕ್ಷಣಾವಧಿಯನ್ನು ದಿನಾಂಕ 21-1-2003ರಂದು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಸರ್ಕಾರವು ಘೋಷಿಸಿರುತ್ತದೆ.

ಮೇಲೆ (3)ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ದಿನಾಂಕ 18-12-2010ರ ಪತ್ರದಲ್ಲಿ, ಮಹಾಲೇಖಪಾಲರಿಂದ ಶ್ರೀ ಎಂ.ಎಸ್. ಟಂಕಸಾಲಿ ಇವರ ಸೇವಾ ವಿವರಗಳನ್ನು ಪಡೆಯಲಾಗಿದ್ದು, ಇವರು ಮೇಲೆ (1)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯನ್ವಯ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಮೂಲಕ ಆಯ್ಕೆಗೊಂಡು ದಿನಾಂಕ 21-01-2000ರ ಪೂರ್ವಾಹ್ನದಂದು ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ವರದಿ ಮಾಡಿಕೊಂಡಿದ್ದು, ದಿನಾಂಕ 20-01-2010ಕ್ಕೆ 10 ವರ್ಷಗಳ ನಿರಂತರ ಸೇವೆಯನ್ನು ಯಾವುದೇ ಮುಂಬಡ್ತಿ ಇಲ್ಲದೇ ಪೂರೈಸಿರುತ್ತಾರೆ. ಮೇಲೆ (2)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯನ್ವಯ ಪರೀಕ್ಷಣಾವಧಿಯನ್ನು ಘೋಷಿಸಿರುವುದರಿಂದ, ಹುದ್ದೆಗೆ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಹೊಂದಿರುತ್ತಾರೆ. ಸದರಿ ಅವಧಿಯಲ್ಲಿ ಯಾವುದೇ ಅಸಾಧಾರಣ ರಜೆ ಅಥವಾ ವೇತನ ರಹಿತ ರಜೆಯನ್ನು ಪಡೆದಿರುವುದಿಲ್ಲ, ಅನಧಿಕೃತ ಗೈರು ಹಾಜರಾಗಿರುವುದಿಲ್ಲ ಹಾಗೂ ಅಮಾನತ್ತಿನಲ್ಲಿ ಇಟ್ಟಿರುವುದಿಲ್ಲ. ಈ ಹಿಂದೆ ಬಡ್ತಿಯನ್ನು ನೀಡಿರುವುದಿಲ್ಲ ಅಥವಾ ಸದರಿ ಅಧಿಕಾರಿಯು ಬಡ್ತಿಯನ್ನು ನಿರಾಕರಿಸಿರುವುದಿಲ್ಲ. ಸದರಿ ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲ ಅಥವಾ ಹೂಡುವ ಸಂಭವವಿರುವುದಿಲ್ಲ ಹಾಗೂ ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುವುದಿಲ್ಲ. ದಿನಾಂಕ 21-01-2010ಕ್ಕೆ ನಿಕಟಪೂರ್ವ 5 ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳಲ್ಲಿ ಯಾವುದೇ ಪ್ರತಿಕೂಲ ಷರಾ

ಇರುವುದಿಲ್ಲ.ಹೀಗಾಗಿ ಸದರಿಯವರು ಆಯ್ಕೆ ಕಾಲಿಕ ವೇತನ ಶ್ರೇಣಿಯ ಮಂಜೂರಾತಿಗೆ ಸರ್ಕಾರದ ಅಧಿಕೃತ ಜ್ಞಾಪನ ಸಂ:ಎಫ್‌ಡಿ 1 ಎಸ್‌ಆರ್ ಪಿ 85, ದಿನಾಂಕ 22-01-1985ರಲ್ಲಿ ವಿಧಿಸಿರುವ ನಿಬಂಧನೆಗಳನ್ನು ಪೂರೈಸಿದ್ದು, ಆಯ್ಕೆ ಕಾಲಿಕ ವೇತನ ಶ್ರೇಣಿಯ ಮಂಜೂರಾತಿಗೆ ಅರ್ಹರಿರುತ್ತಾರೆ. ಆದ್ದರಿಂದ ಶ್ರೀ ಎಂ.ಎಸ್. ಟಂಕಸಾಲಿ ಇವರಿಗೆ ದಿನಾಂಕ 21-01-2010ರಿಂದ ಜಾರಿಗೆ ಬರುವಂತೆ ರೂ.12,000-22,650ರ ಆಯ್ಕೆ ಕಾಲಿಕ ವೇತನ ಶ್ರೇಣಿಯನ್ನು ಮಂಜೂರು ಮಾಡುವಂತೆ ಶಿಫಾರಸ್ಸನ್ನು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 424 ಪಿಪಿಇ 2010, ಬೆಂಗಳೂರು, ದಿನಾಂಕ:11ನೇ ಜುಲೈ 2011.

ಪ್ರಸ್ತಾವನೆಯಲ್ಲಿನ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಂ.ಎಸ್. ಟಂಕಸಾಲಿ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಬೈಲಹೊಂಗಲ ಇವರು ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೇ 10 ವರ್ಷಗಳ ನಿರಂತರ ಸೇವೆಯನ್ನು ಸಲ್ಲಿಸಿರುವುದರಿಂದ ದಿನಾಂಕ 21-01-2010ರಿಂದ ಅನ್ವಯವಾಗುವಂತೆ ಕರ್ನಾಟಕ ನಾಗರೀಕ ಸೇವಾ (ಕಾಲಬದ್ಧ ಬಡ್ತಿ) ನಿಯಮಗಳು 1983 ಮತ್ತು ಸರ್ಕಾರದ ಅಧಿಸೂಚನೆ ಸಂ: ಎಫ್‌ಡಿ 17 ಎಸ್‌ಆರ್‌ಪಿ 2007, ದಿನಾಂಕ:16-05-2007ರ ನಿಯಮ 4(3) ಮತ್ತು 15ರನ್ವಯ ರೂ.11,400-21,600 ವೇತನ ಶ್ರೇಣಿಯಿಂದ ರೂ.12,000-22,650ರ ಆಯ್ಕೆ ಕಾಲಿಕ ವೇತನ ಶ್ರೇಣಿಯನ್ನು ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ.ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು-ಬಿ)

ಪಿ.ಆರ್.1764

ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಸಚಿವಾಲಯ

ವಿಷಯ : ಹೊರರಾಜ್ಯದ ಕನ್ನಡಿಗರಿಗೆ ಉನ್ನತ ವ್ಯಾಸಂಗಕ್ಕಾಗಿ ಪ್ರವೇಶ ಪಡೆಯಲು ಅವಕಾಶ ಕಲ್ಪಿಸುವ ಬಗ್ಗೆ.

ಓದಲಾಗಿದೆ: 1) ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರ ಪತ್ರ ಸಂಖ್ಯೆ: ಕಂದಾಯ:ಬಿಎಡಿಎಫ್/2011-12, ದಿನಾಂಕ: 22-06-2011.

2) ದಿನಾಂಕ 4-7-2011 ರಂದು ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ :

ರಾಯಚೂರು ಜಿಲ್ಲೆಯ ಗಡಿಗೆ ಹೊಂದಿಕೊಂಡಂತೆ ಆಂಧ್ರಪ್ರದೇಶ ರಾಜ್ಯದ ಮೆಹಬೂಬನಗರ ಜಿಲ್ಲೆಯ 13 ಗ್ರಾಮಗಳಲ್ಲಿ ಕನ್ನಡ ಶಾಲೆಗಳಿಗೆ ಅಗತ್ಯ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳು ಲಭ್ಯವಿಲ್ಲದ ಪ್ರಯುಕ್ತ ಗಡಿ ಪ್ರದೇಶ ವಿದ್ಯಾರ್ಥಿಗಳು ಕನ್ನಡ ಮಾಧ್ಯಮ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆಂದು ಮತ್ತು ಕನ್ನಡ ಶಾಲೆಗಳಿಗೆ ಬೀಗ ಹಾಕಲಾಗುತ್ತಿದೆ ಎಂದು ಸುದ್ದಿಗಳು ಪ್ರಕಟವಾಗಿರುವ ಹಿನ್ನೆಲೆಯಲ್ಲಿ ಸದರಿ 13 ಗ್ರಾಮಗಳನ್ನು ಕರ್ನಾಟಕ ಸರ್ಕಾರದ ವತಿಯಿಂದ ಗಡಿ ಪ್ರದೇಶ ಹೊರನಾಡು ಕನ್ನಡ ಗ್ರಾಮಗಳೆಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವ ಅವಶ್ಯಕತೆ ಇರುತ್ತದೆ. ಇದರಿಂದ ಹೊರನಾಡು ಕನ್ನಡಿಗರಿಗೆ ಉನ್ನತ ಶೈಕ್ಷಣಿಕ ವ್ಯಾಸಾಂಗ, ತಾಂತ್ರಿಕ ಶಿಕ್ಷಣಕ್ಕಾಗಿ ಪ್ರವೇಶ ಪಡೆಯಲು ಮತ್ತು ಇತರೆ ಸಂಬಂಧಿತ ಸೌಲಭ್ಯ ಪಡೆಯಲು ಅನುಕೂಲವಾಗುತ್ತದೆಂದು, ಈ ಕುರಿತು ಕ್ರಮವಹಿಸುವಂತೆ ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ರಾಯಚೂರು ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಕೋರಿಕೆಯ ಬಗ್ಗೆ ದಿನಾಂಕ 4-7-2011 ರಂದು ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರ ಅಧ್ಯಕ್ಷತೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ, ಸಮಾಜ ಕಲ್ಯಾಣ ಇಲಾಖೆ, ಕಾನೂನು ಇಲಾಖೆ ಹಾಗೂ ಇನ್ನಿತರ ಸಂಬಂಧಪಟ್ಟ ಇಲಾಖೆಗಳ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಸಮಗ್ರವಾಗಿ ಪರಿಶೀಲಿಸಿ, ಭಾರತ ದೇಶದ ಯಾವುದೇ ಭಾಗದಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ ಅಭ್ಯರ್ಥಿಗಳಿಗೆ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ, ಡಿಪ್ಲೋಮಾ ಕೋರ್ಸ್‌ಗಳ ಕಾಲೇಜುಗಳಲ್ಲಿ, ತಾಂತ್ರಿಕ ಸಂಸ್ಥೆಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ಪ್ರವೇಶ ಪಡೆಯಲು ಅವಕಾಶ ಕಲ್ಪಿಸುವಂತೆ ಆದೇಶ ಹೊರಡಿಸಲು ಸದರಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 73 ಕೆಒಎಲ್ 2011 (ಭಾ-1), ಬೆಂಗಳೂರು, ದಿನಾಂಕ:13-7-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಭಾರತ ದೇಶದ ಯಾವುದೇ ಭಾಗದಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ, ಓದಿದ ಅಭ್ಯರ್ಥಿಗಳಿಗೆ ಪದವಿ ಪೂರ್ವ ಕಾಲೇಜುಗಳಲ್ಲಿ, ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ, ಡಿಪ್ಲೋಮಾ ಕೋರ್ಸ್‌ಗಳ ಕಾಲೇಜುಗಳಲ್ಲಿ, ತಾಂತ್ರಿಕ ಸಂಸ್ಥೆಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ಹಾಗೂ ಇನ್ನಿತರೆ ವೃತ್ತಿಪರ ಕೋರ್ಸ್‌ಗಳಿಗೆ ಗಡಿನಾಡು/ಹೊರನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಿ, ಆದೇಶಿಸಿದೆ.

ಈ ಅಂಶದ ಬಗ್ಗೆ ಸಂಬಂಧಿತ ಇಲಾಖೆಗಳು ಸಂಬಂಧಪಟ್ಟ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಗೀತಾಕುಮಾರಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ
(ಆಡಳಿತ ಕನ್ನಡ)

ಪಿ.ಆರ್.1765

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಚುನಾವಣೆ ವಿಭಾಗ)ದಲ್ಲಿನ ಸೀನಿಯರ್ ಪ್ರೋಗ್ರಾಮರ್ ಹುದ್ದೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 56 ಸಸಿವಿ 2004, ದಿನಾಂಕ: 23–12–2004.
2. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 30 ಸಸಿವಿ 2006, ದಿನಾಂಕ : 7–6–2006.
3. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 607 ಸಅಸೇ 2008, ದಿನಾಂಕ : 23–1–2009.
4. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 60 ಸಅಸೇ 2010, ದಿನಾಂಕ : 19–8–2010.
5. ಅನಧಿಕೃತ ಟಿಪ್ಪಣಿ ಸಂಖ್ಯೆ : ಸಿಆಸುಇ 68 ಚುಸಿಆ 2003, ದಿನಾಂಕ : 22–3–2011.

ಪ್ರಸ್ತಾವನೆ :

ಕರ್ನಾಟಕ ಸರ್ಕಾರ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರೋಗ್ರಾಮರ್ ಹುದ್ದೆಯನ್ನು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ : 23–12–2004ರ ಸರ್ಕಾರಿ ಆದೇಶದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಚುನಾವಣೆ) ಇಲ್ಲಿನ ಜ್ಯೂನಿಯರ್ ಪ್ರೋಗ್ರಾಮರ್ ಹುದ್ದೆಯನ್ನು ಸೀನಿಯರ್ ಪ್ರೋಗ್ರಾಮರ್ ಹುದ್ದೆಗೆ ಉನ್ನತೀಕರಿಸಲಾಗಿದೆ ಹಾಗೂ ಮೇಲೆ ಕ್ರಮ ಸಂಖ್ಯೆ (2) ರಿಂದ (3) ರಲ್ಲಿನ ಆದೇಶಗಳಲ್ಲಿ ಸದರಿ ಹುದ್ದೆಯನ್ನು ಕಾಲಕಾಲಕ್ಕೆ ಮುಂದುವರೆಸಲಾಗಿದೆ. ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸದರಿ ಹುದ್ದೆಯನ್ನು ದಿನಾಂಕ : 1–4–2010 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಚುನಾವಣೆ) ವಿಭಾಗದಲ್ಲಿನ ಸೀನಿಯರ್ ಪ್ರೋಗ್ರಾಮರ್ ಹುದ್ದೆಯನ್ನು ದಿನಾಂಕ : 1–4–2011 ರಿಂದ 31–3–2012 ರವರೆಗೆ ಮುಂದುವರೆಸುವಂತೆ ಹಾಗೂ ಸದರಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಎನ್. ರಾಜು ಇವರನ್ನು ನಿಯೋಜನೆ ಮೇಲೆ ಮುಂದುವರೆಸುವಂತೆ ಕೋರಿದ್ದಾರೆ. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 227 ಸಅಸೇ 2011, ಬೆಂಗಳೂರು, ದಿನಾಂಕ : 14ನೇ ಜುಲೈ 2011.

ಕರ್ನಾಟಕ ಸರ್ಕಾರ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಚುನಾವಣೆ ವಿಭಾಗದಲ್ಲಿನ ಸೀನಿಯರ್ ಪ್ರೋಗ್ರಾಮರ್ ಹುದ್ದೆಯನ್ನು ದಿನಾಂಕ : 1–4–2011 ರಿಂದ 1 ವರ್ಷದ ಅವಧಿಗೆ ಮುಂದುವರೆಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 734 ಸೇವೆಗಳು–1/2011, ದಿನಾಂಕ : 6–6–2011 ಹಾಗೂ ಸಿ.ಆ.ಸು.ಇ. (ಸೇವಾ ನಿಯಮಗಳು) ವಿಭಾಗದ ಟಿಪ್ಪಣಿ ಸಂಖ್ಯೆ : ಸಿಆಸುಇ 163 ಸೇನಿಎ 2011, ದಿನಾಂಕ : 4–5–2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ (ಸೇವೆಗಳು–3)

ಪಿ.ಆರ್. ನಂ. 1766

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಸರ್ಕಾರದ ಅಧೀನ ಕಾರ್ಯದರ್ಶಿ, (ವಾರ್ತಾ) ಕನ್ನಡ ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ಹುದ್ದೆಗೆ ಪೂರಕ ಸಿಬ್ಬಂದಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 580 ಸಅಸೇ 2010, ದಿನಾಂಕ : 1–12–2010.
2. ಅಧೀನ ಕಾರ್ಯದರ್ಶಿ, ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಇಲಾಖೆರವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಕಸಂವಾಪ್ರ 253 ಸ್ವೀಮರ 2010, ದಿನಾಂಕ : 5–4–2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕನ್ನಡ ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿ ಹೊಸದಾಗಿ ಅಧೀನ ಕಾರ್ಯದರ್ಶಿ (ವಾರ್ತಾ) ಹುದ್ದೆ ಸೃಜಿಸಲಾಗಿದೆ. ಈ ಹುದ್ದೆಗೆ ಹೊಂದಿಕೊಂಡಂತೆ ಒಂದು ಶೀಘ್ರ ಲಿಪಿಗಾರರ ಹುದ್ದೆಯನ್ನು ಸೃಜಿಸುವಂತೆ ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಕೋರಲಾಗಿದೆ. ಈ ಬಗ್ಗೆ ಪರಿಶೀಲಿಸಿ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 221 ಸಅಸೇ 2011, ಬೆಂಗಳೂರು, ದಿನಾಂಕ : 13–7–2011

ಕರ್ನಾಟಕ ಸರ್ಕಾರ ಸಚಿವಾಲಯದ ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿನ ಅಧೀನ ಕಾರ್ಯದರ್ಶಿ (ವಾರ್ತಾ) ಹುದ್ದೆಗೆ ಪೂರಕವಾಗಿ ಒಂದು ಶೀಘ್ರಲಿಪಿಗಾರರ ಹುದ್ದೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೃಜಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 525 ವೆಚ್ಚ 12/2011, ದಿನಾಂಕ : 17–6–2011 ರಲ್ಲಿ ಆರ್ಥಿಕ ಇಲಾಖೆ ನೀಡಿರುವ ಸಹಮತಿ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ (ಸೇವೆಗಳು–3).

ಪಿ.ಆರ್. ನಂ. 1767

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ ಚಿಕ್ಕೋಡಿ ಪಟ್ಟಣಕ್ಕೆ ಅಂದಾಜು ರೂ. 50.00 ಕೋಟಿಗಳ ವೆಚ್ಚದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಕುರಿತು.

ಓದಲಾಗಿದೆ : 1. ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರುರವರ ಪತ್ರ ಸಂಖ್ಯೆ : ಕಜಮಂ: ವ್ಯನಿ/ಮುಅ(ಉ)/ಅಸ್ರೇಕಾಅ(ಜಿ)/ಉಮುಅ-2/ತಾಸ-1/3679/2010-11, ದಿನಾಂಕ : 21-1-2011.

2. ಸರ್ಕಾರದ ಆದೇಶ ಸಂಖ್ಯೆ : ನಅಇ 4 ಯುಡಿಎಸ್ 2010, ದಿನಾಂಕ : 31-3-2011.

ಪ್ರಸ್ತಾವನೆ :

ಚಿಕ್ಕೋಡಿ ಪಟ್ಟಣವು ಬೆಳಗಾಂ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, ಈ ಪಟ್ಟಣದ ಜನಸಂಖ್ಯೆಯು 2001ರ ಜನಗಣತಿ ಪ್ರಕಾರ 31,820 ಆಗಿದ್ದು, ಪ್ರಸ್ತುತ 38,970 ಆಗಿರುತ್ತದೆ. ಈ ಪಟ್ಟಣದ ಜನಸಂಖ್ಯೆಯು 2042ರ ವೇಳೆಗೆ 63,485 ಆಗಬಹುದೆಂದು ಅಂದಾಜಿಸಲಾಗಿದೆ.

ಪ್ರಸ್ತುತ ಈ ಪಟ್ಟಣಕ್ಕೆ ಕೃಷ್ಣ ನದಿ ಮೂಲದಿಂದ 2ನೇ ಹಂತದ ನೀರು ಸರಬರಾಜು ಯೋಜನೆಯಡಿ ತಲಾ ದಿನಂಪ್ರತಿ 135 ಲೀಟರ್‌ನಂತೆ ನೀರು ಸರಬರಾಜು ಮಾಡಲಾಗುತ್ತಿದೆ. ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯು ಇರುವುದಿಲ್ಲ. ಹೆಚ್ಚಿನ ಜನಸಂಖ್ಯೆಯು ಇಂಗುತೊಟ್ಟಿ ಮತ್ತು ಆಳಗುಂಡಿಗಳನ್ನು ತೋಡಿಕೊಂಡಿದ್ದು, ಕಲ್ಮಶ ನೀರನ್ನು ನಾಲೆಗಳ ಮತ್ತು ಚರಂಡಿಗಳ ಮೂಲಕ ಹರಿದು ಬಿಡುತ್ತಿರುವ ಕಾರಣ ಜನಗಳ ಆರೋಗ್ಯದ ಮೇಲೆ ಪ್ರಭಾವ ಬೀರುತ್ತಿದೆ. ಇದಲ್ಲದೆ ಪರಿಸರ ಮಾಲಿನ್ಯವಾಗುತ್ತಿದ್ದು, ಜನಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತಿದೆ.

ಆದ್ದರಿಂದ, ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು 2042ರಲ್ಲಿ ಅಂದಾಜಿಸಲಾದ ಜನಸಂಖ್ಯೆಗೆ ಯೋಜನೆಯನ್ನು ವಿನ್ಯಾಸಿಸಿ, 2010-11ನೇ ಸಾಲಿನ ಮಂಡಳಿಯ ಮತ್ತು ಲೋಕೋಪಯೋಗಿ ಇಲಾಖೆಯ ದರಪಟ್ಟಿ ಆಧರಿಸಿ ರೂ. 5000-00 ಲಕ್ಷಗಳಿಗೆ ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿರವರು ಆಡಳಿತಾತ್ಮಕ ಅನುಮೋದನೆ ಕೋರಿ ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

1.	ಸರ್ಕಾರದ ಸಾಲ (ಶೇ. 30)	:	ರೂ. 1500.00 ಲಕ್ಷಗಳು
2.	ಆರ್ಥಿಕ ಸಂಸ್ಥೆಯಿಂದ ಸಾಲ (ಶೇ. 50)	:	ರೂ. 2500.00 ಲಕ್ಷಗಳು
3.	ಸ್ಥಳೀಯ ಸಂಸ್ಥೆಯ ವಂತಿಕೆ (ಶೇ 20)	:	ರೂ. 1000.00 ಲಕ್ಷಗಳು
	ಒಟ್ಟು	:	ರೂ. 5000.00 ಲಕ್ಷಗಳು

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಮೇಲೆ ಓದಲಾದ ಕ್ರಮಾಂಕ (2)ರ ಆದೇಶದಲ್ಲಿ ಯೋಜನೆಯನ್ನು 2010-11ನೇ ಆರ್ಥಿಕ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿ, ಸಚಿವ ಸಂಪುಟದ ಅನುಮೋದನೆ ನಿರೀಕ್ಷಿಸಿ ಯೋಜನೆಗೆ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ.

ಮಂಡಳಿಯು ಸಲ್ಲಿಸಿರುವ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಿ, ಯೋಜನೆಯ ಅಂದಾಜು ವೆಚ್ಚದಲ್ಲಿ ಮಂಡಳಿಯು ಇ.ಟಿ.ಪಿ., ಮತ್ತು ಸಾದಿಲ್ವಾರು ವೆಚ್ಚಗಳನ್ನು ಶೇ. 15 ರಂತೆ ವಿಧಿಸಿದ್ದು, ಸದರಿ ವೆಚ್ಚಗಳನ್ನು ಶೇ 5 ಕ್ಕೆ ಮಿತಿಗೊಳಿಸಲು ಸರ್ಕಾರವು ನಿರ್ಧರಿಸಿ, ಅದರಂತೆ ಯೋಜನಾ ವೆಚ್ಚದಲ್ಲಿ ರೂ. 346.70 ಲಕ್ಷಗಳನ್ನು ಕಡಿತಗೊಳಿಸಿ ರೂ. 173.35 ಲಕ್ಷಗಳಿಗೆ ಮಿತಿಗೊಳಿಸಲಾಗಿದೆ. ಇದಲ್ಲದೆ, ಸದರಿ ಯೋಜನೆಗೆ ತಗಲಬಹುದಾದ ಎಸ್ಕಲೇಷನ್ ದರದ ಮೊತ್ತವಾದ ರೂ. 416.03 ಲಕ್ಷಗಳ ಮೊತ್ತವನ್ನು ಸ್ಥಳೀಯ ಸಂಸ್ಥೆಯೇ ಭರಿಸಬೇಕಾಗಿರುವುದರಿಂದ, ಸದರಿ ಮೊತ್ತವನ್ನು ಯೋಜನೆಯ ಅಂದಾಜು ಮೊತ್ತದಿಂದ ಕಡಿತಗೊಳಿಸಬೇಕಾಗಿರುತ್ತದೆ. ಇದರಿಂದ ಯೋಜನೆಯ ಒಟ್ಟು ಅಂದಾಜು ಮೊತ್ತದಲ್ಲಿ ರೂ. 762.73 ಲಕ್ಷಗಳನ್ನು ಕಡಿತಗೊಳಿಸಿ ಅಂದಾಜು ಮೊತ್ತವನ್ನು ರೂ. 5000.00 ದಿಂದ ರೂ. 4237.27 ಲಕ್ಷಗಳಿಗೆ ಮಿತಿಗೊಳಿಸಿ ಅನುಮೋದಿಸಬೇಕಾಗಿರುತ್ತದೆ.

ಈ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2010-11ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿ ಪ್ರವರ್ಗ 'ಡಿ' ರಡಿ ಸೇರಿಸಿ, ರೂ. 1666.67 ಲಕ್ಷಗಳನ್ನು ಅನುವು ಮಾಡಲಾಗಿದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 04 ಯುಡಿಎಸ್ 2011, ಬೆಂಗಳೂರು, ದಿನಾಂಕ : 11-7-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 4237.27 ಲಕ್ಷಗಳಲ್ಲಿ (ರೂ. ನಾಲ್ಕು ಸಾವಿರದ ಇನ್ನೂರ ಮೂವತ್ತೇಳು ಲಕ್ಷ ಇಪ್ಪತ್ತೇಳು ಸಾವಿರ ಮಾತ್ರ) ಯೋಜನೆಯನ್ನು ಕಲ್ಪಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಳಚರಂಡಿ ಯೋಜನೆಯಡಿ ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ತಾತ್ವಿಕವಾಗಿ ಸರ್ಕಾರದ ಅನುಮೋದನೆಯನ್ನು ನೀಡಿದೆ.

1. The Escalation charges should not form part of the estimate. It should be borne by the concerned CMC. The estimate is reduced to such extent.
2. ETP & contingencies are restricted to 5%.
3. Resolution of the Local body to bear the project cost should be sought and if any deviations and extra item works or variations should be taken up only after the consent of the Urban Local Body with a condition for the commitment of the ULB for the extra cost.
4. Adequate provision to be made by the Board in the following Years for timely completion of the Project.
5. Escalations and Tender premium should be approved with the prior consent of the ULB.
6. Water rates as proposed by KUWS&DB have to be implemented to meet O & M cost.
7. KTPP provisions, quality control and timely completion should ensured.
8. ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.

9. ಸದರಿ ಕಾಮಗಾರಿಯನ್ನು ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 90 Exp-9: 2011, ದಿನಾಂಕ : 5-3-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. ನಂ. 1768

ನಗರಾಭಿವೃದ್ಧಿ ಸಚಿವಾಲಯ

ವಿಷಯ : ತುಂಗಭದ್ರಾ ನದಿ ಮೂಲದಿಂದ ಹೊನ್ನಾಳಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯ ರೂ. 550.20 ಲಕ್ಷಗಳ ಪರಿಷ್ಕೃತ ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಕುರಿತು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 561 ಗ್ರಾನೀಸ(4) 2001, ದಿನಾಂಕ : 26-6-2002.

2. ಸರ್ಕಾರದ ಆದೇಶ ಸಂಖ್ಯೆ : ನಅಇ 86 ಯುಡಬ್ಲ್ಯೂಎಸ್ 2005, ದಿನಾಂಕ : 22-11-2006.

3. ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರುರವರ ಪತ್ರ ಸಂಖ್ಯೆ : ಕಜಮಂ:ಮುಅ/ಅಶ್ರೇಕಾಅ-1/ತಾಸ-8/ಹೊನೀಸಯೋ/2219/2009-10, ದಿನಾಂಕ : 19-2-2010.

ಪ್ರಸ್ತಾವನೆ :

ಹೊನ್ನಾಳಿ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಯೋಜನೆಯನ್ನು ಮೂಲತಃ ಜಿಲ್ಲಾ ಪಂಚಾಯಿತಿ ದಾವಣಗೆರೆ ವತಿಯಿಂದ ಕೈಗೆತ್ತಿಕೊಳ್ಳಲಾಗಿದ್ದು, ದಿನಾಂಕ : 7-2-2002ರ ಪತ್ರದನ್ವಯ ಸದರಿ ಯೋಜನೆಯನ್ನು ಕನನೀಸ ಮತ್ತು ಒಚ ಮಂಡಳಿಗೆ ವರ್ಗಾಯಿಸಲು ತೀರ್ಮಾನಿಸಿ ಜಿಲ್ಲಾ ಪಂಚಾಯಿತಿಯು ಸರ್ಕಾರಕ್ಕೆ ಪತ್ರವನ್ನು ಬರೆದ ಹಿನ್ನೆಲೆಯಲ್ಲಿ ಸರ್ಕಾರವು ತನ್ನ ಆದೇಶ ಸಂಖ್ಯೆ : ಗ್ರಾಅಪ 561 ಗ್ರಾನೀಸ(4) 2001, ದಿನಾಂಕ : 26-6-2002ರ ಆದೇಶದಲ್ಲಿ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಯೋಜನೆಯನ್ನು ವಹಿಸಿಕೊಡಲು ಅನುಮೋದನೆ ನೀಡಲಾಯಿತು. ಮಂಡಳಿಯು ದಿನಾಂಕ : 26-2-2003ರ ಪತ್ರದಲ್ಲಿ ಜಿಲ್ಲಾ ಪರಿಷತ್ ವತಿಯಿಂದ ಹೆಚ್ಚೇನೂ ಕೆಲಸಗಳು ಆಗಿರುವುದಿಲ್ಲದ ಕಾರಣ ಮತ್ತು ಉಳಿದ ಸಾಮಗ್ರಿಗಳು ಉಪಯೋಗಕ್ಕೆ ಬಾರದೇ ಇದ್ದುದರಿಂದ ಯೋಜನೆಯನ್ನು ಹೊಸದಾಗಿ ಕೈಗೆತ್ತಿಕೊಳ್ಳಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರೂ. 350 ಲಕ್ಷಗಳ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತ್ತು.

ಸದರಿ ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ನಡೆದ ಅನೇಕ ಸಭೆಗಳಲ್ಲಿ ಚರ್ಚಿಸಿ ದಿನಾಂಕ : 3-1-2005 ರಂದು ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ವೆಚ್ಚಗಳ ಪರಿಶೀಲನಾ ಸಭೆಯಲ್ಲಿ ಚರ್ಚಿಸಿ ಮುಂದಿನ ಆರ್ಥಿಕ ವರ್ಷದಲ್ಲಿ ಯೋಜನೆಯನ್ನು ರಾಜ್ಯ ಸರ್ಕಾರದ ಶೇಕಡ 100 ರಷ್ಟು ಅನುದಾನ ನೀಡುವ ಕೊಳವೆ ನೀರು ಸರಬರಾಜು ಯೋಜನೆಯಡಿ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಯಿತು. ಅದರಂತೆ ಮಂಡಳಿಯು ದಿನಾಂಕ : 20-4-2005ರ ಪತ್ರದಲ್ಲಿ ಈ ಯೋಜನೆಯಡಿ 2031ಕ್ಕೆ ಅಂದಾಜಿಸಲಾದ 33,000 ಜನಸಂಖ್ಯೆಗೆ ತಲಾ ದಿನಂಪ್ರತಿ 70 ಎಲ್‌ಪಿಸಿಡಿ ನೀರು ಸರಬರಾಜು ಮಾಡಲು ವಿನ್ಯಾಸಿಸಿ ರೂ. 350 ಲಕ್ಷಗಳ ಅಂದಾಜು ತಯಾರಿಸಿ, ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ. ಸದರಿ ಯೋಜನೆಯನ್ನು ಮಂಡಳಿಯ 2006-07ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿ, ಸರ್ಕಾರದ ಆದೇಶ ಸಂಖ್ಯೆ : ನಅಇ 86 ಯುಡಬ್ಲ್ಯೂಎಸ್ 2005 ದಿನಾಂಕ : 22-11-2006ರಲ್ಲಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಯಿತು.

ಈ ಯೋಜನೆಯನ್ನು ಆಗಸ್ಟ್ 2009 ರಲ್ಲಿ ಚಾಲನೆಗೊಳಿಸಿ ಪ್ರಸ್ತುತ ದಿನಂ ಪ್ರತಿ 3.10 ದಶಲಕ್ಷ ಲೀಟರ್ ನೀರನ್ನು ಪಟ್ಟಣಕ್ಕೆ ಸರಬರಾಜು ಮಾಡಲಾಗುತ್ತಿದೆ. ಸದರಿ ಯೋಜನೆಯನ್ನು ದಿನಾಂಕ 16-4-2010ರಂದು ಪಟ್ಟಣ ಪಂಚಾಯತಿಗೆ ಮುಂದಿನ ನಿರ್ವಹಣೆಗಾಗಿ ಹಸ್ತಾಂತರಿಸಲಾಗಿರುತ್ತದೆ. ಸದರಿ ಯೋಜನೆಯನ್ನು ಚಾಲನೆಗೊಳಿಸಲು ಒಟ್ಟು ರೂ. 550.20 ಲಕ್ಷಗಳಷ್ಟಾಗಿದ್ದು, ಇದು ಮೂಲ ಅಂದಾಜು ಮೊತ್ತವಾದ ರೂ. 350.00 ಲಕ್ಷಗಳಿಗಿಂತ ರೂ. 200.20 ಲಕ್ಷಗಳಷ್ಟು ಈ ಕೆಳಕಂಡ ಕಾರಣಗಳಿಗೆ ಹೆಚ್ಚಾಗಿರುತ್ತದೆ.

(೧) ಅನುಮೋದಿತ ಮೂಲ ಅಂದಾಜು ಪಟ್ಟಿಯನ್ನು 2002-03ನೇ ಸಾಲಿನ ದರಪಟ್ಟಿಯನ್ವಯ ತಯಾರಿಸಲಾಗಿದ್ದು, ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು 2006-07 ರಲ್ಲಿ (ದಿನಾಂಕ : 22-11-2006)ರಲ್ಲಿ ನೀಡಿದ್ದು, ಕಾಮಗಾರಿಯನ್ನು 2007-08ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ ;

(೨) ಇದಲ್ಲದೆ, ಈ ಕೆಳಕಂಡ ಕಾರಣಗಳಿಗಾಗಿ ಅಂದಾಜನ್ನು ಪರಿಷ್ಕರಿಸಲಾಗಿದೆ ;

ಅ.	ಮೂಲ ಅಂದಾಜು ಮೊತ್ತವು	:	ರೂ. 2,79,85,000
ಆ.	ಇಬಿಆರ್‌ಎಲ್ ಮತ್ತು ವರ್ಕ್‌ಸ್ಲಿಪ್	:	ರೂ. 56,25,827
ಇ.	ಟೆಂಡರ್ ಪ್ರೀಮಿಯಂ	:	ರೂ. 78,98,642
ಈ.	ದರಗಳ ಹೆಚ್ಚಳ (5 ವರ್ಷ)	:	ರೂ. 64,95,531
ಉ.	ಇ.ಟಿ.ಪಿ., ಮತ್ತು ಸಾದಿಲ್ವಾರು ವೆಚ್ಚಗಳು	:	ರೂ. 70,15,000
	ಒಟ್ಟು	:	ರೂ. 5,50,20,000

ಸದರಿ ಯೋಜನೆಯ ಇ.ಟಿ.ಪಿ. ಮತ್ತು ಸಾದಿಲ್ವಾರು ವೆಚ್ಚಗಳನ್ನು ಶೇ. 5ಕ್ಕೆ ಮಿತಿಗೊಳಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಯೋಜನೆಯ ಪರಿಷ್ಕೃತ ಮೂಲ ಅಂದಾಜು ಮೊತ್ತವು ರೂ. 2,79,85,000.00 ರಿಂದ 4,78,36,918.00 ಕ್ಕೆ ಹೆಚ್ಚಿರುವುದರಿಂದ ಸದರಿ

ಮೊತ್ತಕ್ಕೆ ಶೇ. 5 ರಂತೆ ಇ.ಟಿ.ಪಿ., ಮತ್ತು ಸಾದಿಲ್ವಾರು ವೆಚ್ಚಗಳನ್ನು ವಿಧಿಸಿದ್ದಲ್ಲಿ ರೂ. 23,91,846.00 ಗಳಾಗುತ್ತದೆ. ಇದರಿಂದ ಒಟ್ಟು ಅಂದಾಜು ಮೊತ್ತವನ್ನು ರೂ. 5,02,28,764.00 ಗಳಿಗೆ ಮಿತಿಗೊಳಿಸಬೇಕಾಗಿದೆ.

ಯೋಜನೆಯನ್ನು ಈಗಾಗಲೇ ಕೊಳವೆ ನೀರು ಸರಬರಾಜು ಯೋಜನೆಯಡಿ ಅನುಮೋದಿಸಿರುವ ಪ್ರಯುಕ್ತ (ಶೇ. 100 ರಷ್ಟು ಸರ್ಕಾರದ ಅನುದಾನ) ಹೆಚ್ಚುವರಿ ಮೊತ್ತವಾದ ರೂ. 200.20 ಲಕ್ಷಗಳನ್ನು ಮಂಡಳಿಯ 2010-11ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿ ರೂ. 500.00 ಲಕ್ಷಗಳ ಮೊತ್ತವನ್ನು ಅನುಷ್ಠಾನಗೊಳಿಸಿದ ಯೋಜನೆಗಳಿಗಾಗಿ ಪ್ರತ್ಯೇಕವಾಗಿ ನಿಗದಿಪಡಿಸಿದ್ದು, ಸದರಿ ಮೊತ್ತದಲ್ಲಿ ಈ ಮೊತ್ತವನ್ನು ಭರಿಸಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 31 ಯುಡಬ್ಲ್ಯೂಎಸ್ 2009, ಬೆಂಗಳೂರು, ದಿನಾಂಕ : 11-7-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ತುಂಗಭದ್ರಾ ನದಿ ಮೂಲದಿಂದ ಹೊನ್ನಾಳಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯನ್ನು ರೂ. 502.23 ಲಕ್ಷಗಳಲ್ಲಿ (ರೂ. ಐನೂರ ಎರಡು ಲಕ್ಷ ಇಪ್ಪತ್ತ ಮೂರು ಸಾವಿರ ಮಾತ್ರ) ಪರಿಷ್ಕೃತ ಅಂದಾಜಿಗೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1. ETP & contingencies are restricted to 5%.
2. The consent of the ULB shall be obtained for the extra cost.
3. Water rates as proposed by KUWS & DB have to be implemented to meet O & M cost of UGD.
4. KTPP provisions, quality control and timely completion should ensured.
5. ಮಂಡಳಿಯು ಸದರಿ ಯೋಜನೆಯನ್ನು ಈ ಹಿಂದೆ ಜಿಲ್ಲಾ ಪಂಚಾಯತಿ ದಾವಣಗೆರೆ ವತಿಯಿಂದ ಯೋಜನೆಯನ್ನು ಮಂಡಳಿಗೆ ವರ್ಗಾಯಿಸುವ ಮುನ್ನ ನಡೆದ ಕಾಮಗಾರಿಗಳ ವಿವರಗಳು ಮತ್ತು ಖರೀದಿ ಮಾಡಿದ ಸಾಮಗ್ರಿಗಳ ಪಟ್ಟಿಯನ್ನು ಹಾಗೂ ಈ ಯೋಜನೆಯಡಿಯಲ್ಲಿ ಜಿಲ್ಲಾ ಪಂಚಾಯತಿ ಕಾರ್ಯವ್ಯಾಪ್ತಿಯಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಂಡ ಕಡತವನ್ನು ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಲು ಅನುವಾಗುವಂತೆ ಪೂರ್ಣ ವರದಿಯನ್ನು ದಾಖಲೆಗಳ ಸಮೇತ ಸರ್ಕಾರಕ್ಕೆ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 169 ಇಎಕ್ಸ್‌ಪಿ-9/2011, ದಿನಾಂಕ : 26-3-2011 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. ನಂ. 1769

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಕೊಪ್ಪ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ಮೊತ್ತ ರೂ. 1250.00 ಲಕ್ಷಗಳ ವೆಚ್ಚದಲ್ಲಿ ಕಲ್ಪಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಕುರಿತು.

ಓದಲಾಗಿದೆ :
1. ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರುರವರ ಪತ್ರ ಸಂಖ್ಯೆ : ಕಜಮಂ:ತಾಂತ್ರಿಕ/ಕೊಪ್ಪ-ಒ.ಚ.ಯೋ/3681/2010-11, ದಿನಾಂಕ : 21-1-2011.
2. ಸರ್ಕಾರದ ಆದೇಶ ಸಂಖ್ಯೆ : ನಅಇ 03 ಯುಡಿಎಸ್ 2010, ದಿನಾಂಕ : 31-3-2011.

ಪ್ರಸ್ತಾವನೆ :

ಕೊಪ್ಪ ಪಟ್ಟಣವು ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, ಈ ಪಟ್ಟಣದ ಜನಸಂಖ್ಯೆಯು 2001ರ ಜನಗಣತಿಯ ಪ್ರಕಾರ 5113 ಇದ್ದು, ಪ್ರಸ್ತುತ ಜನಸಂಖ್ಯೆಯು 6000 ಇರುತ್ತದೆ.

ಕೊಪ್ಪ ಪಟ್ಟಣಕ್ಕೆ ತುಂಗಾ ನದಿಯಿಂದ ನೀರು ಸರಬರಾಜು ಮಾಡುತ್ತಿದ್ದು, ದಿನಂಪ್ರತಿ 1.66 ದಶಲಕ್ಷ ಲೀಟರ್ ಸಾಮರ್ಥ್ಯದ ನೀರು ಸರಬರಾಜು ಯೋಜನೆಯನ್ನು 2003ರಲ್ಲಿ ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ. ಸದರಿ ಯೋಜನೆಯನ್ನು 2030ಕ್ಕೆ ನಿರೀಕ್ಷಿಸಿದ 8000 ಜನಸಂಖ್ಯೆಗೆ ವಿನ್ಯಾಸಿಸಿ, ಯೋಜನೆಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಡಿಸೆಂಬರ್ 10, 2009ರಲ್ಲಿ ಪೂರ್ಣಗೊಳಿಸಲಾಗಿದೆ. ಪ್ರಸ್ತುತ ಪಟ್ಟಣಕ್ಕೆ ತಲಾ ದಿನಂಪ್ರತಿ 135 ಲೀಟರನಂತೆ ನೀರು ಸರಬರಾಜು ಮಾಡುತ್ತಿದ್ದು, ನಿರ್ವಹಣೆಯನ್ನು ಕೊಪ್ಪ ಪಟ್ಟಣ ಪಂಚಾಯ್ತಿ ವತಿಯಿಂದ ಮಾಡಲಾಗುತ್ತಿದೆ.

ಕೊಪ್ಪ ಪಟ್ಟಣದಲ್ಲಿ ಹಾಲಿ ಯಾವುದೇ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಮನೆಗಳಿಂದ ಹಾಗೂ ಸಾರ್ವಜನಿಕ ಕಟ್ಟಡಗಳಿಂದ ವಿಸರ್ಜಿಸಲ್ಪಟ್ಟ ತ್ಯಾಜ್ಯ ನೀರು, ಮಳೆ ನೀರು ಎಲ್ಲವೂ ತೆರೆದ ಚರಂಡಿಗಳಲ್ಲಿ ಹರಿಯುತ್ತಿದ್ದು, ಪಟ್ಟಣದ ಪರಿಸರವು ಹಾಳಾಗುತ್ತಿದೆ. ಆದುದರಿಂದ, ಸದರಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಯೋಜನೆಯನ್ನು ರೂಪಿಸಲಾಗಿದೆ. ಸದರಿ ಯೋಜನೆಯನ್ನು 2011-12ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ.

2010-11ನೇ ಸಾಲಿನ ಮಂಡಳಿ, ಸಣ್ಣ ನೀರಾವರಿ ಇಲಾಖೆ, ಮೈಸೂರು ವೃತ್ತ ಹಾಗೂ ಹಾಸನ ವೃತ್ತದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ದರಪಟ್ಟಿಯಂತೆ ಅಂದಾಜು ರೂ. 1250.00 ಲಕ್ಷಗಳಿಗೆ ಯೋಜನೆಯನ್ನು ತಯಾರಿಸಿ, ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿ ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿರವರು ಮೇಲೆ ಓದಲಾದ ಕ್ರಮಾಂಕ (1) ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಆರ್ಥಿಕ ಸಂಸ್ಥೆಗಳಿಂದ್ದ ಸಾಲ (ಶೇ. 50)	ರೂ. 625.00 ಲಕ್ಷಗಳು
ಸರ್ಕಾರದ ಸಾಲ (ಶೇ. 30)	ರೂ. 375.00 ಲಕ್ಷಗಳು
ಕೊಪ್ಪ ಪಟ್ಟಣ ಪಂಚಾಯ್ತಿ ವಂತಿಕೆ (ಶೇ. 20)	ರೂ. 250.00 ಲಕ್ಷಗಳು
ಒಟ್ಟು	ರೂ. 1250.00 ಲಕ್ಷಗಳು

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಯೋಜನೆಯನ್ನು 2010-11ನೇ ಸಾಲಿನ ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಸೇರಿಸಿ ರೂ. 420.00 ಲಕ್ಷಗಳನ್ನು ಅನುವು ಮಾಡಲಾಗಿದೆ. ಯೋಜನೆಯನ್ನು 2010-11ನೇ ಆರ್ಥಿಕ ಸಾಲಿನಲ್ಲಿ ಕೈಗೆತ್ತಿಕೊಳ್ಳುವ ದೃಷ್ಟಿಯಿಂದ, ಸಚಿವ ಸಂಪುಟದ ಅನುಮೋದನೆ ಬಾಕಿ ಇರಿಸಿ ಮೇಲೆ ಓದಲಾದ ಕ್ರಮಾಂಕ (2)ರ ಆದೇಶದಲ್ಲಿ ಸರ್ಕಾರವು ತಾತ್ವಿಕ ಅನುಮೋದನೆ ನೀಡಿದೆ. ಪ್ರಸ್ತುತ ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಬೇಕಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಯೋಜನೆಯ ಅಂದಾಜು ವೆಚ್ಚದಲ್ಲಿ ಮಂಡಳಿಯು ಇ.ಟಿ.ಪಿ., ಮತ್ತು ಸಾದಿಲ್ವಾರು ವೆಚ್ಚಗಳನ್ನು ಶೇ. 15 ರಂತೆ ವಿಧಿಸಿದ್ದು, ಸದರಿ ವೆಚ್ಚಗಳನ್ನು ಶೇ. 5 ಕ್ಕೆ ಮಿತಿಗೊಳಿಸಲು ಸರ್ಕಾರವು ನಿರ್ಧರಿಸಿ, ಅದರಂತೆ ಯೋಜನಾ ವೆಚ್ಚದಲ್ಲಿ ರೂ. 90.21 ಲಕ್ಷಗಳನ್ನು ಕಡಿತಗೊಳಿಸಿ ರೂ. 45.11 ಲಕ್ಷಗಳಿಗೆ ಮಿತಿಗೊಳಿಸಲಾಗಿದೆ. ಇದಲ್ಲದೆ, ಸದರಿ ಯೋಜನೆಗೆ ತಗಲಬಹುದಾದ ಎಸ್ಕಲೇಷನ್ ದರದ ಮೊತ್ತವಾದ ರೂ. 108.25 ಲಕ್ಷಗಳ ಮೊತ್ತವನ್ನು ಸ್ಥಳೀಯ ಸಂಸ್ಥೆಯೇ ಭರಿಸಬೇಕಾಗಿರುವುದರಿಂದ, ಸದರಿ ಮೊತ್ತವನ್ನು ಸಹ ಯೋಜನೆಯ ಅಂದಾಜು ಮೊತ್ತದಿಂದ ಕಡಿತಗೊಳಿಸಬೇಕಾಗಿರುತ್ತದೆ. ಇದರಿಂದ ಯೋಜನೆಯ ಒಟ್ಟು ಅಂದಾಜು ಮೊತ್ತದಲ್ಲಿ ರೂ. 198.46 ಲಕ್ಷಗಳನ್ನು ಕಡಿತಗೊಳಿಸಿ ಅಂದಾಜು ಮೊತ್ತವನ್ನು ರೂ. 1250.00 ರಿಂದ ರೂ. 1051.54 ಲಕ್ಷಗಳಿಗೆ ಮಿತಿಗೊಳಿಸಿ ಅನುಮೋದಿಸಬೇಕಾಗಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 03 ಯುಡಿಎಸ್ 2011, ಬೆಂಗಳೂರು, ದಿನಾಂಕ : 11-7-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 1051.54 ಲಕ್ಷಗಳಲ್ಲಿ (ರೂ. ಒಂದು ಸಾವಿರದ ಐವತ್ತೊಂದು ಲಕ್ಷ ಐವತ್ತ ನಾಲ್ಕು ಸಾವಿರ ಮಾತ್ರ) ಕಲ್ಪಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಳಚರಂಡಿ ಯೋಜನೆಯಡಿ ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1. The Escalation charges should not form part of the estimate. It should be borne by the concerned ULB. The estimate is reduced to such extent.
2. ETP & contingencies are restricted to 5%.
3. The consent of the ULB shall be obtained for the extra cost that might occur due to deviations, extra item works or variations in the Scheme.
4. Adequate provision to be made by the Board in the following Years for timely completion of the Project.
5. Escalations and Tender premium over and above the approved estimate cost should be approved with the prior consent of the ULB.
6. Water rates as proposed by KUWS&DB have to be implemented to meet O & M cost or UGD.
7. KTPP provisions, quality control and timely completion should ensured.
8. ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.
9. ಸದರಿ ಕಾಮಗಾರಿಯನ್ನು ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 89 Exp-9/2011, ದಿನಾಂಕ : 5-3-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. ನಂ. 1770

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಹೊನ್ನಾಳಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 3000.00 ಲಕ್ಷಗಳಲ್ಲಿ ಕಲ್ಪಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಕುರಿತು.

ಓದಲಾಗಿದೆ :
1. ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರುರವರ ಪತ್ರ ಸಂಖ್ಯೆ : ಕಜಮಂ:ಮುಅ/ಅಶ್ರೇಕಾಅ(ಬೆಂ)/ತಾಸ-8/ಸಅ-8/ಹೊ-ಒ.ಚ.ಯೋ/3756/2010-11, ದಿನಾಂಕ : 29-1-2011.
2. ಸರ್ಕಾರದ ಆದೇಶ ಸಂಖ್ಯೆ : ನಅಇ 01 ಯುಡಿಎಸ್ 2011, ದಿನಾಂಕ : 31-3-2011.

ಪ್ರಸ್ತಾವನೆ :

ಹೊನ್ನಾಳಿ ಪಟ್ಟಣವು ದಾವಣಗೆರೆ ಜಿಲ್ಲೆಯ ಒಂದು ಪ್ರಮುಖ ತಾಲ್ಲೂಕು ಕೇಂದ್ರವಾಗಿದ್ದು, 2001ರ ಜನಗಣತಿಯ ಪ್ರಕಾರ 15,568 ಹಾಗೂ ಪ್ರಸ್ತುತ 16,450 ಇರುತ್ತದೆ. ಈ ಪಟ್ಟಣದ ಜನಸಂಖ್ಯೆಯು 2026 ರಲ್ಲಿ 30,000 ಮತ್ತು 2041ರಲ್ಲಿ 45,000 ಆಗಬಹುದೆಂದು ಅಂದಾಜಿಸಲಾಗಿದೆ.

2. ಈ ಪಟ್ಟಣಕ್ಕೆ ತುಂಗಭದ್ರಾ ನದಿ ಮೂಲದಿಂದ 1996 ರಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಕಾರ್ಯಗತವಾದ 0.9 ಎಂ.ಎಲ್.ಡಿ., ಸಾಮರ್ಥ್ಯದ ಯೋಜನೆಯಿಂದ ಹಾಗೂ ತುಂಗಭದ್ರಾ ನದಿ ಮೂಲದಿಂದ 2009 ರಲ್ಲಿ ಚಾಲನೆಗೊಳಿಸಿದ 4.68 ಎಂ.ಎಲ್.ಡಿ., ಸಾಮರ್ಥ್ಯದ ನೀರು

ಸರಬರಾಜು ಯೋಜನೆಯಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಈ ಯೋಜನೆಯನ್ನು 2031ರಲ್ಲಿ ಅಂದಾಜಿಸಲಾದ 46,800 ಜನಸಂಖ್ಯೆಗೆ ತಲಾ ದಿನಂಪ್ರತಿ 100 ಲೀಟರ್‌ನಂತೆ ಸರಬರಾಜು ಮಾಡಲು ವಿನ್ಯಾಸಿಸಲಾಗಿದ್ದು, ಈ ಯೋಜನೆಯಿಂದ ಮತ್ತು ಕೊಳವೆ ಬಾವಿಗಳಿಂದ ಒಟ್ಟು ಸುಮಾರು 135 ಲೀಟರ್ ನೀರು ಸರಬರಾಜು ಮಾಡಬಹುದಾಗಿರುತ್ತದೆ. ಪ್ರಸ್ತುತ ನೀರು ಸರಬರಾಜು ನಿರ್ವಹಣೆಯನ್ನು ಪಟ್ಟಣ ಪಂಚಾಯತಿಯು ನಿರ್ವಹಿಸುತ್ತಿದೆ.

3. ಪ್ರಸ್ತುತ ಪಟ್ಟಣದಲ್ಲಿ ಯಾವುದೇ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಹೆಚ್ಚಿನ ಮನೆಯವರು ಸೋಕ್ ಪಿಟ್‌ಗಳ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಕೆಲವು ಪ್ರದೇಶಗಳಲ್ಲಿ ಮಲಿನ ನೀರನ್ನು ತೆರೆದ ಚರಂಡಿಗಳಿಗೆ ಹರಿದು ಬಿಡುತ್ತಿದ್ದು, ನೈರ್ಮಲ್ಯ ಸಮಸ್ಯೆ ಉಂಟಾಗುತ್ತಿದ್ದು, ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುತ್ತದೆ. ಆದ್ದರಿಂದ, ಶಾಶ್ವತ ಪರಿಹಾರವನ್ನು ನೀಡುವ ಸಲುವಾಗಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಅನಿವಾರ್ಯವಾಗಿರುತ್ತದೆ.

4. ಅದರಂತೆ, ಮಂಡಳಿಯು 2010-11ನೇ ಸಾಲಿನ ಮಂಡಳಿ ಹಾಗೂ ಲೋಕೋಪಯೋಗಿ ಇಲಾಖೆಯ ದರಪಟ್ಟಿಯನ್ನಾಧರಿಸಿ ರೂ. 3000.00 ಲಕ್ಷಗಳ ಅಂದಾಜಿನಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿ ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿರವರು ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

ಕ್ರಮ ಸಂಖ್ಯೆ	ವಿವರ	ಮೊತ್ತ
1.	ಸರ್ಕಾರದಿಂದ ಸಾಲ (ಶೇ. 30)	ರೂ. 900.00 ಲಕ್ಷಗಳು
2.	ಆರ್ಥಿಕ ಸಂಸ್ಥೆಗಳಿಂದ ಸಾಲ (ಶೇ. 50)	ರೂ. 1500.00 ಲಕ್ಷಗಳು
3.	ಸ್ಥಳೀಯ ಸಂಸ್ಥೆ ಕೊಡುಗೆ (ಶೇ. 20)	ರೂ. 600.00 ಲಕ್ಷಗಳು
	ಒಟ್ಟು	ರೂ. 3000.00 ಲಕ್ಷಗಳು

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಮೇಲೆ ಓದಲಾದ ಕ್ರಮಾಂಕ (2)ರ ಆದೇಶದಲ್ಲಿ ಸದರಿ ಯೋಜನೆಯನ್ನು 2010-11ನೇ ಸಾಲಿನಲ್ಲಿ ಮಂಡಳಿಯು ಕೈಗೆತ್ತಿಕೊಳ್ಳಲು ಅನುವಾಗುವಂತೆ ತಾತ್ವಿಕವಾಗಿ ಅನುಮೋದನೆಯನ್ನು ನೀಡಿರುತ್ತದೆ. ಪ್ರಸ್ತುತ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಬೇಕಾಗಿರುತ್ತದೆ. ಪ್ರಸ್ತುತ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಬೇಕಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಯೋಜನೆಯ ಅಂದಾಜು ವೆಚ್ಚದಲ್ಲಿ ಮಂಡಳಿಯು ಇ.ಟಿ.ಪಿ., ಮತ್ತು ಸಾದಿಲ್ವಾರು ವೆಚ್ಚಗಳನ್ನು ಶೇ. 15 ರಂತೆ ವಿಧಿಸಿದ್ದು, ಸದರಿ ವೆಚ್ಚಗಳನ್ನು ಶೇ. 5 ಕ್ಕೆ ಮಿತಿಗೊಳಿಸಲು ಸರ್ಕಾರವು ನಿರ್ಧರಿಸಿ, ಅದರಂತೆ ಯೋಜನಾ ವೆಚ್ಚದಲ್ಲಿ ರೂ. 234.36 ಲಕ್ಷಗಳನ್ನು ಕಡಿತಗೊಳಿಸಿ ರೂ. 117.18 ಲಕ್ಷಗಳಿಗೆ ಮಿತಿಗೊಳಿಸಲಾಗಿದೆ. ಇದಲ್ಲದೆ, ಸದರಿ ಯೋಜನೆಗೆ ತಗಲಬಹುದಾದ ಎಸ್ಕಲೇಷನ್ ದರದ ಮೊತ್ತವಾದ ರೂ. 281.23 ಲಕ್ಷಗಳ ಮೊತ್ತವನ್ನು ಸ್ಥಳೀಯ ಸಂಸ್ಥೆಯೇ ಭರಿಸಬೇಕಾಗಿರುವುದರಿಂದ, ಸದರಿ ಮೊತ್ತವನ್ನು ಯೋಜನೆಯ ಅಂದಾಜು ಮೊತ್ತದಿಂದ ಕಡಿತಗೊಳಿಸಬೇಕಾಗಿರುತ್ತದೆ. ಇದರಿಂದ ಯೋಜನೆಯ ಒಟ್ಟು ಅಂದಾಜು ಮೊತ್ತದಲ್ಲಿ ರೂ. 515.59 ಲಕ್ಷಗಳನ್ನು ಕಡಿತಗೊಳಿಸಿ ಅಂದಾಜು ಮೊತ್ತವನ್ನು ರೂ. 3000.00 ದಿಂದ ರೂ. 2484.41 ಲಕ್ಷಗಳಿಗೆ ಮಿತಿಗೊಳಿಸಿ ಅನುಮೋದಿಸಬೇಕಾಗಿರುತ್ತದೆ.

ಈ ಯೋಜನೆಯನ್ನು ಮಂಡಳಿಯ 2010-11ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆಯ ಪ್ರವರ್ಗ-ಡಿ ಯಡಿಯಲ್ಲಿ ಸೇರಿಸಿ, ರೂ. 734.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 01 ಯುಡಿಎಸ್ 2011, ಬೆಂಗಳೂರು, ದಿನಾಂಕ : 11-7-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 2484.41 ಲಕ್ಷಗಳಲ್ಲಿ (ರೂ. ಎರಡು ಸಾವಿರದ ನಾಲ್ಕು ನೂರ ಎಂಭತ್ತನಾಲ್ಕು ಲಕ್ಷ ನಲವತ್ತೊಂದು ಸಾವಿರ ಮಾತ್ರ) ಕಲ್ಪಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಳಚರಂಡಿ ಯೋಜನೆಯಡಿ ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ತಾತ್ವಿಕವಾಗಿ ಸರ್ಕಾರದ ಅನುಮೋದನೆಯನ್ನು ನೀಡಿದೆ.

1. The Escalation charges should not form part of the estimate. It should be borne by the concerned ULB. The estimate is reduced to such extent.
2. ETP & contingencies are restricted to 5%.
3. The consent of the ULB shall be obtained for the extra cost that might occur due to deviations, extra item works or variations in the Scheme.
4. Adequate provision to be made by the Board in the following Years for timely completion of the Project.
5. Escalations and Tender premium over and above the approved estimate cost should be approved with the prior consent of the ULB.
6. Water rates as proposed by KUWS&DB have to be implemented to meet O & M cost of UGD.
7. KTPP provisions, quality control and timely completion should ensured.
8. ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.
9. ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಈಆ 105 ಇಫಠಿ-9: 2011, ದಿನಾಂಕ : 4-3-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. ನಂ. 1771

ಒಳಾಡಳಿತ ಸಚಿವಾಲಯ

ವಿಷಯ: ಪೊಲೀಸ್ ಆಧುನೀಕರಣ ಕ್ರಿಯಾ ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನದಲ್ಲಿ ಬಳಸಿಕೊಳ್ಳದೆ ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 21011/65/09–ಪಿಎಂ–1. ದಿನಾಂಕ:08/03/2010.

2. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: ಎಡಿಜಿಪಿ/ಟಿಟಿಎಂ/ಎಂಡಿಎನ್/Rev/1/2011–12, ದಿನಾಂಕ: 07/05/2011.

ಪ್ರಸ್ತಾವನೆ:

ಮೇಲೆ ಓದಲಾದ (1) ದಿನಾಂಕ: 08/03/2010ರ ಪತ್ರದಲ್ಲಿ ಕೇಂದ್ರ ಸರ್ಕಾರವು ಪೊಲೀಸ್ ಆಧುನೀಕರಣ ಯೋಜನೆಗೆ ಹಿಂದಿನ ಸಾಲಿನಲ್ಲಿ ಬಿಡುಗಡೆ ಮಾಡಿ ಬಳಕೆಯಾಗದೇ ಇರುವ ಅನುದಾನವನ್ನು ಕೇಂದ್ರ ಗೃಹ ಸಚಿವಾಲಯವನ್ನು ಸಂಪರ್ಕಿಸದೆ ರಾಜ್ಯ ಮಟ್ಟದ ಉನ್ನತಾಧಿಕಾರಿಗಳ ಸಮಿತಿಯ ಅನುಮೋದನೆ ಪಡೆದು ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯೊಡನೆ ಸಂಪರ್ಕಿಸಿ ಅನುದಾನ ಪಡೆಯುವಂತೆ ತಿಳಿಸಿರುತ್ತಾರೆ.

ಮೇಲೆ ಓದಲಾದ (2) ದಿನಾಂಕ: 07/05/2011ರ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಪೊಲೀಸ್ ಆಧುನೀಕರಣ ಕ್ರಿಯಾ ಯೋಜನೆಗೆ 2009–10 ಮತ್ತು 2010–11ನೇ ಸಾಲಿನಲ್ಲಿ ಬಿಡುಗಡೆ ಮಾಡಿ ಬಳಸಿಕೊಳ್ಳದ ಅನುದಾನ ಕ್ರಮವಾಗಿ ರೂ. 10.77 ಮತ್ತು 23.87 ಕೋಟಿಗಳು ಅಂದರೆ ಒಟ್ಟು ಮೊತ್ತ ರೂ. 34.64 ಕೋಟಿಗಳನ್ನು ಮರುಮೌಲ್ಯೀಕರಣಗೊಳಿಸಿ 2011–12ನೇ ಸಾಲಿನಲ್ಲಿ ಅನುಮೋದನೆಗೊಂಡ ಕಾಮಗಾರಿಗಳಿಗೆ ಬಳಸಿಕೊಳ್ಳಲು 2011–12ನೇ ಸಾಲಿನ ಲೆಕ್ಕ ಶೀರ್ಷಿಕೆ 2055–00–115–0–00–125 ಆಧುನೀಕರಣ ಇದರಡಿ ಒದಗಿಸಿರುವ ರೂ. 104.00 ಕೋಟಿಗಳ ಅನುದಾನದಲ್ಲಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಪೊಲೀಸ್ ಆಧುನೀಕರಣ ಕ್ರಿಯಾ ಯೋಜನೆಗೆ 2009–10 ಮತ್ತು 2010–11ನೇ ಸಾಲಿನಲ್ಲಿ ಬಿಡುಗಡೆ ಮಾಡಿ ಬಳಸಿಕೊಳ್ಳದೆ ಬಾಕಿ ಉಳಿದಿರುವ ಒಟ್ಟು ಮೊತ್ತ ರೂ. 34.64 ಕೋಟಿಗಳನ್ನು ಮರುಮೌಲ್ಯೀಕರಣಗೊಳಿಸಿಕೊಂಡು 2011–12ನೇ ಸಾಲಿನಲ್ಲಿ ಅನುಮೋದನೆಗೊಂಡ ಕಾಮಗಾರಿಗಳಿಗೆ ಬಳಸಿಕೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 04/06/2011ರಂದು ನಡೆದ ರಾಜ್ಯ ಮಟ್ಟದ ಉನ್ನತಾಧಿಕಾರಿಗಳ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 07 ಪಿಎಫ್‌ಎಸ್ 2011 ಬೆಂಗಳೂರು, ದಿನಾಂಕ: 14/07/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2009–10 ಮತ್ತು 2010–11ನೇ ಸಾಲಿನಲ್ಲಿ ಬಿಡುಗಡೆ ಮಾಡಿ ಬಳಸಿಕೊಳ್ಳದ ಅನುದಾನ ಕ್ರಮವಾಗಿ ರೂ. 10.77 ಕೋಟಿ ಮತ್ತು 23.87 ಕೋಟಿಗಳು ಅಂದರೆ ಒಟ್ಟು ಮೊತ್ತ ರೂ. 34.64 ಕೋಟಿಗಳನ್ನು (ಮೂವತ್ನಾಲ್ಕು ಕೋಟಿ ಅರವತ್ನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಮರುಮೌಲ್ಯೀಕರಣಗೊಳಿಸಿ 2011–12ನೇ ಸಾಲಿನಲ್ಲಿ ಅನುಮೋದಿತ ಕಾಮಗಾರಿಗಳಿಗೆ ಬಳಸಿಕೊಳ್ಳಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ವೆಚ್ಚವನ್ನು 2011–12ನೇ ಸಾಲಿನ ಲೆಕ್ಕ ಶೀರ್ಷಿಕೆ 2055–00–115–0–00–125 ಆಧುನೀಕರಣ (ಯೋಜನೇತರ) ಇದರಡಿಯಲ್ಲಿ ಒದಗಿಸಿದ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 204 ವೆಚ್ಚ–11/2011. ದಿನಾಂಕ: 11/07/2011ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್ 1772

ಬಿ. ರಾಜಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಒಳಾಡಳಿತ ಸಚಿವಾಲಯ

ವಿಷಯ: ಒಳಾಡಳಿತ ಇಲಾಖೆಗೆ ಹೊಸದಾಗಿ ಮಂಜೂರು ಮಾಡಿರುವ ಉಪ ಕಾರ್ಯದರ್ಶಿ ಹಾಗೂ ಅಧೀನ ಕಾರ್ಯದರ್ಶಿಗಳು ನಿರ್ವಹಿಸಬೇಕಾದ ವಿಷಯ / ಕಾರ್ಯಭಾರ ಹಂಚಿಕೆಯ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 458 ಸಆಸೇ 2008. ದಿನಾಂಕ: 22–03–2011.

2) ಸರ್ಕಾರದ ಆದೇಶ ಸಂಖ್ಯೆ: ಒಇ12ಪಿಸಿಎನ್ 2011, ದಿನಾಂಕ: 21–05–2011

3) ಸರ್ಕಾರದ ಕಾರ್ಯದರ್ಶಿ (ಪಿಸಿಎಎಸ್) ಇವರ ಟಿಪ್ಪಣಿ ಸಂಖ್ಯೆ: ಒಇ 89/ಕಾ/2011 ದಿನಾಂಕ: 12–07–2011

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರಿ ಆದೇಶ ದಿನಾಂಕ: 22–03–2011ರಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿನ ಗ್ರೂಪ್–ಎ ಹುದ್ದೆಯಲ್ಲಿನ ಸೃಜನೆ ಹಾಗೂ ಉನ್ನತೀಕರಿಸಿ ಒಳಾಡಳಿತ ಇಲಾಖೆಗೆ ಒಂದು ಉಪಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ ಹುದ್ದೆಯನ್ನು ಅಧಿಕವಾಗಿ ಸೃಜಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶ ದಿನಾಂಕ: 21–05–2011ರಲ್ಲಿ ಸರ್ಕಾರದ ಉಪ ಕಾರ್ಯದರ್ಶಿ (ಪೊಲೀಸ್ ಸಹಾಯಕ ಸೇವೆಗಳು) ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ (ಪೊಲೀಸ್ ಸೇವೆಗಳು–ಬಿ) ಎಂದು ಪದನಾಮೀಕರಿಸಿ ಕಾರ್ಯವಿಷಯಗಳ ಮರುಹಂಚಿಕೆಯನ್ನು ಮಾಡಿ ಆದೇಶಿಸಲಾಗಿತ್ತು. ಮೇಲೆ ಓದಲಾದ (3)ರ ಟಿಪ್ಪಣಿಯಲ್ಲಿ ಒಳಾಡಳಿತ ಇಲಾಖೆಯ ಉಪಕಾರ್ಯದರ್ಶಿ (ಪೊಲೀಸ್

ಸಹಾಯಕ ಸೇವೆಗಳು) ನಿರ್ವಹಿಸುವ ವಿಷಯಗಳಿಗೆ ಸಂಬಂಧಿಸಿದಂತೆ ವಿಷಯ ಮರು ಹಂಚಿಕೆ ಮಾಡುವಂತೆ ಸರ್ಕಾರದ ಕಾರ್ಯದರ್ಶಿ (ಪಿಸಿಎಎಸ್) ರವರು ಸೂಚಿಸಿರುತ್ತಾರೆ.

ಸದರಿ ಟಿಪ್ಪಣಿಯನ್ನು ಪರಿಶೀಲಿಸಿ ಅದರಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ12 ಪಿಸಿಎನ್ 2011, ಬೆಂಗಳೂರು, ದಿನಾಂಕ: 14-07-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಒಇ12ಪಿಸಿಎನ್ 2011, ದಿನಾಂಕ: 21-05-2011ಅನ್ನು ಭಾಗಶಃ ಮಾರ್ಪಡಿಸಿ ಒಳಾಡಳಿತ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿ (ಪೋಲೀಸ್ ಸಹಾಯಕ ಸೇವೆಗಳು) ಇವರಿಗೆ ಹಂಚಿಕೆ ಮಾಡಿದ ಸೆರೆಮನೆ ಮತ್ತು ಸಿನಿಮಾ ಶಾಖೆಯ ಕಾರ್ಯ ವಿಷಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗು ಮುಂದಿನ ಆದೇಶದವರೆಗೆ ಸರ್ಕಾರದ ಜಂಟಿ ಕಾರ್ಯದರ್ಶಿ, (ಕಾನೂನು ಮತ್ತು ಸುವ್ಯವಸ್ಥೆ) ಇವರಿಗೆ ಮರು ಹಂಚಿಕೆ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಸಮನ್ವಯ)

ಪಿ.ಆರ್ 1773

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ: ಹೊಸ ಜಿಲ್ಲೆಯಾದ ಯಾದಗಿರ್ ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ಯಾದಗಿರ್ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಕಂ/ಜಿಯಾಜಿ/2011-12, ದಿನಾಂಕ: 10.05.2011.

ಪ್ರಸ್ತಾವನೆ:

ಹೊಸ ಜಿಲ್ಲೆಯಾದ ಯಾದಗಿರ್ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 2011-12ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4515-00-800-0-06-132(ಬಂಡವಾಳ ವೆಚ್ಚಗಳು) ಅಡಿ ₹40.00 ಕೋಟಿ, ಲೆಕ್ಕಶೀರ್ಷಿಕೆ 4515-00-800-0-06-422 (ವಿಶೇಷ ಘಟಕ ಯೋಜನೆ) ಅಡಿ ₹7.00 ಕೋಟಿ ಮತ್ತು ಲೆಕ್ಕಶೀರ್ಷಿಕೆ 4515-00-800-0-06-423 (ಗಿರಿಜನ ಉಪಯೋಜನೆ) ಅಡಿ ₹3.00 ಕೋಟಿ ಒಟ್ಟು ₹50.00 ಕೋಟಿಗಳನ್ನು ಒದಗಿಸಲಾಗಿದೆ. ಇದು ಯಾದಗಿರಿ ಜಿಲ್ಲೆಗೆ ಒಂದು ಬಾರಿಯ ಅನುದಾನವಾಗಿರುತ್ತದೆ. ಮೇಲೆ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಯಾದಗಿರ್ ಇವರು ಸದರಿ ಮೊತ್ತದಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ಪಟ್ಟಿಯನ್ನು ಸಲ್ಲಿಸಿ ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಯೋಇ 17 ಹೈಕಮಂ 2011, ಬೆಂಗಳೂರು, ದಿನಾಂಕ: 12-07-2011.

2011-12ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4515-00-800-0-06 ಅಡಿ ಒದಗಿಸಿರುವ ಅನುದಾನ ₹50.00 ಕೋಟಿಗಳಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಷರತ್ತುಗಳು:

1. ಜಿಲ್ಲಾಧಿಕಾರಿಗಳು, ಯಾದಗಿರ್ ಇವರು ಸದರಿ ಕಾಮಗಾರಿಗಳ ವಿವರವಾದ ಅಂದಾಜು ಪಟ್ಟಿಗಳನ್ನು ಅನುಷ್ಠಾನಾಧಿಕಾರಿಗಳಿಂದ ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಅಗತ್ಯ ತಾಂತ್ರಿಕ ಮಂಜೂರಾತಿ ಪಡೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಪಾಲಿಸಿ ಅನುಷ್ಠಾನಗೊಳಿಸುವುದು.
2. ಕಾಮಗಾರಿಗಳ ವಿವರವಾದ ಅಂದಾಜು ಪಟ್ಟಿಗಳನ್ನು ಸರ್ಕಾರಕ್ಕೆ ಕೂಡಲೇ ಸಲ್ಲಿಸುವುದು.
3. ಸದರಿ ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಗಳನ್ನು ಪ್ರತಿ ತಿಂಗಳು ಎಂಎಂಆರ್ ಸಭೆಯಲ್ಲಿ ಪರಿಶೀಲಿಸಲು ಎಂಪಿಕ್ ನಮೂನೆಯಲ್ಲಿ ಪ್ರಗತಿಯ ವಿವರಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.
4. ಹಣ ವಿನಿಯೋಗ ಪ್ರಮಾಣ ಪತ್ರವನ್ನು ನಿಯತಕಾಲಿಕವಾಗಿ ಸರ್ಕಾರಕ್ಕೆ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 265 ವೆಚ್ಚ-6/2011, ದಿನಾಂಕ: 25.05.2011 ರಲ್ಲಿನ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಚಿಕ್ಕರಾಜು

ಸರ್ಕಾರದ ಅಧೀನ ಕಾರ್ಯದರ್ಶಿ 1 & 2,

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ

ಅನುಬಂಧ

1. ಯಾದಗಿರಿ ವಿಧಾನ ಸಭಾ ಕ್ಷೇತ್ರದಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳು

ಕ್ರ ಸಂ.	ಕಾಮಗಾರಿಯ ವಿವರಗಳು	ಅಂದಾಜು ಮೊತ್ತ (₹ಲಕ್ಷಗಳಲ್ಲಿ)	ಯೋಜನೆ ವಿವರ
1	ಯಾದಗಿರಿ ನಗರದ ಮುಸ್ಲಿಂ ಸಮಾಜದ ಮಹಿಳಾ ಕಲ್ಯಾಣ & ವಿವಿಧೋದ್ದೇಶಕ್ಕಾಗಿ ತರಬೇತಿ ಕಾರ್ಯಾಗಾರ ಕೇಂದ್ರದ ಕಟ್ಟಡ ನಿರ್ಮಾಣ.	75.00	
2	ಯಾದಗಿರಿ ನಗರದ ಬಡೆ ಖುರೇಶಿ ಸಮಾಜದ "ಸಮುದಾಯ ಭವನ" ನಿರ್ಮಾಣ	25.00	
3	ಯಾದಗಿರಿ ನಗರದ ಕೋಟಗರವಾಡಾದಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ.	30.00	ಎಸ್.ಸಿ.ಪಿ
4	ಯಾದಗಿರಿ ನಗರದ ಗುರುಭವನ (ಶಿಕ್ಷಕರಿಗಾಗಿ) ಕಟ್ಟಡ ನಿರ್ಮಾಣ.	25.00	ಎಸ್.ಸಿ.ಪಿ
5	ಯಾದಗಿರಿ ನಗರದಲ್ಲಿ " ಜಿಲ್ಲಾ ರಂಗಮಂದಿರ" ಕಟ್ಟಡ ನಿರ್ಮಾಣ.	200.00	ಎಸ್.ಸಿ.ಪಿ
6	ಯಾದಗಿರಿ ನಗರದಲ್ಲಿ " ಕನ್ನಡ ಭವನ" ಕಟ್ಟಡ ನಿರ್ಮಾಣ	100.00	
7	ಯಾದಗಿರಿ ನಗರದ ತಾಲ್ಲೂಕು ಕೇಂದ್ರದಲ್ಲಿ ಬ್ಯಾರಿಕೇಡಿಂಗ್, ಟ್ರಾಫಿಕ್ ಸಿಗ್ನಲ್, ಸಂಚಾರಿ ನಾಮಫಲಕಗಳ ನಿರ್ಮಾಣ.	45.00	
	ಒಟ್ಟು	**500.00**	

2. ಗುರುಮಿಠಕಲ್ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳು

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (₹ಲಕ್ಷಗಳಲ್ಲಿ)	ಯೋಜನೆಯ ವಿವರ
1	ಯಾದಗಿರಿ ತಾಲ್ಲೂಕಿನ ಬಾಡಿಯಾಳದಿಂದ ರಾಜ್ಯ ಗಡಿಯವರೆಗೆ (ಸೈದಾಪುರ ರೇಲ್ವೆ ಕ್ರಾಸ್) ರಸ್ತೆ ಸುಧಾರಣೆ ಹಾಗೂ ಸೇತುವೆ ನಿರ್ಮಾಣ.	100.00	
2	ಯಾದಗಿರಿ ತಾಲ್ಲೂಕಿನ ಎಸ್, ಹೆಚ್ 10 ರಿಂದ ಮುಧೋಳ-ಯಲಗೇರಾ ರಾಜ್ಯ ಗಡಿಯವರೆಗೆ ರಸ್ತೆ ಸುಧಾರಣೆ (ಸೈದಾಪುರ- ಬಾಡಿಯಾಳ) ಕಿ.ಮೀ 73.00 ರಿಂದ 76.00ರವರೆಗೆ.	100.00	
3	ಯಾದಗಿರಿ ತಾಲ್ಲೂಕಿನ ಕೊಂಕಲ್‌ದಿಂದ ಅರಕೇರಾ ರಸ್ತೆ ವಯಾ ಯಲ್ಹೇರಿ ರಸ್ತೆ ಕಿ.ಮೀ 1.60 ರಲ್ಲಿ ಸೇತುವೆ ನಿರ್ಮಾಣ.	100.00	
4	ಯಾದಗಿರಿ ತಾಲ್ಲೂಕಿನ ಯದ್ಲಾಪುರ ಗ್ರಾಮದಿಂದ ಗಾಜರಕೋಟ್ ಗ್ರಾಮದ ಸಂಪರ್ಕ ರಸ್ತೆಗೆ ಸೇತುವೆ ಮತ್ತು ರಸ್ತೆ ನಿರ್ಮಾಣ. (ಪ.ಜಾತಿ)	50.00	ಎಸ್.ಸಿ.ಪಿ
5	ಯಾದಗಿರಿ ತಾಲ್ಲೂಕಿನ ಹಿಮಲಾಪುರ ಗ್ರಾಮದ ಹಳೆ ಕತಿಬಿ ಹತ್ತಿರ ಅಣೆಕಟ್ಟು ನಿರ್ಮಾಣ	25.00	
6	ಯಾದಗಿರಿ ತಾಲ್ಲೂಕಿನ ಚಪೆಟ್ಲಾ ಗ್ರಾಮದ ಪ್ರೌಢಶಾಲೆಯಿಂದ ಹುಸೇನಪ್ಪ ಮನೆಯವರೆಗೆ ಒಳಚರಂಡಿ & ಸಿ.ಸಿ ರಸ್ತೆ ನಿರ್ಮಾಣ. (ಪ.ಜಾತಿ)	15.00	ಎಸ್.ಸಿ.ಪಿ
7	ಕಡ್ಲೂರು ಗ್ರಾಮದಿಂದ ಸೈದಾಪುರ ಮುಖ್ಯರಸ್ತೆಯವರೆಗೆ ಸೇತುವೆ ಹಾಗೂ ರಸ್ತೆ ನಿರ್ಮಾಣ	45.00	ಎಸ್.ಸಿ.ಪಿ
8	ಯಾದಗಿರಿ ತಾಲ್ಲೂಕಿನ ಜೀನಕೇರಾ- ಪಗಲಾಪುರ ರಸ್ತೆ 0.00 ಕಿ.ಮೀ 4.00 ಕಿ.ಮೀ ಸುಧಾರಣೆ. ಕೊಂಕಲ್ ನಿಂದ ಅರಕೇರಾ ರಸ್ತೆ ವಯಾ ಯಲ್ಹೇರಿ.	15.00	ಎಸ್.ಸಿ.ಪಿ
9	ಯಾದಗಿರಿ ತಾಲ್ಲೂಕಿನ ಬಮರಾಲದೊಡ್ಡಿಯಿಂದ ಕಡಚೂರು ಗ್ರಾಮದ ವರೆಗೆ ರಸ್ತೆ ನಿರ್ಮಾಣ. (ಪ.ಪಂಗಡ)	20.00	ಎಸ್.ಸಿ.ಪಿ
10	ಯಾದಗಿರಿ ತಾಲ್ಲೂಕಿನ ಬಳಿಚಕ್ರ ಗ್ರಾಮದಿಂದ ಹನುಮಾನ ಗುಡಿಯವರೆಗೆ ರಸ್ತೆ ಸುಧಾರಣೆ. (ಪ.ಪಂಗಡ)	15.00	ಎಸ್.ಸಿ.ಪಿ
11	ಯಾದಗಿರಿ ತಾಲ್ಲೂಕಿನ ಬೆಳಗೇರಾ ಕ್ರಾಸ್‌ದಿಂದ ಹೊನಗೇರಾ ಗ್ರಾಮದವರೆಗೆ ರಸ್ತೆ ಸುಧಾರಣೆ.	10.00	
12	ಯಾದಗಿರಿ ತಾಲ್ಲೂಕಿನ ಕಮಲನಗರ ತಾಂಡಾದಲ್ಲಿ ಒಳಚರಂಡಿ ಮತ್ತು ಸಿ.ಸಿ ರಸ್ತೆ ನಿರ್ಮಾಣ. (ಪ. ಜಾತಿ)	5.00	
	ಒಟ್ಟು	**500.00**	

3. ಶಹಪುರ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳು

ಕ್ರ ಸಂ.	ಕಾಮಗಾರಿಯ ವಿವರ	ಅಂದಾಜು ಮೊತ್ತ (₹ಲಕ್ಷಗಳಲ್ಲಿ)	ಯೋಜನೆಯ ವಿವರ
1	ಸುರಪುರ ತಾಲ್ಲೂಕಿನ ಕೆಂಭಾವಿ ಗ್ರಾಮದಲ್ಲಿ ಸಿ.ಸಿ ರಸ್ತೆ ಒಳಚರಂಡಿ ನಿರ್ಮಾಣಕ್ಕಾಗಿ.	50.00	
2	ದರ್ಶನಾಪುರ ಗ್ರಾಮದಲ್ಲಿ ಸಿ.ಸಿ ರಸ್ತೆ & ಒಳಚರಂಡಿ ನಿರ್ಮಾಣಕ್ಕಾಗಿ.	50.00	
3	ಗೋಗಿ.ಕೆ & ಗೋಗಿ.ಪಿ ಗ್ರಾಮದಲ್ಲಿ ಸಿ.ಸಿ ರಸ್ತೆ & ಒಳಚರಂಡಿ ನಿರ್ಮಾಣಕ್ಕಾಗಿ	50.00	
4	ಸಗರ ಗ್ರಾಮದಲ್ಲಿ ಸಿ.ಸಿ. ರಸ್ತೆ & ಒಳಚರಂಡಿ ನಿರ್ಮಾಣಕ್ಕಾಗಿ.	30.00	
5	ಸುರಪುರ ತಾಲ್ಲೂಕಿನ ನಗನೂರುದಿಂದ ಕಿರದಳ್ಳಿ ಗ್ರಾಮದಲ್ಲಿ ರಸ್ತೆ ನಿರ್ಮಾಣಕ್ಕಾಗಿ.	40.00	ಎಸ್.ಸಿ.ಪಿ
6	ಕೊಡಮನಹಳ್ಳಿ ಗ್ರಾಮದಿಂದ ಗುಲಬರ್ಗಾ ಮುಖ್ಯ ರಸ್ತೆಯವರೆಗೆ ಡಾಂಬರೀಕರಣಕ್ಕಾಗಿ.	40.00	"
7	ದರ್ಶನಾಪುರದಿಂದ ಉಕ್ಕಿನಾಳದವರೆಗೆ ರಸ್ತೆ ನಿರ್ಮಾಣಕ್ಕಾಗಿ 0.00 ಕಿ.ಮೀ ದಿಂದ 2.00 ಕಿ.ಮೀ ವರೆಗೆ	40.00	"
8	ಶಹಾಪುರ ಪಟ್ಟಣದಲ್ಲಿ ಸಿ.ಸಿ ರಸ್ತೆ ಮತ್ತು ಒಳಚರಂಡಿ ನಿರ್ಮಾಣಕ್ಕಾಗಿ ಪ್ಯಾಕೇಜ್-1	50.00	"
9	ಶಹಾಪುರ ಪಟ್ಟಣದಲ್ಲಿ ಸಿ.ಸಿ ರಸ್ತೆ ಮತ್ತು ಒಳಚರಂಡಿ ನಿರ್ಮಾಣಕ್ಕಾಗಿ ಪ್ಯಾಕೇಜ್-2	50.00	"
10	ಶಹಾಪುರ ಪಟ್ಟಣದಲ್ಲಿ ಸಿ.ಸಿ ರಸ್ತೆ ಮತ್ತು ಒಳಚರಂಡಿ ನಿರ್ಮಾಣಕ್ಕಾಗಿ ಪ್ಯಾಕೇಜ್-3	50.00	
11	ಶಹಾಪುರ ಪಟ್ಟಣದಲ್ಲಿ ಸಿ.ಸಿ ರಸ್ತೆ ಮತ್ತು ಒಳಚರಂಡಿ ನಿರ್ಮಾಣಕ್ಕಾಗಿ ಪ್ಯಾಕೇಜ್-4	50.00	
	ಒಟ್ಟು	**500.00**	

4. ಸುರಪುರ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳು

ಕ್ರ ಸಂ.	ಕಾಮಗಾರಿಯ ವಿವರ	ಅಂದಾಜು ಮೊತ್ತ (₹ಲಕ್ಷಗಳಲ್ಲಿ)	ಯೋಜನೆಯ ವಿವರ
1	ನಾರಾಯಣಪುರದಲ್ಲಿ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ	100.00	ಟಿ.ಎಸ್.ಪಿ
2	ಕೊಡೆಕಲ್‌ದಲ್ಲಿ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ.	50.00	ಟಿ.ಎಸ್.ಪಿ
3	ನಾರಾಯಣಪುರದಲ್ಲಿ ಕುಡಿಯುವ ನೀರಿನ ಸೌಲಭ್ಯ	50.00	ಟಿ.ಎಸ್.ಪಿ
4	ಶೆಳ್ಳಗಿ ಗ್ರಾಮದಲ್ಲಿ ಚರಂಡಿ ಹಾಗೂ ಸಿ.ಸಿ ರಸ್ತೆ ನಿರ್ಮಾಣ	50.00	ಟಿ.ಎಸ್.ಪಿ
5	ಗುಂಡಲಗೇರಾ ಗ್ರಾಮದಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.	50.00	ಟಿ.ಎಸ್.ಪಿ
6	ಸುರಪುರ ಪಟ್ಟಣದಲ್ಲಿ ವಾಲ್ಮೀಕಿ ಭವನ ನಿರ್ಮಾಣ.	50.00	ಟಿ.ಎಸ್.ಪಿ
7	ಸುರಪುರ ಪಟ್ಟಣದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ.	50.00	ಎಸ್.ಸಿ.ಪಿ
8	ಕಲ್ಲದೇವನಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.	50.00	
9	ಸುರಪುರ ತಾಲ್ಲೂಕು ಕೇಂದ್ರದಲ್ಲಿ ಬ್ಯಾರಿಕೇಡಿಂಗ್, ಸಿಗ್ನಲ್, ಸಂಚಾರಿ ನಾಮಫಲಕ ಇತ್ಯಾದಿ ವ್ಯವಸ್ಥೆಗಾಗಿ	50.00	
	ಒಟ್ಟು	**500.00**	

5. ಯಾದಗಿರಿ ಜಿಲ್ಲಾ ಕೇಂದ್ರದಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳ ವಿವರಗಳು:

ಕ್ರ ಸಂ.	ಕಾಮಗಾರಿಯ ವಿವರಗಳು	ಅಂದಾಜು ಮೊತ್ತ (₹ಲಕ್ಷಗಳಲ್ಲಿ)	ಯೋಜನೆಯ ವಿವರ
1	ಜಿಲ್ಲಾ ಸಂಕೀರ್ಣ ಕಟ್ಟಡ	2000.00	
2	ಯಾದಗಿರಿ ನಗರದಲ್ಲಿ ಉದ್ಯಾನವನ ಅಭಿವೃದ್ಧಿ	125.00	
3	ಯಾದಗಿರಿ ನಗರದಲ್ಲಿ ಕ್ರೀಡಾಂಗಣಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣ.	150.00	
4	ಯಾದಗಿರಿ ನಗರದಲ್ಲಿ ಉರ್ದು ಹಾಲ್ ನಿರ್ಮಾಣ	100.00	
5	ಯಾದಗಿರಿ ನಗರದಲ್ಲಿ ಬಾಲಭವನ (ಮಿನಿ ಅಕ್ವೇರಿಯಂ ಸ್ಥಾಪನೆ)	150.00	
6	ಯಾದಗಿರಿ ನಗರದಲ್ಲಿ ಅಲ್ಪಸಂಖ್ಯಾತರ ಭವನ & ಜಿಲ್ಲೆಯಲ್ಲಿನ ವಕ್ಫ್ ಆಸ್ತಿಗಳ ಅಭಿವೃದ್ಧಿಗೆ (ಸಮುದಾಯ ಭವನ 50.00 ಲಕ್ಷ, ವಕ್ಫ್ ಕಛೇರಿ 25.00 ಲಕ್ಷ, ಮಳಿಗೆ & ಕಾಂಪೌಂಡ್ ನಿರ್ಮಾಣಕ್ಕೆ 25.00 ಲಕ್ಷ)	100.00	
7	ಯಾದಗಿರಿ ನಗರದ ಸೌಂದರ್ಯ ಅಭಿವೃದ್ಧಿಗೆ ಆಧುನಿಕ ಬಸ್ ಶೆಲ್ಟರ್, ವೆಲ್‌ಕಮ್ ಆರ್ಚ್ ನಾಮಫಲಕಗಳು, ರಸ್ತೆ ಬದಿಯಲ್ಲಿ ಸಸಿ ನೆಡುವುದು.	100.00	

8	ಯಾದಗಿರಿ ನಗರದಲ್ಲಿ ಲೆಡ್ ಬಲ್ಬ್‌ಗಳನ್ನು ಅಳವಡಿಸುವುದು.	50.00	
9	ಯಾದಗಿರಿ ನಗರದಲ್ಲಿ ಪತ್ರಿಕಾ ಭವನ ನಿರ್ಮಾಣಕ್ಕೆ	50.00	
10	ಯಾದಗಿರಿ ತಾಲ್ಲೂಕಿನ ಚಂದಾಪುರ ಗ್ರಾಮದಲ್ಲಿ ಕುಡಿಯುವ ನೀರು & ಮೂಲಭೂತ ಸೌಕರ್ಯ ಅಭಿವೃದ್ಧಿ	25.00	ಎಸ್.ಸಿ.ಪಿ
11	ಯಾದಗಿರಿ ತಾಲ್ಲೂಕಿನ ನಾಯಕಲ್ ಗ್ರಾಮದಲ್ಲಿ ಕುಡಿಯುವ ನೀರು & ಮೂಲಭೂತ ಸೌಕರ್ಯ ಅಭಿವೃದ್ಧಿ.	25.00	
12	ಯಾದಗಿರಿ ನಗರದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣ	50.00	
13	ಯಾದಗಿರಿ ಪಟ್ಟಣದ ಬೀಡಿ ವರ್ಕ್ಸ್ ಕಾಲೋನಿಯಲ್ಲಿ ಮೂಲಭೂತ ಸೌಕರ್ಯ	25.00	
14	ಯಾದಗಿರಿ ತಾಲ್ಲೂಕಿನ ಮುದ್ನಾಳ ಗ್ರಾಮದಲ್ಲಿ ಸಿ.ಸಿ ರಸ್ತೆ & ಮೂಲಭೂತ ಸೌಕರ್ಯ	25.00	
15	ಶಹಾಪುರ ತಾಲ್ಲೂಕಿನ ಮಾಚನೂರು ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ.	25.00	
	ಒಟ್ಟು	**3000.00**	

ಬಿ. ಚಿಕ್ಕರಾಜು
ಸರ್ಕಾರದ ಅಧೀನ ಕಾರ್ಯದರ್ಶಿ 1 & 2,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್ 1774

ಶಿಕ್ಷಣ ಸಚಿವಾಲಯ

ವಿಷಯ : 2011–12ನೇ ಸಾಲಿಗೆ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳಲ್ಲಿ ಎಐಸಿಟಿಇಯು ನಿಗದಿಪಡಿಸಿರುವ ಪ್ರತಿ ಕೋರ್ಸಿನಲ್ಲಿ ಒಟ್ಟು ಪ್ರವೇಶಾತಿಯ ಮೇಲೆ ಶೇ.5ರಷ್ಟು ಸಂಖ್ಯಾಧಿಕ ಸೀಟುಗಳನ್ನು ಬೋಧನಾ ಶುಲ್ಕವಿಲ್ಲದೆ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1. 2011–12ನೇ ಸಾಲಿನ ಎಐಸಿಟಿಇ ಪ್ರವೇಶ ಅನುಮೋದನೆಯ ಕಿರು ಪುಸ್ತಕದ ಮಾರ್ಗಸೂಚಿ.

2. ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಡಿಟಿಇ 11 ಎಸಿಎಂ(1) 2011–12 ದಿನಾಂಕ: 27–6–2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಮಾರ್ಗಸೂಚಿಯಲ್ಲಿ ಎಐಸಿಟಿಇಯಿಂದ ಮಾನ್ಯತೆ ಪಡೆದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಎಐಸಿಟಿಇಯು ನಿಗದಿಪಡಿಸಿರುವ ಪ್ರತಿ ಕೋರ್ಸಿನಲ್ಲಿ ಒಟ್ಟು ಪ್ರವೇಶಾತಿಯ ಮೇಲೆ ಶೇ.5 ರಷ್ಟು ಸಂಖ್ಯಾಧಿಕ ಸೀಟುಗಳನ್ನು ಬೋಧನಾ ಶುಲ್ಕವಿಲ್ಲದೆ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡಲು ಕೆಲವು ಷರತ್ತುಗಳ ಮೇರೆಗೆ ಹಂಚಿಕೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ಪಾಲಿಟೆಕ್ನಿಕ್‌ಗಳಿಗೆ ಸಂಬಂಧಿಸಿದಂತೆ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳ ಸೀಟುಗಳು ಪೂರ್ಣ ಪ್ರಮಾಣದಲ್ಲಿ ಆಡಳಿತ ಮಂಡಳಿ ಕೋಟಾ ಸೀಟುಗಳೇ ಆಗಿರುವುದರಿಂದ ಎಐಸಿಟಿಇ ಬೋಧನಾ ಶುಲ್ಕ ಮನ್ನಾ ಯೋಜನೆ (Tuition Fee Waiver Scheme) ಯನ್ನು ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳಿಗೆ ಜಾರಿಗೊಳಿಸುವ ಬಗ್ಗೆ ಸರ್ಕಾರದ ಆದೇಶವನ್ನು ಕೋರಿರುತ್ತಾರೆ.

ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 155 ಟಿಪಿಇ 2011 ಬೆಂಗಳೂರು, ದಿನಾಂಕ: 8ನೇ ಜುಲೈ 2011

2011–12ನೇ ಸಾಲಿಗೆ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳಲ್ಲಿ ಎಐಸಿಟಿಇಯಿಂದ ಮಾನ್ಯತೆ ಪಡೆದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಎಐಸಿಟಿಇಯು ನಿಗದಿಪಡಿಸಿರುವ ಪ್ರತಿ ಕೋರ್ಸಿನಲ್ಲಿ ಒಟ್ಟು ಪ್ರವೇಶಾತಿಯ ಮೇಲೆ ಶೇ. 5 ರಷ್ಟು ಸಂಖ್ಯಾಧಿಕ ಸೀಟುಗಳನ್ನು ಬೋಧನಾ ಶುಲ್ಕ ಮನ್ನಾ ಯೋಜನೆ (Tuition Fee Waiver Scheme) ಯನ್ನು ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆಯನ್ನು ಈ ಕೆಳಕಂಡ ನಿಬಂಧನೆಗೊಳಪಡಿಸಿ ಹಂಚಿಕೆ ಮಾಡಲು ಆದೇಶಿಸಿದೆ.

ನಿಬಂಧನೆಗಳು:

1. ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಅನುದಾನರಹಿತ (ಅಲ್ಪಸಂಖ್ಯಾತ ಹಾಗೂ ಅಲ್ಪಸಂಖ್ಯಾತವಲ್ಲದ) ಪಾಲಿಟೆಕ್ನಿಕ್‌ಗಳಲ್ಲಿ ಎಐಸಿಟಿಇಯು ನಿಗದಿಪಡಿಸಬಹುದಾದ ಪ್ರತಿ ಕೋರ್ಸುಗಳ ಒಟ್ಟು ಪ್ರವೇಶ ಮಿತಿಯ ಮೇಲೆ ಶೇ. 5ರಷ್ಟು ಸಂಖ್ಯಾಧಿಕ ಸೀಟುಗಳನ್ನು (supernumerary seats) ಬೋಧನಾ ಶುಲ್ಕವಿಲ್ಲದೆ (without fees) ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 2.50 ಲಕ್ಷದ ಮಿತಿಯೊಳಗಿರುವ ಫಲಾನುಭವಿಗಳಿಗೆ ಸೀಟನ್ನು ಹಂಚಿಕೆ ಮಾಡಲಾಗುವುದು. ಕುಟುಂಬದ ವಾರ್ಷಿಕ ಆದಾಯ ದೃಢೀಕರಣ ಪತ್ರವನ್ನು ಆಯಾ ತಾಲ್ಲೂಕು ತಹಶೀಲ್ದಾರರಿಂದ ಪಡೆದು ಹಾಜರುಪಡಿಸತಕ್ಕದ್ದು.

(ಅ) ರಾಜ್ಯ ಸರ್ಕಾರವು ನಿಗದಿಪಡಿಸಿರುವ ಬೋಧನಾ ಶುಲ್ಕವನ್ನು ಈ ಫಲಾನುಭವಿಯು ಭರಿಸತಕ್ಕದ್ದಲ್ಲ.

(ಆ) ಎಐಸಿಟಿಇಯ ಈ ಯೋಜನೆಯು ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರತಿ ಕೋರ್ಸುಗಳಲ್ಲೂ ಶೇ. 5ರಷ್ಟನ್ನು ಸಂಖ್ಯಾಧಿಕವಾಗಿ ಹಂಚಿಕೆಯನ್ನು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಡಿ ನಡೆಯುವ ಕೇಂದ್ರೀಕೃತ ಪ್ರವೇಶ ಘಟಕಗಳ ಮೂಲಕ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇರೆಗೆ ಅರ್ಹರಾದವರಿಂದ ಮಾತ್ರ ಭರ್ತಿ ಮಾಡತಕ್ಕದ್ದು.

(ಇ) ಈ ಸೀಟುಗಳನ್ನು ಅರ್ಹ ಅಭ್ಯರ್ಥಿಗಳಿಗೆ ಅವರು ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇರೆಗೆ ಹಂಚಿಕೆ ಮಾಡಲು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ನೋಡಲ್ ಸೆಂಟರ್ ಅಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗಿದೆ.

(ಈ) ಸಂಖ್ಯಾಧಿಕ ಸೀಟುಗಳಿಗೆ (supernumerary seats) ವಿದ್ಯಾರ್ಥಿಗಳ ಲಭ್ಯತೆ ಇಲ್ಲದಿದ್ದಲ್ಲಿ ಅದನ್ನು ಸರ್ಕಾರಿ ಅಥವಾ ಆಡಳಿತ ಮಂಡಳಿ ಕೋಟಾ ಸೀಟುಗಳಾಗಿ ಪರಿವರ್ತಿಸತಕ್ಕದ್ದಲ್ಲ.

(ಉ) ಈ ವರ್ಗದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳಿಗೆ ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶಕರಿಗೆ ವಿವರಗಳನ್ನು ನೋಡಲ್ ಸೆಂಟರ್ ಅಧಿಕಾರಿಗಳು ನೀಡತಕ್ಕದ್ದು.

(ಊ) ಈ ವರ್ಗದಡಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಯಾವುದೇ ಕಾರಣದಿಂದ ಶಿಕ್ಷಣ ಸಂಸ್ಥೆಗಳು/ಕೋರ್ಸುಗಳ ಬದಲಾವಣೆಗೆ ಅವಕಾಶ ಇರತಕ್ಕದ್ದಲ್ಲ.

(ಋ) ಈ ವರ್ಗದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಯನ್ನು ಶಿಕ್ಷಣ ಸಂಸ್ಥೆಗಳ ಅಂತರಜಾಲದಲ್ಲಿ ಪ್ರಕಟಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಎನ್. ಜಗದೀಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಪಿ.ಆರ್. 1775

LAW, JUSTICE AND HUMAN RIGHTS SECRETARIAT

Sub : Writ Petition No: 35644/2010 on the file of the High Court of Karnataka – Establishment of Children's Courts in Karnataka for trying the offences committed against the children under the provisions of the Commission for Protection of Child Rights Act, 2005 – orders – regarding-

Read: 1. File No. WCD 242 MA BA BA 2010 (Part-1).
2. Govt. Letter No. LAW 114 LCE 2011 dated 06-07-2011.
3. Letter No. GOB (I) 175/2006 dated 06-07-2011 from the Registrar General, High Court of Karnataka, Bangalore.
4) Letter No. GOB.II.148/2011 dated 08-07-2011 from the Registrar General, High Court of Karnataka, Bangalore.

Preamble:

Writ Petition No. 35644/2010 is a Public Interest Litigation filed by Ms. Maya C.P., before the Hon'ble High Court of Karnataka. The petitioner in the said Writ Petition has prayed for the issuance of a direction to the respondent – State of Karnataka to set up Special Courts called Children's Court, as per Section 25 and 26 of the Commission for Protection of Child Rights Act (No. 4 of 2006), 2005, for providing speedy justice for the offences committed against children and in respect of violation of child rights.

It is considered necessary to establish the Children's Court as required under the provisions of the Commission for Protection of Child Rights Act, 2005 for trying the offences committed against the children and for matters connected therewith in the territorial jurisdiction of Bangalore City and also to specify a Court of Sessions in each district of Karnataka to be a Children's Court to try the said offences as required under the provisions of the said Act.

The Registrar General, High Court of Karnataka, has intimated that the Hon'ble Chief Justice is pleased to concur to specify the District and Sessions Court as "Children's Courts" under the Commission for Protection of Child Rights Act, 2005 (Act No. 4 of 2006) – vide letter dated 06-07-2011 read at (3) above, Further the Registrar General has intimated that Hon'ble Chief Justice after considering all relevant materials is pleased to concur with the proposal regarding establishment of Special Court at Bangalore and to create one more post in the cadre of District Judge for presiding over the said Court – vide his letter dated 08-07-2011 read at (4) above. Pending examination of the detailed proposals regarding sanctioning of various categories of posts and other infrastructure facilities as proposed by the Registrar General in his letter dated 08-07-2011, the Women and Child Development Department has requested for the issuance of necessary orders in this regard, as it is agreed in-principle to the establishment of Children's Courts in the State of Karnataka for trying the offences committed against children and/or violation of child rights – vide its file No. WCD 242 MA BA BA 2010 (Part-1) read at (1) above.

Hence the following order.

Order No. Law 114 LCE 2011, Bangalore, Dated: 11th July 2011

1. In exercise of the powers conferred under Sections 25 and 26 of the Commission for Protection of Child Rights Act, 2005 and with the concurrence of the Chief Justice of High Court of Karnataka, Government of Karnataka hereby sanction the establishment of a Children's Court at Bangalore and further specify the Courts as mentioned below in the Districts of Karnataka to be the Children's Court in their respective Districts under the provisions of the Commission for Protection of Child Rights Act, 2005 for trying offences against children and/or violation of child rights:

01. The Prl. District and Sessions Judge, Bangalore Rural District, Bangalore.
02. The District and Sessions Judge, Bagalkot.
03. The Prl. District and Sessions Judge, Belgaum.
04. The Prl. District and Sessions Judge, Bellary.
05. The Prl. District and Sessions Judge, Bidar.
06. The Prl. District and Sessions Judge, Bijapur.

07. The District and Sessions Judge, Chamarajanagar.
08. The District and Sessions Judge, Chikkaballapur.
09. The Prl. District and Sessions Judge, Chikmagalur.
10. The Prl. District and Sessions Judge, Chitradurga.
11. The Prl. District and Sessions Judge, Davanagere.
12. The Prl. District and Sessions Judge, Dharwad.
13. The District and Sessions Judge, Gadag.
14. The Prl. District and Sessions Judge, Gulbarga.
15. The Prl. District and Sessions Judge, Hassan.
16. The District and Sessions Judge, Haveri.
17. The Prl. District and Sessions Judge, D.K., Mangalore.
18. The District and Sessions Judge, U.K., Karwar.
19. The District and Sessions Judge, Kodagu-Madikeri.
20. The Prl. District and Sessions Judge, Kolar.
21. The District and Sessions Judge, Koppal.
22. The Prl. District and Sessions Judge, Mandya.
23. The Prl. District and Sessions Judge, Mysore.
24. The District and Sessions Judge, Ramanagara.
25. The Prl. District and Sessions Judge, Raichur.
26. The Prl. District and Sessions Judge, Shimoga.
27. The Prl. District and Sessions Judge, Tumkur.
28. The District and Sessions Judge, Udupi.
29. The District and Sessions Judge, Yadgir.

2. The Department of Women and Child Development, being the concerned Administrative Department, shall examine the proposals of the High Court of Karnataka as detailed in letter dated 08-07-2011, read at (4), relating to recurring and non-recurring expenditure towards the establishment of Special Court at Bangalore, in consultation with the Finance Department, for its incorporation in the budget.

3. This issues with the concurrence of the Finance Department vide its Note No. FD 522 Exp.3/2011 dated 5th July 2011.

By Order and in the name of the Governor of Karnataka
Syed Abdul Nazeer
Under Secretary to Government (Admn-I)
Law, Justice and Human Rights Department

P.R. 1776

ANIMAL HUSBANDRY AND FISHERIES SECRETARIAT

CIRCULAR

No. AHF 40 AHP 2011, Bangalore, Dated 08-07-2011

Sub : Strict Enforcement of Karnataka Prevention of Animal Sacrifices Act, 1959 and the Rules, 1963 – reg.

It has come to the notice of Government through various media like T.V. and Newspapers that in the name of religion during festivals like Bakrid, Sankranthi, Vijayadashami and other festivals and Jathras in front of religious places like the Temples, Dargas, Mosques and other places, animals are sacrificed in public places in various District and Taluk Head Quarters in Karnataka, thereby barbaric and cruelty of animals are taking place in the name of religion etc,.

Government has viewed this matter very seriously and in order to prevent cruelty to animals and sacrificing of animals in the name of religion during festivals and Jathras in front of religious places in the State, Government hereby direct to all the Deputy Commissioners and Superintendents of Police who are incharge of their districts to strictly enforce the provisions of the Karnataka Prevention of Animal Sacrifices Act. 1959 and the Rules 1963 and thereby take effective and adequate steps to prevent such violation and also take stern action against the offenders in accordance with law by deputing officers concerned and make adequate Police Bandubasth during festivals and Jathras to prevent animal sacrifices.

Shivaraam
Principal Secretary to Government
Animal Husbandry and Fisheries Department.

P.R. 1777

PLANNING, PROGRAMME MONITORING AND STATISTICS SECRETARIAT

Sub : Sanction of New Plan Scheme Viz Karnataka Evaluation Policy and Karnataka Evaluation Authority-Regarding

Read : 1) G.O. No. IFS 42 EVF (1) 1999, Bangalore dated 17th Nov 2000

2) Circular No. PD 41 EVF(1) 2003, Bangalore dated 5th June 2003

3) D.O. Ltr No. M-13048/12(KT)2010-SP (South)/DCH/11CD 83 receipt from Montek Singh Ahluwalia, Deputy Chairman, Planning Commission GOI.

4) Proceedings of the meeting held on 03.12.2010 under the Chairmanship of Chief Secretary to Government, GOK – regarding Karnataka Evaluation Policy.

Preamble:

Karnataka Government was one of the first in the Nation to evolve a policy on evaluation as early as the year 2000. In the Government Order read at I above, the State Government had issued Evaluation Policy which indicated that all the schemes with a budget outlay of more than Rs. One crore should be evaluated by an external agency at least once during the plan period. Upto 1% of the project (scheme) cost with an upper ceiling of Rs. 5.00 lakhs was earmarked for evaluation. Further, it was stipulated that if any scheme/programme had to be taken forward beyond a plan period, it should have justified itself through an evaluation. The policy also envisaged that the outcomes of the evaluation should have been used for improving programme design and delivery.

2. However, it was soon discovered that to carry out an evaluation of every programme by the Government was not an easy task as there had been far too many programmes with an outlay of Rs. One Crore or more even within each department or wing of the Government. Consequently a change was introduced in the Evaluation Policy in the Circular read at 2 above whereby it was envisaged that each line department would select at least one key plan or non-plan scheme or programme every year for evaluation through an independent agency.

3. The responsibility of evaluation policy implementation was vested with two committees: the respective Departmental co-ordination Committee; and the State Evaluation Coordination Committee chaired by the Additional Chief Secretary. A recent review of the experience of implementing the Evaluation Policy and a workshop conducted by the Planning Department to recognize the challenges ahead revealed that there were quite a few shortcomings in the implementation. They are as follows:

(i) Absence of well formulated programmes with clear verifiable outcomes and measured baseline or benchmarks against which evaluation could have been objectively carried out.

(ii) Imperfection in the supporting institutional structure created in the Planning department and staffing it with personnel without adequate specialized technical competencies as well as the absence of an enabling environment to handle capacity building, advisory service, supervision, coordination and handholding for effective evaluation.

(iii) Uninspiring quality of evaluation reports due to both capacities of the various external agencies taking up evaluation as well as capacity and inclination of various Government departments to effectively monitor and facilitate meaningful evaluation.

(iv) Absence of accountability mechanism, lack of involvement by stakeholders and predominance of official presence in the evaluation process, reducing rigor of evaluation and prevent the creation of an independent stakeholders pressure.

(v) Evaluation process had inherent conflict of interest as the departments being evaluated were the paymaster of the outsourced evaluation agency. The arrangement between Government and evaluator tended to be that of Principal and Agent without independence

(vi) Absence of well thought out control mechanism both for the programme implementation and for programme evaluation, nor was there a procedure for proper dissemination of the findings. The result was that both transparency and quality of the evaluation reports suffered.

(vii) The Policy has not infused any incentives/penalties for the line departments for not seeking evaluation inputs on an ongoing basis and in a transparent manner. Nor had there been a properly established mechanism for incorporating the feedback from evaluation addressing the policy-makers, operational staff and other stakeholders.

(viii) Capacity limitations of the human resources and financial caps (e.g. 1 per cent of the programme outlay) to assess the evaluation designs submitted by the research agencies, imperfect vendor selection and out sourcing evaluation leading to improper (if not sub-standard) evaluation studies. In turn, such evaluations lead also many departments to take the evaluation reports in a routine and monotonous manner than using the reports for improving the policy design, better target identification etc.

(ix) Evaluations are undertaken with very little time prior to the preparation of programmes and financial planning each year. Consequently the evaluations fail to inform the departmental policy making during the subsequent years.

(x) Most evaluations have not been meaningfully used for mid-course correction or reformulation for any of the schemes.

4. In the circumstances explained above and in order to supervise, facilitate, build capacity and handhold the departments for effective evaluation and its use for effective planning, monitoring and fine-tuning the policies, programmes and schemes for result oriented and outcome based implementation Planning Department has now proposed to establish Karnataka Evaluation Authority in the State. This proposal was considered in a meeting taken by Chief Secretary on December 3rd, 2010, and a decision was taken that Planning Department to move a detailed proposal in this regard, vide proceedings read at (4) above.

5. Also Planning Commission – GOI with the approval of the Central Cabinet envisaged establishment of Independent Evaluation Office (IEO) to undertake impartial and objective assessment of the various public programmes and improve the effectiveness of public interventions. Karnataka will be the first state to set up a Karnataka Evaluation Authority which is analogous to that of Independent Evaluation office of Government of India.

6. The Honourable Chief Minister has felt the need for an independent Evaluation unit in his 2011-12 Budget speech (Para 236). Further a recent letter read at (3) from Shri Montek Singh Ahluwalia, Deputy Chairman, Planning Commission, GOI addressed to Honourable Chief Minister, GOK dated January 22, 2011 has appreciated the strategy of the state for constituting Karnataka Evaluation Authority for outcomes based implementation of the programmes across all departments.

7. The evaluation policy vis-à-vis setting up of Karnataka Evaluation Authority proposed by Planning Department envisages Key policy parameters of evaluation such as Principles and Objectives, policy framework & applicability of evaluation of programmes/schemes and evaluation responsibilities. Besides it proposes to set up an Institutional model of Karnataka Evaluation Authority as a society to be registered under Karnataka Societies Registration Act 1960, to carry out Evaluation of programmes and schemes.

8. The above proposal has been examined by the Finance Department and while endorsing the need for evaluation, however, FD opined in favour of strengthening of existing evaluation Division without setting up a society. Also, it has suggested to have scale less posts in respect of 6 technical posts of programme division. In response to these observations Planning Department justified that there is a strong case and requirement for establishing Karnataka Evaluation Authority as society in view that Present evaluation directorate within the Secretariat set up is unable to function properly as the decision making takes long as for any small requirement the file have to move from Planning to DPAR to Finance,. Evaluation requires quick, timely and frequent decisions and it needs more flexible decision making process. Further PD agreed to the observation of FD that the six technical posts may be made scale less with the proposed pay scale prescribed as only indicative for equivalence.

9. The Cabinet has accorded its approval in Toto on 23.06.2011 vide case No. C/264/2011 for the new scheme called Karnataka State Evaluation Policy and Karnataka Evaluation Authority as proposed by Planning Department. Hence the following order.

Government Order No. PD/8/EVN (2)/2011, Bangalore, Dated 11-07-2011

In the circumstances explained in the Preamble, Government are pleased to sanction the New Scheme called "Karnataka State Evaluation Policy and Karnataka Evaluation Authority" with effect from 2011-12 with the following features:

The key policy parameters of Evaluation are as follows:

1. Evaluation Vision

Aims of Evaluation shall be keeping in place a transparent, effective and efficient practice of evaluation of its development policies and programmes. The Government recognizes the need for an effective use of credible evaluation as a tool to benchmark the state of affairs, refine its public policies, and designing programmes and schemes with prudent and optimal use of resources for maximizing the intended and measurable outcomes and citizen satisfaction.

2. Evaluation Mission

The following are the principles and objectives of Evaluation:

i. Prescribing standards of policy and programme formulation, monitoring, evaluation and refinement.
ii. Institutionalising enabled machinery backed by adequate financial resources and informed procedures to facilitate, supervise and enforce timely, useful and accountable evaluation.
iii. Enhanced techincal capacities within the departments of the Government and by the independent evaluation agencies to undertake and effectively utilize evaluation outputs for informed decision-making.
iv. Enhanced Stakeholders' satisfaction through participation, transparency and accountability.

3. Evaluation Policy Framework and Applicability:

i. Government is pleased to accord sanction for a framework for Evaluation of Government Policies, programmes in Karnataka whereby the policy context envisages for supporting capacity building, facilitation, conduct, outsourcing, responsibility matrix of various stake holders and other relevant attributes, procedures and processes essential for effective and timely evaluation and its feedback utilization for quality outcomes.
ii. This policy framework is applicable to all entities in the Karnataka Government including Urban and Rural local bodies, Government departments, Public undertakings, Boards etc. It envisages to constantly learn from experience and discussion of its work by involving experts in the fields of development, evaluation, policy studies, administrators and the general public.
iii. The policy envisages distinctly too broad types of Evaluation they are as follows:

a. External Evaluation:

All evaluation initiated by the Karnataka Evaluation Authority and paid by its own fund shall be referred as an external evaluation. The schemes which is earmarked by the authority for evaluation shall not be taken up by the line department for evaluation. Line department and its officers and implementing agencies will be duty bound to furnish all required information in time and extend all required helf to the KEA for the success of the evaluation. In a year KEA may take up 20-30 evaluations which are vital for the key policy and programme refinement and assessment.

b. Internal Evaluation:

Any evaluation taken up by the line departments from their own resources shall be referred as an internal evaluation. As there is a conflict of interest in such cases the same needs to be managed, utilized and interpreted with caution. It shall be mandatory for all the line departments to take advice from the KEA on TOR, data collection tool, methodology-vendor/outsourcing agency selection and all other technical matters pertaining to the internal evaluation and follow the rules, procedures etc, prescribed by the authority. The department may earmark 1% of the plan fund for such evaluations. In a year all the departments together may take up 40-60 such evaluations. KEA will monitor the progress of the such evaluation and will receive and safe upkeep in archives all TORs, data tools, soft copy of the data collected and reports etc., for future use.

In cases of certain key evaluations of prime importance, like the one mandated in an externally aided or Centrally Sponsored Programme, the concerned department may arrive at the likely cost of such evaluation and by mutual consent entrust such evaluations to the KEA and deposit the required amount with the KEA for taking up such evaluation. Empowered committee may entrust any internal evaluation at any stage to the KEA.

4. Evaluation of Programmes/Schemes:

i. In pursuance of the aforesaid objectives every Government programme both Plan the Non-Plan category shall be evaluated in a Five Year Plan period at least once. Based on such an evaluation giving proper justification for the continuation of extension, plan programme shall be continued beyond the orginal plan period.

ii. As far as possible, small programmes/schemes shall be merged into larger generic schemes/programmes which are well formulated as per prescribed standards and in no case a department should have more than 7 to 10 such generic programmes so that they are better implemented and monitored to achieve the desired outcomes.

5. Evaluation Responsibilities

It shall be the responsibility of the Principal Secretary/Secretary of the Government Department concerned to draw up a five-year calendar of the evaluation programmes of the various Departments, Boards and Units etc., coming under her/his control. The calendar shall be in a prescribed format. One Senior Officer of the department shall be made the nodal officer for facilitating and following up of each such evaluation thus undertaken. An Officer shall not be given the concurrent responsibility of more than two programmes (Schemes). The Secretary of the department shall facilitate one or two key evaluation. Commissioner, Director, Additional or Joint heads should be assigned two programmes each. In future facilitation of evaluation work should compulsorily be taken as one of the important item of work enumerated in the Annual Appraisal Report of the Senior Officers and quality of evaluation and utilization of its feed back in programme design and implementation shall be used for their annual appraisal.

II. The Institutional Model of Establishment of Karnataka Evaluation Authority (KEA):

i. The Government accorded sanction to set up KEA as a society and to register under the Karnataka Societies Registration Act 1960, which will be the focal point for Evaluation of Programmes.

ii. The management of the affairs of the authority shall be vested with the General Body under the Chairmanship of Chief Secretary to Government. Executive committee and Technical committee under the Chairmanship of Principal Secretary, Planning Department and Chief Evaluation officer shall be the Member-Secretary of the Authority as enshrined in the Memorandum of Association/Rules to be framed for the purpose. The Authority shall have representation from Public Administration, Management, Academics, Civil Society, Media etc.,

iii. The Planning Department is authorized to formulate necessary Memorandum of Association (MOA) and Rules for setting up of KEA and to register as Society.

iv. Activities/Functions of KEA:

a. The KEA shall be primarily responsible to supervise, facilitate, build capacity and handhold the departments for effective Planning, Monitoring and fine tuning the policies, programmes, and schemes for result oriented and outcome based implementation.

b. The Authority may undertake or commission training, consultancy, advocacy activity to further goals of effective and meaningful scheme formulation, Monitoring and Evaluation.

c. Authority shall keep record of all the TORs, data collection tools, evaluation reports in their data base and follow-up utilization of evaluation outputs.

d. KEA shall take a target to conduct at least 20 to 30 very important evaluations every year.

v. Selection of Outsourcing Agency:

KEA shall adopt well laid out procedure for both tendering and selecting appropriate agency and empanelling them for evaluation where need be two part tendering process may be adopted.

a. It is crucial to establish concrete criteria on which to assess each applicant. A scoring or rating scale will be developed to establish the basis on which the proposals will be assessed. One option is to assign "each criterion with a numerical value reflecting its relative importance in comparison with other criteria." As noted in the KUIDFC procedure of selecting a consultant/agency/research institute/university/NGO. Agreeing on standards for rating the applicants provides a consistent measurement strategy and promotes an objective evaluation of proposals. Once the scoring method is established, the task of reviewing the proposals can begin. Some criteria that may be used to assess the proposals include:

- Evaluation plan and a detailed outline of how to carry it out;
- Successful experience evaluating a similar program;
- Knowledge about evaluation methods;
- Knowledge about the population to be evaluated, including knowledge of the population's culture and first language;
- Ability to submit work in a timely manner;
- Ability to communicate well with the targeted audience, in person and in writing;
- Manpower with requisite capability;
- Financial and institutional strength;
- Prior publication and research outputs;
- Institutional self interest in research and domain knowledge etc.,

b. Several additional questions may help in the final selection:
- Does the evaluator's view of the goals for the evaluation match those of the program to be evaluated?
- Is the evaluator willing to assist in building the knowledge base and skills of program staff?
- Is the evaluator culturally sensitive and able to work with varied target populations?

c. A committee will be set up to review the proposals using the criteria spelled out above. A strong methodological expertise in the review process may help the KEA to weed out inadequate proposals.

d. After all the proposals have been reviewed and rated, KEA will choose the proposal with the highest rating that matches the criteria. There may be a few proposals that are close in rating, and in-person interviews may help the team reach a final choice. If additional information is needed, each applicant may be asked to respond to questions or participate in a "best and final" meeting to ensure that all bidders are given the same opportunities and to ensure an objective scoring. Once an evaluator is chosen, sign a contract defining the scope of work to be completed, deliverables expected, time table, and cost.

e. Evaluation report benchmarking may also will be used to upgrade, down grade rating or black listing of evaluation agencies.

f. The empowered committee chaired by Chief Secretary will finalize and approve the evaluation expenses and outsourcing formalities based on the standard guidelines which will be formulated after constituting the KEA.

g. KTPP Act shall apply to the evaluation outsourcing to the extent that it does not conflict with the quality of evaluation. The Empowered Committee chaired by the Chief Secretary shall decide exceptional cases needing relief and discretion under 4(g) of the KTPP Act.

vi. Evaluation Manual:

The KEA will develop a detailed training manual on evaluation. It may define in detail what is to be evaluated, how it is to be evaluated, when and by whom it is to be evaluated. It will also develop evaluation-monitoring mechanism, guidelines for outsourcing evaluation and evolve procedure to benchmark evaluations. It will also develop responsibility and accountability matrix for evaluation.

vii. Evaluation utilization:

KEA will closely monitor utilization and incorporation of the evaluation findings for fine tuning policies and programmes. A formal procedure to ensure this practice shall be evolved by the Authority.

viii. Evaluation dissemination:

a. Mechanism should be developed for wider dissemination of evaluation findings through making it available on the web. In annual Economic Survey and Annual Report of the Department, invariably a chapter should be on evaluation outcomes a gist of how the (mid-course) revisions (if any) are proposed to be undertaken.

b. Evaluation Authority will also provide facility to archive and safe upkeep of TORs, Data collection tools, Evaluation reports etc. for future use. All the departments shall send their TOR, Data Collection tools, Evaluation reports etc to the authority for this purpose.

ix. Evaluation monitoring and tracking:

Proper mechanism may be developed for effective evaluation tracking and monitoring.

III. Evaluation Financing:

a. The Government accords sanction for utilization of Rs. 10.00 crores by KEA as earmarked in the Budget for the year 2011-12 under the Head of account : 2515-00-101-0-26, for discharge of its functions.

The detailed expenditure head are as follows as given in the Head of account No. 2515-00-101-0-26 (Detailed Estimates of Expenditure for the Year 2011-12: major Head 2425-2810—Volume VII-Page No. 42)

Sl. No.	Particulars	Amount (Rs. Lakhs)
1	Salary-Officers	48.70
2	Salary-Staff	19.48
3	Dearness Allowances	36.82
4	Other Allowances	17.05
5	Medical Allowances	1.00
6	Travelling Allowances	10.00
7	Telephone Expenses	1.50

8	Other Expenses	5.00
9	Machinery and Equipments	20.00
10	Transport Expenses	10.00
11	Grant in Aid (Evaluation Studies)	830.45
	Total	**1000.00**

b. The cost of conducting 20 to 30 important detailed external evaluation studies along with a few small exploratory studies is estimated to be around 8.3 crores, which is given in the grant in aid of the budget head. In the case of internal evaluation, the line department may earmark 1% of the plan fund for such evaluations. In a year all the departments together may take up to 40-60 such evaluations.

c. Also the salary for the officers and administrative staffs can be met from Head of account No. 2515-00-101-0-26.

IV. Organization Structure of KEA:

a. KEA shall have the sufficient number of well qualified and trained staff capable to conducting, facilitating and/or outsourcing evaluation research.

b. The Authority at the state level shall have two units namely i. Programme wing & ii. Administrative wing. The support staff serving the Authority shall be under the control of Administrative Unit.

c. The employees of the Authority at the State level in each of the two wings and other support staff under the control of Administrative units shall be as follows:

KEA Staffing Pattern:

Sl.No.	Category of posts	No. of posts	Pay Scale (Rupees)	Salary Per Year (in Rs.)
I	**Programme Wing**			
1	Chief Evaluation Officer*	1	Scale less post (37400-67000) (AGP 10000)	1400000
2	Additional Chief Evaluation* Officer	1	Scale less post (37400-67000) (AGP 9,000)	1100000
3	Evaluation officers*	4	Scale less post (15600-39000) (AGP-6000)	2400000
4	Web and MIS Manager	1	20025-28725	300000
5	Research Assistants	4	11400-21600	800000
II	**Administrative Wing**			
6	Administrative Officer	1	20025-28275	289800
7	Accounts Officer	1	14050-25050	234600
8	Office Assistant	1	8000-14800	136800
9	DTP Operator	1	8000-14800	136800
10	Attender	2	4800-7275	150000
11	Driver	2	4800-7275	150000
	Grand Total			7098000

Note: *These are scale less posts and the scale prescribed are only indicative.

d. For appointment of all categories of professional staff as per the qualifications prescribed shall be done by KEA by setting up a screening committee. The Rules and Regulations of screening committee and selection committee will be framed separately.

e. For appointment of supporting staff General Body will prescribe eligibility criterion the selection procedure for supporting staff such as MIS and Web Manager, Administration officer, controller of Accounts (Treasurer), Account/Administrative officer/Assistants, DTP operators, Drivers and Group-D Staff.

f. Once the above staffing arrangement is made then the posts of present Evaluation Division of the Planning Department will be redeployed in other functional divisions or wherever necessary.

g. After the Evaluation Authority is registered as a society under the Karnataka Societies Registration Act: 1960 and its staff are in place the Evaluation Division of Planning Department will cease to exist.

This order issues with the approval of the Cabinet vide case No. C/264/2011, Dated: 26.06.2011 as per the provision 16(VI) in the First schedule and within the purview of the sub rule (2) of Rule 17 of the Karnataka Government (Transaction of Business) Rules 1977.

By Order and in the name of the Governor of Karnataka

B. Chikkaraju

Under Secretary to Government 1 & 2

Planning, Programme Monitoring

and Statistics Department.

P.R. 1778

ಶಿಕ್ಷಣ ಸಚಿವಾಲಯ

ವಿಷಯ : ವೃತ್ತಿ ಶಿಕ್ಷಣವನ್ನು ಸಾಮಾನ್ಯ ಶಿಕ್ಷಣದ ಜೊತೆಗೆ ಬೋಧನೆ ಮಾಡಲು ಅಧ್ಯಯನ ನಡೆಸುವ ಬಗ್ಗೆ ರಾಜ್ಯ ಕೌಶಲ್ಯ ಆಯೋಗದ ಅಧ್ಯಕ್ಷರಾದ ಶ್ರೀ ವಿಷ್ಣುಕಾಂತ ಚಟಪಲ್ಲಿ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : ದಿನಾಂಕ : 10-06-2011ರ ಮಾನ್ಯ ಶಿಕ್ಷಣ ಸಚಿವರ ಟಿಪ್ಪಣಿ ಸಂಖ್ಯೆ : ಪ್ರಾ.ಪ್ರೌ.ಶಿ.ಶ.495/2011.

ಪ್ರಸ್ತಾವನೆ :

1. ಮೇಲೆ (1)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಪ್ರೌಢ ಶಿಕ್ಷಣ ಹಂತದಿಂದಲೇ (9ನೇ ತರಗತಿಯಿಂದ) ವೃತ್ತಿ ಶಿಕ್ಷಣವನ್ನು ಸಾಮಾನ್ಯ ಶಿಕ್ಷಣದ ಜೊತೆಗೆ ಬೋಧನೆ ಮಾಡಲು ಹಾಗೂ ಸ್ಥಳೀಯ ಅಗತ್ಯತೆಗನುಗುಣವಾಗಿ ಕಿರು ಅವಧಿ ವೃತ್ತಿ ಶಿಕ್ಷಣ ತರಬೇತಿಯನ್ನು ನೀಡುವ ಬಗ್ಗೆ ರಾಷ್ಟ್ರೀಯ ವೃತ್ತಿ ಶಿಕ್ಷಣ ಅರ್ಹತಾ ಚೌಕಟ್ಟು (National Vocational Education Qualification Framework) ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕೈಗೊಳ್ಳಬಹುದಾದ ತರಬೇತಿಗಳು ಹಾಗೂ ಇವುಗಳನ್ನು ಅನುಷ್ಠಾನಗೊಳಿಸುವ ಬಗೆಯ ಕುರಿತಂತೆ ಅಧ್ಯಯನ ನಡೆಸಿ, ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಸಲುವಾಗಿ ತಜ್ಞರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲು ಪರಿಶೀಲಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 68 ಟವಿಇ 2011, ಬೆಂಗಳೂರು, ದಿನಾಂಕ : 11-07-2011

ಪ್ರೌಢ ಶಿಕ್ಷಣ ಹಂತದಿಂದಲೇ ವೃತ್ತಿ ಶಿಕ್ಷಣವನ್ನು ಸಾಮಾನ್ಯ ಶಿಕ್ಷಣದ ಜೊತೆಗೆ ಬೋಧನೆ ಮಾಡಲು ಹಾಗೂ ಸ್ಥಳೀಯ ಅಗತ್ಯತೆಗನುಗುಣವಾಗಿ ಕಿರು ಅವಧಿ ವೃತ್ತಿ ಶಿಕ್ಷಣ ತರಬೇತಿಯನ್ನು ನೀಡುವ ಬಗ್ಗೆ ರಾಷ್ಟ್ರೀಯ ವೃತ್ತಿ ಶಿಕ್ಷಣ ಅರ್ಹತಾ ಚೌಕಟ್ಟು ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕೈಗೊಳ್ಳಬಹುದಾದ ತರಬೇತಿಗಳು ಹಾಗು ಅವುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಅಧ್ಯಯನ ನಡೆಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಸಲುವಾಗಿ ಈ ಕೆಳಕಂಡ ತಜ್ಞರನ್ನೊಳಗೊಂಡ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರಚಿಸಿ ಆದೇಶಿಸಲಾಗಿದೆ.

1.	ಶ್ರೀ ವಿಷ್ಣುಕಾಂತ್ ಚಟಪಲ್ಲಿ ಅಧ್ಯಕ್ಷರು ರಾಜ್ಯ ಕೌಶಲ್ಯ ಆಯೋಗ	ಅಧ್ಯಕ್ಷರು
2.	ನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ	ಸದಸ್ಯರು
3.	ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ	ಸದಸ್ಯರು
4.	ನಿರ್ದೇಶಕರು ಡಿ.ಎಸ್.ಇ.ಆರ್.ಟಿ., ಶಿಕ್ಷಣ ಇಲಾಖೆ	ಸದಸ್ಯರು
5.	ನಿರ್ದೇಶಕರು ವೃತ್ತಿ ಶಿಕ್ಷಣ ಇಲಾಖೆ	ಸದಸ್ಯರು
6.	ಸಹ ನಿರ್ದೇಶಕರು ವೃತ್ತಿ ಶಿಕ್ಷಣ ಇಲಾಖೆ	ಸದಸ್ಯ ಕಾರ್ಯದರ್ಶಿ

2. ಸದರಿ ಸಮಿತಿಯು National Vocational Education Qualification Framework ನ ಅಡಿಯಲ್ಲಿ ಸೆಕೆಂಡರಿ ಹಾಗೂ ಪದವಿಪೂರ್ವ ಹಂತಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಕೈಗೆತ್ತಿಕೊಳ್ಳಬಹುದಾದ ತರಬೇತಿಗಳು ಮತ್ತು ವೃತ್ತಿ ಶಿಕ್ಷಣ ಕೋರ್ಸುಗಳ ಬಗ್ಗೆ ಅಧ್ಯಯನ ನಡೆಸಿ ಸರ್ಕಾರಕ್ಕೆ ತಮ್ಮ ಶಿಫಾರಸ್ಸುಗಳೊಂದಿಗೆ ವರದಿಯನ್ನು ಸಲ್ಲಿಸುವುದು.
3. ಸದರಿ ಸಮಿತಿಗೆ ಅಗತ್ಯವಿರುವ ಸ್ಥಳ ಇತ್ಯಾದಿ ಸಚಿವಾಲಯ ನೆರವನ್ನು ವೃತ್ತಿ ಶಿಕ್ಷಣ ಇಲಾಖೆಯು ಕೂಡಲೇ ವ್ಯವಸ್ಥೆ ಮಾಡುವುದು.
4. ಸದರಿ ಸಮಿತಿಯು ಮುಂದಿನ ಆದೇಶವಾಗುವವರೆಗೆ ಕಾರ್ಯ ನಿರ್ವಹಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ)

ಪಿ.ಆರ್. 1779 ಶಿಕ್ಷಣ ಇಲಾಖೆ

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಶ್ರೀ ಎಲ್.ಪಿ. ಲಮಾಣಿ, ನೋಟರಿ, ಬಿಜಾಪುರ ಇವರ ವಿರುದ್ಧ ಸ್ವೀಕೃತವಾದ ದೂರು ಬಗ್ಗೆ ಶಿಸ್ತು ಕ್ರಮ.

ಓದಲಾಗಿದೆ :

1. ಶ್ರೀ ಸಂಗಪ್ಪ ಶರಣಪ್ಪ ಸುರಪುರ ಇವರಿಂದ ಸ್ವೀಕೃತವಾದ ದೂರು ಮನವಿ ದಿನಾಂಕ : 18-08-2009.
2. ಸರ್ಕಾರದ ಪತ್ರಗಳ ಸಂಖ್ಯೆ : ಲಾ 117 ಎಲ್‌ಸಿಎಲ್ 2009 ದಿನಾಂಕ : 07-09-2009 ಮತ್ತು 3/5-03-2010.
3. ಶ್ರೀಯುತರ ಲಿಖಿತ ಹೇಳಿಕೆ ದಿನಾಂಕ : 18-03-2010.
4. ಸರ್ಕಾರದ ಪತ್ರ ಸಂಖ್ಯೆ : ಲಾ 117 ಎಲ್‌ಸಿಎಲ್ 2009 ದಿನಾಂಕ : 15-04-2010 ಹಾಗೂ ಅ.ಸ.ಪತ್ರ ದಿನಾಂಕ : 12-01-2011.
5. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಬಿಜಾಪುರ ಇವರ ಪತ್ರ ಸಂಖ್ಯೆ : 386/2011 ದಿನಾಂಕ : 25-01-2011.
6. ಇದೇ ಕ್ರಮಾಂಕದ ಕಾರಣ ಕೇಳುವ ನೋಟೀಸು ದಿನಾಂಕ : 28-03-2011.
7. ಶ್ರೀಯುತರ ಲಿಖಿತ ಹೇಳಿಕೆ ದಿನಾಂಕ : 11-04-2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಮನವಿಯ ದಿನಾಂಕ : 18-08-2009ರಲ್ಲಿ ಶ್ರೀ ಸಂಗಪ್ಪ ಶರಣಪ್ಪ ಸುರಪುರ ಇವರು ಶ್ರೀ ಎಲ್.ಪಿ. ಲಮಾಣಿ, ನೋಟರಿ, ಬಿಜಾಪುರ ಇವರ ವಿರುದ್ಧ ಸಲ್ಲಿಸಿದ್ದ ದೂರು ಮನವಿಯನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ : 07-09-2009ರ ಸರ್ಕಾರದ ಪತ್ರದೊಂದಿಗೆ ನೋಟರಿಯವರಿಗೆ ಕಳುಹಿಸಿ ಅವರ ವಿರುದ್ಧದ ಆರೋಪದ ಬಗ್ಗೆ ಲಿಖಿತ ಹೇಳಿಕೆಯನ್ನು ಕೋರಲಾಗಿತ್ತು. ಅದರಂತೆ ನೋಟರಿಯವರು ಮೇಲೆ (3)ರಲ್ಲಿ ಓದಲಾದ ದಿನಾಂಕ : 18-03-2010ರ ಮನವಿಯಲ್ಲಿ ಲಿಖಿತ ಹೇಳಿಕೆ ಸಲ್ಲಿಸಿದ್ದರು, ಅದನ್ನು ಮೇಲೆ (4)ರಲ್ಲಿ ಓದಲಾದ ಸರ್ಕಾರದ ಪತ್ರಗಳಲ್ಲಿ ನೋಟರಿಗಳ ನಿಯಮ 13 (6-11) ರನ್ವಯ ದೂರು ಹಾಗೂ ಶ್ರೀಯುತರ ಲಿಖಿತ ಹೇಳಿಕೆಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಿಜಾಪುರ ಇವರಿಗೆ ಕಳುಹಿಸಿ ವಿಚಾರಣಾ ವರದಿಯನ್ನು ಕಳುಹಿಸುವಂತೆ ಕೋರಲಾಗಿತ್ತು. ಅದರಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಿಜಾಪುರ ಇವರು ಮೇಲೆ (5)ರಲ್ಲಿ ಓದಲಾದ ದಿನಾಂಕ : 25-01-2011ರ ಪತ್ರದೊಂದಿಗೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ನೋಟರಿಯವರು ಇಂಡಿ ತಾಲ್ಲೂಕಿನ ಸರ್ವೆ ನಂ. 624ಕ್ಕೆ ಸಂಬಂಧಿಸಿದ ಖೊಟ್ಟಿ ಹಕ್ಕು ಬಿಟ್ಟುಕೊಟ್ಟ ಪತ್ರಕ್ಕೆ (Relinquishment Deed) ದೂರುದಾರರ ಸಹೋದರರ ಪರವಾಗಿ ಪ್ರಮಾಣೀಕರಿಸಿರುವುದು (attest) ನೋಟರಿಗಳ ನಿಯಮಗಳನ್ವಯ ಅವರ ವೃತ್ತೀಯ ದುರ್ನಡತೆ ಸಾಬೀತಾಗಿದೆಯೆಂದು ನೀಡಿದ ವರದಿಯನ್ನು ಪರಿಗಣಿಸಿ ನೋಟರಿಗಳ ನಿಯಮಗಳು, 1956ರ ನಿಯಮ 13(12)(ಬಿ) (1)ರನ್ವಯ ನೋಟರಿಯವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆದುಹಾಕಲು ಏಕೆ ಕ್ರಮ ತೆಗೆದುಕೊಳ್ಳಬಾರದು ಎಂಬ ಬಗ್ಗೆ ಲಿಖಿತ ಕಾರಣ ನೀಡುವಂತೆ ಮೇಲೆ (6)ರಲ್ಲಿ ಓದಲಾದ ದಿನಾಂಕ : 28-03-2011ರ ಕಾರಣ ಕೇಳುವ ನೋಟೀಸು ಜಾರಿ ಮಾಡಲಾಗಿತ್ತು. ಅದಕ್ಕೆ ಉತ್ತರವಾಗಿ ನೋಟರಿಯವರು ಮೇಲೆ (7)ರಲ್ಲಿ ಓದಲಾದ ದಿನಾಂಕ : 11-04-2011ರ ಲಿಖಿತ ವಿವರಣೆಯಲ್ಲಿ ತಮ್ಮ ವಿರುದ್ಧದ ಆಪಾದನೆಗಳನ್ನು ಅಲ್ಲಗಳೆದಿದ್ದು, ತಮ್ಮ ವಿರುದ್ಧದ proceedings ಅನ್ನು ಕೈಬಿಡಬೇಕೆಂದು ಕೋರಿರುತ್ತಾರೆ ಮತ್ತು ಇವರ ಕಾರ್ಯಶೈಲಿಗೆ ಅಸೂಯೆಪಟ್ಟು ವಿನಾಕಾರಣ ದೂರು ಸಲ್ಲಿಸಿರುವುದಾಗಿ ತಿಳುವಳಿಕೆ ನೀಡಿ ಪ್ರಕರಣ ಮುಕ್ತಾಯಗೊಳಿಸಲು ಶಿಫಾರಸ್ಸುಗಳಿವೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿಯಂತೆ ನೋಟರಿಯವರಿಂದ ಲೋಪವಾಗಿದ್ದರೂ, ಕಠಿಣ ಕ್ರಮ ತೆಗೆದುಕೊಳ್ಳುವುದು ಸೂಕ್ತವಲ್ಲವೆಂದು ಸರ್ಕಾರವು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಲಾ 117 ಎಲ್‌ಸಿಎಲ್ 2009, ಬೆಂಗಳೂರು, ದಿನಾಂಕ : 06-07-2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಶ್ರೀ ಎಲ್.ಪಿ. ಲಮಾಣಿ, ನೋಟರಿ, ಬಿಜಾಪುರ ಇವರಿಗೆ ಇನ್ನು ಮುಂದೆ ಇಂತಹ ತಪ್ಪುಗಳು ಪುನರಾವರ್ತನೆಯಾಗದಂತೆ ಕರ್ತವ್ಯ ನಿರ್ವಹಿಸಲು ತಿಳುವಳಿಕೆ ನೀಡಿ, ನೋಟರಿಗಳ ನಿಯಮಗಳು, 1956ರ ನಿಯಮ 13(12)(ಬಿ) iii ರನ್ವಯ ಎಚ್ಚರಿಕೆ ನೀಡಿ ಪ್ರಕರಣ ಮುಕ್ತಾಯಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಆರ್. ಶಕುಂತಲ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 1780

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ
ಸುತ್ತೋಲೆ

ಸಂಖ್ಯೆ : ಲಾ 217 ಎಲ್‌ಸಿಎಲ್ 2010, ಬೆಂಗಳೂರು ದಿನಾಂಕ : 17-06-2011

ವಿಷಯ : ನ್ಯಾಯಾಲಯದಲ್ಲಿ ಸಲ್ಲಿಸುವ ವಕಾಲತ್ತು ಮತ್ತು ಮಧ್ಯಂತರ ಅರ್ಜಿಗಳಿಗೆ ವಕೀಲರ ಕಲ್ಯಾಣ ನಿಧಿ ಸ್ಟಾಂಪ್ ಹಚ್ಚುವ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ :
1. ಪತ್ರ ಸಂಖ್ಯೆ : ಡಿಪಿಎನ್ : ಲೆಕ್ಕ-1 : 49 : 2005-06 ದಿನಾಂಕ : 12-10-2010 ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ನಿರ್ದೇಶಕರಿಂದ.
2. ಸುತ್ತೋಲೆ ಸಂಖ್ಯೆ ಲಾ 163 ಎಲ್‌ಸಿಎಲ್ 2005 ದಿನಾಂಕ : 02-06-2007.

ಮೇಲ್ಕಂಡ ವಿಷಯದಲ್ಲಿ ಉಲ್ಲೇಖಿತ (2)ರ ದಿನಾಂಕ : 02-06-2007ರ ಸುತ್ತೋಲೆಯಲ್ಲಿ ಸ್ಪಷ್ಟೀಕರಣ ನೀಡಲಾಗಿತ್ತು.

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು ಉಲ್ಲೇಖಿತ (1)ರ ದಿನಾಂಕ : 12-10-2010ರ ಪತ್ರದಲ್ಲಿ ಕರ್ನಾಟಕ ರಾಜ್ಯದ ಅಭಿಯೋಗ ಇಲಾಖೆಯ ಅಧಿಕಾರಿಗಳು ಸೇವೆಗೆ ಸೇರುವ ಪೂರ್ವದಲ್ಲಿ ವಕೀಲರಾಗಿದ್ದಾಗ್ಯೂ ಸರ್ಕಾರಿ ಸೇವೆಗೆ ಸೇರಿದ ಬಳಿಕ ಅವರು ಬಾರ್ ಕೌನ್ಸಿಲ್‌ನಲ್ಲಿ ನೋಂದಾಯಿಸಿರುವ ಸನದು (Sanad) ಅಮಾನತ್ತುಗೊಳ್ಳುತ್ತದೆ. ಎಲ್ಲಿಯವರೆಗೆ ಅವರ ಸನದು ಅಮಾನತ್ತಿನಲ್ಲಿರುತ್ತದೆಯೋ ಅಲ್ಲಿಯವರೆಗೆ ಅಡ್ವೋಕೇಟ್ ವೆಲ್‌ಫೇರ್‌ಫಂಡ್ ಅಧಿನಿಯಮದ ಅಡಿಯಲ್ಲಿನ ಕ್ಷೇಮಾಭಿವೃದ್ಧಿ ನಿಧಿಗೆ ಅವರು ಸದಸ್ಯರಾಗುವುದಿಲ್ಲ, ಹಾಗೂ ಆ ನಿಧಿಯ ಯಾವುದೇ ಸೌಲಭ್ಯಕ್ಕೆ ಅರ್ಹರಾಗುವುದಿಲ್ಲ, ಆದ್ದರಿಂದ ಅಡ್ವೋಕೇಟ್ ಕಲ್ಯಾಣ ನಿಧಿ ಅಧಿನಿಯಮದ ಕಲಂ 15ರ ಅಡಿಯಲ್ಲಿ ಅವರನ್ನು ವಕೀಲರು ಎಂಬುದಾಗಿ ಪರಿಗಣಿಸಲು ಬರುವುದಿಲ್ಲ, ಹಾಗೂ ಕಲಂ 23ರ ಪ್ರಕಾರ ವೆಲ್‌ಫೇರ್‌ಫಂಡ್ ಸ್ಟಾಂಪ್‌ಗಳನ್ನು ಹಚ್ಚುವ ಭಾಧ್ಯತೆ ಅವರಿಗೆ ಇರುವುದಿಲ್ಲ.

ಆದ್ದರಿಂದ ದಿನಾಂಕ : 02-06-2007ರ ಉಲ್ಲೇಖ (4)ರ ಸುತ್ತೋಲೆ ಸೂಚನೆಗಳನ್ನು ಮಾರ್ಪಡಿಸಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಅಭಿಯೋಜಕ ಅಧಿಕಾರಿಗಳು ವೆಲ್‌ಫೇರ್ ಸ್ಟಾಂಪ್‌ಗಳನ್ನು ಅಂಟಿಸುವುದರಿಂದ ವಿನಾಯಿತಿ ನೀಡುವ ಬಗ್ಗೆ ಸುತ್ತೋಲೆಯನ್ನು ಹೊರಡಿಸಲು ಕೋರಿದ್ದು, ಸರ್ಕಾರವು ಮೇಲಿನ ಅಂಶಗಳನ್ನು ಪರಿಗಣಿಸಿ ವಕೀಲರನ್ನು ಸರ್ಕಾರಿ ಅಭಿಯೋಜಕರಾಗಿ ನೇರವಾಗಿ ನೇಮಕ ಮಾಡಿದಲ್ಲಿ ಅವರು ವಕೀಲರ ಕ್ಷೇಮಾಭಿವೃದ್ಧಿ ಕಲ್ಯಾಣ ನಿಧಿ ಅಧಿನಿಯಮ 1983ರ ಪ್ರಕಾರ ಕ್ಷೇಮಾಭಿವೃದ್ಧಿ ನಿಧಿ ಸ್ಟಾಂಪ್‌ಗಳನ್ನು ಅಂಟಿಸಬೇಕಾಗುತ್ತದೆ. ಆದರೆ Department of Prosecutions and Government Litigation (Recruitment) Rules, 1982ರ ಅಡಿಯಲ್ಲಿ ನೇಮಕ ಹೊಂದಿರುವ ಸರ್ಕಾರಿ ಅಭಿಯೋಜಕರಿಗೆ ಇದು ಅನ್ವಯಿಸುವುದಿಲ್ಲ ಎಂದು ಸ್ಪಷ್ಟೀಕರಿಸಿದೆ.

(ಕಾನೂನು ಕಾರ್ಯದರ್ಶಿಗಳಿಂದ ಅನುಮೋದಿಸಲ್ಪಟ್ಟಿದೆ)

ಹೆಚ್.ಆರ್. ಶಕುಂತಲ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 1781

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಭೀಮಪ್ಪ ಸಣ್ಣ ಹನುಮಪ್ಪ ಮುದಿಗೌಡರ, ನಿವೃತ್ತ ಪ್ರ.ದ.ಸ., ಖಜಾನೆ ಇಲಾಖೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ : ಉಪ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ : ಕಂಪ್ಲೇಂಟ್/ಉಪಲೋಕ್/ಬಿಜಿಎಂ-276/2009/ಡಿಆರ್ಇ-1, ದಿ: 20-05-2011 ಮತ್ತು ಕರ್ನಾಟಕ ಉಪ ಲೋಕಾಯುಕ್ತ ಇವರ ವರದಿ ದಿನಾಂಕ : 19-05-2011.

ಪ್ರಸ್ತಾವನೆ :

ಉಪ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಪತ್ರದೊಂದಿಗೆ ಕಳುಹಿಸಿದ ಉಪಲೋಕಾಯುಕ್ತರ ವರದಿಯಲ್ಲಿ ಶ್ರೀ ಭೀಮಪ್ಪ ಸಣ್ಣ ಹನುಮಪ್ಪ ಮುದಿಗೌಡರ, ಪ್ರಥಮ ದರ್ಜೆ ಸಹಾಯಕರು, ಖಜಾನೆ ಇಲಾಖೆ ಅವರು ಉಪ ಖಜಾನೆ, ಹಿರೇಕೆರೂರು, ಹಾವೇರಿ ಜಿಲ್ಲೆ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಬಸವಣ್ಣಪ್ಪ ರಾಮಪ್ಪ ಹಿಂಗಳಗುಂಡಿ ಎಂಬ ಶಿಕ್ಷಕರಿಂದ ಅವರಿಗೆ ಮಂಜೂರಾದ ಸಾಮಾನ್ಯ ಭವಿಷ್ಯ ನಿಧಿಯ ಮುಂಗಡದ ರೂ. 50,000/-ಗಳ ಚೆಕ್ ಪಾಸ್ ಮಾಡಲು ರೂ. 500/-ಗಳನ್ನು ಕೇಳಿ ಅದನ್ನು ಪಡೆಯುತ್ತಿದ್ದಾಗಲೇ ದಿನಾಂಕ : 19-09-2008ರಂದು ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದಿದ್ದು, ಈ ಬಗ್ಗೆ ನಡೆದ ತನಿಖೆಯಿಂದಾಗಿ ಸದರಿ ಅಧಿಕಾರಿ ವಿರುದ್ಧ ಆರೋಪವು ಮೇಲ್ನೋಟಕ್ಕೆ ಸ್ಥಿರಪಟ್ಟಿದ್ದು ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14-ಎ ರನ್ವಯ ಮುಂದಿನ ಕ್ರಮ ಕೈಗೊಳ್ಳುವಂತೆ ಸನ್ಮಾನ್ಯ ಲೋಕಾಯುಕ್ತರು ಶಿಫಾರಸ್ಸು ಮಾಡಿದ್ದಾರೆ. ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದಾಗ ಶ್ರೀ ಭೀಮಪ್ಪ ಸಣ್ಣ ಹನುಮಪ್ಪ ಮುದಿಗೌಡರ, ಪ್ರಥಮ ದರ್ಜೆ ಸಹಾಯಕರು ದಿನಾಂಕ : 31-05-2011 ರಂದು ವಯೋನಿವೃತ್ತಿ ಹೊಂದಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಪ್ರಕರಣವನ್ನು ಪೂರ್ಣ ಪ್ರಮಾಣದ ವಿಚಾರಣೆಗಾಗಿ ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲು ತೀರ್ಮಾನಿಸಿ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 255 ಆಖಇ 2008 (2), ಬೆಂಗಳೂರು ದಿನಾಂಕ : 14ನೇ ಜುಲೈ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 214(2)(ಬಿ)(i)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಭೀಮಪ್ಪ ಸಣ್ಣ ಹನುಮಪ್ಪ ಮುದಿಗೌಡರ, ನಿವೃತ್ತ ಪ್ರಥಮ ದರ್ಜೆ ಸಹಾಯಕರು, ಖಜಾನೆ ಇಲಾಖೆ ಇವರ ವಿರುದ್ಧ ಮೇಲೆ ಹೇಳಿದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರ ಮೂಲಕ ನಡೆಯಬೇಕೆಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡ)

ಪಿ.ಆರ್. 1782

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಬಿ. ನಿಜಲಿಂಗಪ್ಪ, ಪತ್ರಾಂಕಿತ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ : ಉಪ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ : ಕಂಪ್ಲೇಂಟ್/ಉಪಲೋಕ್/ಬಿಜಿಎಂ-276/2009/ಡಿಆರ್ಇ-1, ದಿ: 20-05-2011 ಮತ್ತು ಕರ್ನಾಟಕ ಉಪ ಲೋಕಾಯುಕ್ತ ಇವರ ವರದಿ ದಿನಾಂಕ : 19-05-2011.

ಪ್ರಸ್ತಾವನೆ :

ಉಪ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಪತ್ರದೊಂದಿಗೆ ಕಳುಹಿಸಿದ ಉಪಲೋಕಾಯುಕ್ತರ ವರದಿಯಲ್ಲಿ ಶ್ರೀ ಬಿ. ನಿಜಲಿಂಗಪ್ಪ, ಪತ್ರಾಂಕಿತ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಅವರು ಉಪ ಖಜಾನೆ, ಹಿರೇಕೆರೂರು, ಹಾವೇರಿ ಜಿಲ್ಲೆ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇವರು ಬಸವಣ್ಣಪ್ಪ ರಾಮಪ್ಪ ಹಿಂಗಳಗುಂಡಿ ಎಂಬ ಶಿಕ್ಷಕರಿಂದ ಅವರಿಗೆ ಮಂಜೂರಾದ ಸಾಮಾನ್ಯ ಭವಿಷ್ಯ ನಿಧಿಯ ಮುಂಗಡದ ರೂ. 50,000/-ಗಳ ಚೆಕ್ ಪಾಸ್ ಮಾಡಲು ರೂ. 500/-ಗಳನ್ನು ಕೇಳಿ ಅದನ್ನು ಪಡೆಯುತ್ತಿದ್ದಾಗಲೇ ದಿನಾಂಕ : 19-09-2008ರಂದು ಲೋಕಾಯುಕ್ತರ ಪೊಲೀಸರ ಬಲೆಗೆ ಸಿಕ್ಕಿಬಿದ್ದಿದ್ದು, ಈ ಬಗ್ಗೆ ನಡೆದ ತನಿಖೆಯಿಂದಾಗಿ ಸದರಿ ಅಧಿಕಾರಿ ವಿರುದ್ಧ ಆರೋಪವು ಮೇಲ್ನೋಟಕ್ಕೆ ಸ್ಥಿರಪಟ್ಟಿದ್ದು ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14-ಎ ರನ್ವಯ ಮುಂದಿನ ಕ್ರಮ ಕೈಗೊಳ್ಳುವಂತೆ ಸನ್ಮಾನ್ಯ ಲೋಕಾಯುಕ್ತರು ಶಿಫಾರಸ್ಸು ಮಾಡಿದ್ದಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಪ್ರಕರಣವನ್ನು ಪೂರ್ಣ ಪ್ರಮಾಣದ ವಿಚಾರಣೆಗಾಗಿ ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲು ತೀರ್ಮಾನಿಸಿ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 255 ಆಖಇ 2008 (1), ಬೆಂಗಳೂರು ದಿನಾಂಕ : 14ನೇ ಜುಲೈ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಬಿ. ನಿಜಲಿಂಗಪ್ಪ, ಪತ್ರಾಂಕಿತ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಅವರ ವಿರುದ್ಧ ಮೇಲೆ ಹೇಳಿದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರ ಮೂಲಕ ನಡೆಯಬೇಕೆಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

ಪಿ.ಆರ್. 1783

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಎನ್. ಪೂರ್ವಾಚಾರ್, ಪತ್ರಾಂಕಿತ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ : ಉಪ ನಿಬಂಧಕರು, ವಿಚಾರಣೆಗಳು–1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ : ಕಂಪ್ಲೇಂಟ್/ಉಪಲೋಕ್/ಬಿಸಿಡಿ–563/2008/ಡಿಆರ್‌ಇ–1, ದಿ: 21–03–2011 ಮತ್ತು ಸನ್ಮಾನ್ಯ ಉಪ ಲೋಕಾಯುಕ್ತರ ವರದಿ ದಿನಾಂಕ : 17–03–2011.

ಪ್ರಸ್ತಾವನೆ :

ಉಪ ನಿಬಂಧಕರು, (ವಿಚಾರಣೆಗಳು–1), ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ ಪತ್ರದಲ್ಲಿ ಶ್ರೀ ಎನ್. ಪೂರ್ವಾಚಾರ್ ಪತ್ರಾಂಕಿತ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಅವರ ವಿರುದ್ಧ ಸನ್ಮಾನ್ಯ ಉಪ ಲೋಕಾಯುಕ್ತರು ತನಿಖೆ ನಡೆಸಿ ಸಲ್ಲಿಸಿದ ದಿನಾಂಕ : 17–03–2011ರ ವರದಿಯನ್ನು ಮುಂದಿನ ಕ್ರಮ ಕೈಗೊಳ್ಳಲು ಕಳುಹಿಸಿದ್ದಾರೆ. ಸದರೀ ವರದಿಯನ್ನು ಪರಿಶೀಲಿಸಲಾಗಿ ಶ್ರೀ ಎನ್. ಪೂರ್ವಾಚಾರ್ ಅವರು ಉಪ ಖಜಾನೆ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಪ್ರಾಥಮಿಕ ಆರೋಗ್ಯ ಕೇಂದ್ರ, ಅರಸೀಕೆರೆ, ಹರಪನಹಳ್ಳಿ ತಾ: ಇದರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ಒಟ್ಟು ರೂ. 1,27,350/–ಗಳ ಪ್ರವಾಸ ಭತ್ಯೆ ಬಿಲ್ಲುಗಳನ್ನು ಪಾಸ್ ಮಾಡುವ ಸಲುವಾಗಿ ಪರ್ಸೆಂಟೇಜ್ ಹಣ ರೂ. 7,500/–ಗಳ ಅಕ್ರಮ ಸಂಭಾವನೆಯನ್ನು ಕೇಳಿ ಸದರಿ ಮೊತ್ತವನ್ನು ದಿನಾಂಕ : 25–04–2007ರಂದು ಶ್ರೀ ಎಂ. ಹಾಲಪ್ಪ, ದ್ವಿತೀಯ ದರ್ಜೆ ಸಹಾಯಕರು, ಪ್ರಾಥಮಿಕ ಆರೋಗ್ಯ ಕೇಂದ್ರ, ಅರಸೀಕೆರೆ ಅವರಿಂದ ಪಡೆಯುತ್ತಿದ್ದಾಗಲೇ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಈ ಬಗ್ಗೆ ಸನ್ಮಾನ್ಯ ಉಪ ಲೋಕಾಯುಕ್ತರು ನಡೆಸಿದ ಪ್ರಾಥಮಿಕ ತನಿಖೆಯಲ್ಲಿ ಸದರಿ ಆರೋಪವು ಸಾಬೀತಾಗಿರುವುದರಿಂದ ಅವರ ವಿರುದ್ಧ ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ತಮಗೆ ವಹಿಸುವಂತೆ ಸನ್ಮಾನ್ಯ ಉಪ ಲೋಕಾಯುಕ್ತರು ಶಿಫಾರಸ್ಸು ಮಾಡಿದ್ದಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 70 ಆಖಇ 2007, ಬೆಂಗಳೂರು ದಿನಾಂಕ : 14ನೇ ಜುಲೈ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14–ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಎನ್. ಪೂರ್ವಾಚಾರ್, ಪತ್ರಾಂಕಿತ ಉಪ ಖಜಾನಾಧಿಕಾರಿ, ಖಜಾನೆ ಇಲಾಖೆ ಅವರ ವಿರುದ್ಧ ಹೇಳಿದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರ ಮೂಲಕ ನಡೆಸಬೇಕೆಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 1784 ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಸೈಯದ್ ಸಮೀಉಲ್ಲಾ, ಮುಖ್ಯಲೆಕ್ಕಿಗರು, ಖಜಾನೆ ಇಲಾಖೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ : ಉಪ ನಿಬಂಧಕರು, ವಿಚಾರಣೆಗಳು–5, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ : ಕಂಪ್ಲೇಂಟ್/ಉಪಲೋಕ್/ಬಿಸಿಡಿ–675/2007/ಡಿಆರ್‌ಇ–5, ದಿ: 12–04–2011 ಮತ್ತು ಕರ್ನಾಟಕ ಉಪ ಲೋಕಾಯುಕ್ತ ಇವರ ವರದಿ ದಿನಾಂಕ : 11–04–2011.

ಪ್ರಸ್ತಾವನೆ :

ಡೆಪ್ಯುಟಿ ರಿಜಿಸ್ಟ್ರಾರ್ (ವಿಚಾರಣೆಗಳು–5), ಕರ್ನಾಟಕ ಲೋಕಾಯುಕ್ತ ಇವರು ಮೇಲೆ ಓದಲಾದ ಪತ್ರದಲ್ಲಿ ಶ್ರೀ ಸೈಯದ್ ಸಮೀಉಲ್ಲಾ, ಲೆಕ್ಕಪತ್ರ ಸಹಾಯಕರು, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ಅವರು ಈ ಹಿಂದೆ ಮುಖ್ಯ ಲೆಕ್ಕಿಗರಾಗಿ ಉಪ ಖಜಾನೆ, ಕೃಷ್ಣರಾಜಪುರ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ನಿವೃತ್ತ ಶಿಕ್ಷಕರಾದ ಶ್ರೀ ಎಂ.ಪಿ. ಸೂರ್ಯನಾರಾಯಣ ಎಂಬ ವರ್ತೂರು ನಿವಾಸಿ ಕನ್ನಡ ಭಾಷಾ ಪರೀಕ್ಷೆ ಉತ್ತೀರ್ಣರಾಗಿದ್ದಕ್ಕಾಗಿ ವೇತನ ಬಡ್ತಿಯ ಬಾಕಿ ಮೊತ್ತದ ಬಿಲ್ ಪಾಸು ಮಾಡಲು ರೂ. 1000/– ಅಕ್ರಮ ಸಂಭಾವನೆಯನ್ನು ಪಡೆಯುವಾಗ ದಿನಾಂಕ : 02–04–2007 ರಂದು ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದು ಈ ಬಗ್ಗೆ ಮಾನ್ಯ ಉಪ ಲೋಕಾಯುಕ್ತರು ನಡೆಸಿದ ಪ್ರಾಥಮಿಕ ತನಿಖೆಯಿಂದ ಆರೋಪಿ ಶ್ರೀ ಸೈಯದ್ ಸಮೀಉಲ್ಲಾ, ಹಿಂದಿನ ಮುಖ್ಯಲೆಕ್ಕಿಗರು, ಕೆ.ಆರ್. ಪುರಂ, ಉಪ ಖಜಾನೆ ಇಲಾಖೆ ಅವರ ವಿರುದ್ಧ ಆರೋಪವು ಸಾಬೀತಾಗಿರುತ್ತದೆಂದು ಸನ್ಮಾನ್ಯ ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12(3) ರನ್ವಯ ದಿನಾಂಕ : 11–04–2011ರ ವರದಿ ಸಲ್ಲಿಸಿ ಸದರಿ ಅಧಿಕಾರಿಯ ವಿರುದ್ಧ ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ತಮಗೆ ವಹಿಸುವಂತೆ ಶಿಫಾರಸ್ಸು ಮಾಡಿದ್ದಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಪ್ರಕರಣವನ್ನು ಪೂರ್ಣ ಪ್ರಮಾಣದ ವಿಚಾರಣೆಗಾಗಿ ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲು ತೀರ್ಮಾನಿಸಿ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 69 ಆಖಇ 2011, ಬೆಂಗಳೂರು ದಿನಾಂಕ : 14ನೇ ಜುಲೈ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14–ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಸೈಯದ್ ಸಮೀಉಲ್ಲಾ, ಮುಖ್ಯಲೆಕ್ಕಿಗರು, ಖಜಾನೆ ಇಲಾಖೆ, ಪ್ರಸ್ತುತ ಲೆಕ್ಕಾಧೀಕ್ಷಕರು, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ಅವರ ವಿರುದ್ಧ ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರ ಮೂಲಕ ನಡೆಯಬೇಕೆಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 1785 ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನ ಪಡಸಾವಳಗಿ ಗ್ರಾಮದ ಹತ್ತಿರ ಹೊಸಕೆರೆ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ: 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ:ಮುಇಂ/ಸನೀ(ಉ)ವ/ಬಿಜೆಪಿ/ಪಿಬಿ-5/2011-12/3358, ದಿನಾಂಕ:23-6-2011

2) ಸರ್ಕಾರದ ಆದೇಶ ಸಂಖ್ಯೆ:ಸನೀಇ 236 ಮಸಾವಿ 2009(7), 19-8-2010.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನ ಪಡಸಾವಳಗಿ ಗ್ರಾಮದ ಹತ್ತಿರ ಹೊಸಕೆರೆ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	18-04-2011
ಜಿಲ್ಲಾ ಟೆಂಡರ್ ಬುಲೆಟಿನ್	15-04-2011
ಕರ್ನಾಟಕ ರಾಜ್ಯಪತ್ರ	14-04-2011
ಪ್ರಜಾವಾಣಿ ದಿನಪತ್ರಿಕೆ	21-04-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಐದು ಜನ ಗುತ್ತಿಗೆದಾರರು ಭಾಗವಹಿಸಿದ್ದು ಇವರಲ್ಲಿ ಒಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 27-5-2011ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ		ರೂ.3,42,83,434/-		
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ		ರೂ.3,32,82,965/-		
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ
1	ಸುನೀಲ ಚಂದ್ರಭಾನ ಮಾನೆ, ಒಂದನೇ ದರ್ಜೆ ಗುತ್ತಿಗೆದಾರರು	3,13,58,987/-	8.53 ಕಡಿಮೆ	5.781 ಕಡಿಮೆ

ಮೇಲ್ಕಂಡಂತೆ ಶ್ರೀ ಸುನೀಲ ಚಂದ್ರಭಾನ ಮಾನೆ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 5.781ರಷ್ಟು ಕಡಿಮೆ ಇದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 3,32,82,965/-ಗಳ ಮೇಲೆ ಶೇಕಡ 5.781ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 3,13,58,987/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 07 ಹೊಕೆನಿ (ತಾಂತ್ರಿಕ) 2011, ಬೆಂಗಳೂರು, ದಿನಾಂಕ:13ನೆ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನ ಪಡಸಾವಳಗಿ ಗ್ರಾಮದ ಹತ್ತಿರ ಹೊಸಕೆರೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 3,32,82,965/-ಗಳ ಮೇಲೆ ಶೇಕಡ 5.781ರಷ್ಟು ಕಡಿಮೆ ದರದಲ್ಲಿ ಅಂದರೆ ರೂ.3,13,58,987/- ಗಳಿಗೆ (ರೂ. ಮೂರು ಕೋಟಿ ಹದಿಮೂರು ಲಕ್ಷ ಐವತ್ತೆಂಟು ಸಾವಿರದ ಒಂಬೈನೂರ ಎಂಬತ್ತೇಳು ಮಾತ್ರ) ಶ್ರೀ ಸುನೀಲ ಚಂದ್ರಭಾನ ಮಾನೆ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯನ್ನು ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ)

ಪಿ.ಆರ್.1786

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಹಾಗೂ ತಾಲ್ಲೂಕಿನ ಕಿಣ್ಣಿ ಸರ್ಫೋಶಾ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ: 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ:ಮುಇಂ/ಸನೀ(ಉ)ವಲಯ/ಬಿಜೆಪಿ/ಪಿಬಿ-14/2011-12/3477, ದಿನಾಂಕ:29-06-2011.

2) ಸರ್ಕಾರದ ಆದೇಶ ಸಂಖ್ಯೆ:ಸನೀಇ 236 ಮಸಾವಿ 2009(3), 6-7-2010.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆಯ ಹಾಗೂ ತಾಲ್ಲೂಕಿನ ಕಿಣ್ಣಿ ಸರ್ಫೋಶಾ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	18-04-2011
ಜಿಲ್ಲಾ ಟೆಂಡರ್ ಬುಲೆಟಿನ್	15-04-2011
ಕರ್ನಾಟಕ ರಾಜ್ಯಪತ್ರ	14-04-2011
ಪ್ರಜಾವಾಣಿ ದಿನಪತ್ರಿಕೆ	21-04-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಆರು ಜನ ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಇಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 14-6-2011ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ		ರೂ.2,83,06,325/-		
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ		ರೂ.2,69,03,170/-		
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ / ಕಡಿಮೆ
1	ರವಿಶಂಕರ ಆರ್. ಅಂದ್ರಾಳ ಒಂದನೇ ದರ್ಜೆ ಗುತ್ತಿಗೆದಾರರು	2,55,15,754/-	9.86 ಕಡಿಮೆ	5.157 ಕಡಿಮೆ
2.	ರಿಯಾಜುದ್ದೀನ ಪಟೇಲ, ಒಂದನೇ ದರ್ಜೆ ಗುತ್ತಿಗೆದಾರರು	2,66,61,150/-	5.81 ಕಡಿಮೆ	0.90 ಕಡಿಮೆ

ಮೇಲ್ಕಂಡಂತೆ ಶ್ರೀ ರವಿಶಂಕರ ಆರ್. ಅಂದ್ರಾಳ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 5.157 ರಷ್ಟು ಕಡಿಮೆ ಇದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಈ ಟೆಂಡರ್‌ನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ.2,69,03,170 - ಗಳ ಮೇಲೆ ಶೇಕಡ5.157ರಷ್ಟು ಕಡಿಮೆ ದರದಲ್ಲಿ ಅಂದರೆ ರೂ.2,55,15,754/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 54 ಅಪಿಬಂ 2011 (ತಾಂತ್ರಿಕ), ಬೆಂಗಳೂರು, ದಿನಾಂಕ:13ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಹಾಗೂ ತಾಲ್ಲೂಕಿನ ಕಿಣ್ಣಿ ಸರ್ಫೋಶಾ ಗ್ರಾಮದ ಹತ್ತಿರ ಮುಲ್ಲಮಾರಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 2,69,03,170/-ಗಳ ಮೇಲೆ ಶೇ 5.157ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 2,55,15,754/-ಗಳಿಗೆ (ರೂ. ಎರಡು ಕೋಟಿ ಐವತ್ತೈದು ಲಕ್ಷ ಹದಿನೈದು ಸಾವಿರದ ಏಳು ನೂರ ಐವತ್ತನಾಲ್ಕು ಮಾತ್ರ) ಶ್ರೀ ರವಿಶಂಕರ ಆರ್. ಅಂದ್ರಾಳ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿ.ಆರ್.1787

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು ಕೊಡ್ಲಿ ಅಲ್ಲಾಪುರ ಗ್ರಾಮದ ಮುಳುಗಡೆಯಾದ ಜಮೀನುಗಳಲ್ಲಿದ್ದ ಗಿಡ ಮರಗಳು, ಬಾವಿ ಹಾಗೂ ಕಟ್ಟಡಗಳು ಮತ್ತು ಹಣ್ಣಿನ ಗಿಡಗಳ ಪರಿಹಾರ ಪಾವತಿಸುವ ಕುರಿತು.

ಓದಲಾಗಿದೆ: ವಿಶೇಷ ಭೂಸ್ವಾಧೀನಾಧಿಕಾರಿಗಳು, ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳು, ಗುಲ್ಬರ್ಗಾ ಇವರ ಪತ್ರ ಸಂಖ್ಯೆ: ಕಂ/ವಿಭೂಸ್ವಾ/1/24/94-95/99, ದಿನಾಂಕ:12-5-2011

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು ಕೊಡ್ಲಿ ಅಲ್ಲಾಪುರ ಗ್ರಾಮದ ಮುಳುಗಡೆಯಾದ ಜಮೀನುಗಳಲ್ಲಿದ್ದ ಗಿಡ ಮರಗಳು, ಬಾವಿ ಹಾಗೂ ಕಟ್ಟಡಗಳು ಮತ್ತು ಹಣ್ಣಿ ಗಿಡಗಳಿಗೆ ರಿಟ್ ಅರ್ಜಿ ಸಂಖ್ಯೆ : 40245/08ರಲ್ಲಿ ದಿನಾಂಕ 2-7-2009ರಂದು ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಪರಿಹಾರ ಪಾವತಿಸುವಂತೆ ಮೇಲೆ ಓದಲಾದ ದಿನಾಂಕ 12-05-20011ರ ಪತ್ರದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಯವರು ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 4-5-1995
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಮ ಘೋಷಿಸಿದ ದಿನಾಂಕ 25-6-1997

ಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ಪರಿಹಾರದ ಐತೀರ್ಮ ರಚಿಸುವಾಗ ಜಮೀನಿನಲ್ಲಿದ್ದ ಮರ ಗಿಡಗಳು ಹಾಗೂ ಕಟ್ಟಡ, ಇತ್ಯಾದಿ ರಚನೆಗಳಿಗೆ ನೀಡಬೇಕಾದ ಪರಿಹಾರ ಐತೀರ್ಪಿನಲ್ಲಿ ಕೈಬಿಟ್ಟು ಹೋಗಿದ್ದರಿಂದ, ಪರಿಹಾರಕ್ಕಾಗಿ ಭೂಮಾಲೀಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 40245/08ನ್ನು ದಾಖಲಿಸಿದ್ದು, ನ್ಯಾಯಾಲಯವು ಭೂಮಾಲೀಕರ ಪರವಾಗಿ ತೀರ್ಪು ನೀಡಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಇದು ಅರ್ಹ ಪ್ರಕರಣವಲ್ಲವೆಂದು ಕಂದಾಯ ಇಲಾಖೆಯು ಅಭಿಪ್ರಾಯ ನೀಡಿದೆ.

ವಿಷಯವನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 125 ಭೂಸ್ವಾಪ್ರ 2009 (ಭಾಗ-1), ಬೆಂಗಳೂರು, ದಿನಾಂಕ 12ನೇ ಜುಲೈ 2011.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗ ಜಿಲ್ಲೆ, ಚಿಂಚೋಳಿ ತಾಲ್ಲೂಕು ಕೊಡ್ಲಿ ಅಲ್ಲಾಪುರ ಗ್ರಾಮದ ಮುಳುಗಡೆಯಾದ ಜಮೀನುಗಳಲ್ಲಿದ್ದ ಗಿಡ ಮರಗಳು, ಬಾವಿ ಹಾಗೂ ಕಟ್ಟಡಗಳು ಮತ್ತು ಹಣ್ಣಿ ಗಿಡಗಳಿಗೆ ರಿಟ್ ಅರ್ಜಿ ಸಂಖ್ಯೆ 40245/08ರಲ್ಲಿ ದಿನಾಂಕ 2-7-2009ರಂದು ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಪರಿಹಾರ ಮೊತ್ತ ರೂ.11,14,059-00ಗಳನ್ನು (ಹನ್ನೊಂದು ಲಕ್ಷದ ಹದಿನಾಲ್ಕು ಸಾವಿರದ ಐವತ್ತೊಂಭತ್ತು ರೂಪಾಯಿಗಳು ಮಾತ್ರ) ಪಾವತಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರವು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಲೆಕ್ಕಾಚಾರ ತ:ಖ್ತೆಯನ್ನು ಮತ್ತೊಮ್ಮೆ ದೃಢೀಕರಿಸಿಕೊಂಡು ಪಾವತಿಸತಕ್ಕದ್ದು. ಎರಡನೇ ಬಾರಿ ಹೆಚ್ಚಿನ ಮೊತ್ತ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಮತ್ತೊಮ್ಮೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ.11,14,059/-ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಪಿ.ಆರ್.1788

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಮುಷ್ಠೂರ ಹಾಗೂ ಹೊಳೆಅನ್ವೇರಿ ಗ್ರಾಮದ ಬ್ರಿಡ್ಜ್ ಕಂ ಬ್ಯಾರೇಜ್ ವರ್ಕ್ಸ್‌ಶೆಡ್ ಕೂಡು ರಸ್ತೆ ಮತ್ತು ಸ್ಟಾಕ್ ಯಾರ್ಡ್ ನಿರ್ಮಾಣದ ಭೂಸ್ವಾಧೀನಕ್ಕೆ ಒಪ್ಪಂದದ ಅವಾರ್ಡ್ ರಚಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2009-10/3377, ದಿನಾಂಕ:9-6-2010

ಪ್ರಸ್ತಾವನೆ :

ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಮುಷ್ಠೂರ ಹಾಗೂ ಹೊಳೆಅನ್ವೇರಿ ಗ್ರಾಮದ ಬ್ರಿಡ್ಜ್ ಕಂ ಬ್ಯಾರೇಜ್ ವರ್ಕ್ಸ್‌ಶೆಡ್ ಕೂಡು ರಸ್ತೆ ಮತ್ತು ಸ್ಟಾಕ್ ಯಾರ್ಡ್ ನಿರ್ಮಾಣದ ಭೂಸ್ವಾಧೀನಕ್ಕೆ ಒಪ್ಪಂದದ ಅವಾರ್ಡ್ ರಚಿಸಲು ರೂ.11,29,969-00ಗಳನ್ನು ಬಿಡುಗಡೆ ಮಾಡುವಂತೆ ಮೇಲೆ ಓದಲಾದ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ದಿನಾಂಕ 9-6-2010ರ ಪತ್ರದಲ್ಲಿ ಕೋರಿದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ 13-3-2008ರಂದು, 6(1)ರ ಅಧಿಸೂಚನೆಯನ್ನು ದಿನಾಂಕ 21-4-2009ರಂದು ಹೊರಡಿಸಲಾಗಿದೆ. ದಿನಾಂಕ 23-2-2010ರಂದು ಉಪ ವಿಭಾಗಾಧಿಕಾರಿಗಳು, ಹಾವೇರಿ ರವರು ಒಪ್ಪಂದದ ದರ ನಿಗದಿಪಡಿಸಿದ್ದು, ಪ್ರತಿ ಎಕರೆಗೆ ರೂ.2,75,000/-ಗಳು ಹಾಗೂ ಪಂಚಾಯತ್ ಆಸ್ತಿ ಗುಂಟೆಗೆ ರೂ.33,000/-ಗಳು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಸಂದಾಯ ಮಾಡಿದ ಸಂಭಾವ್ಯ ಮೊತ್ತ ರೂ. 2,95,000/-ಗಳು, ಇದರಲ್ಲಿ ಉಪ ವಿಭಾಗಾಧಿಕಾರಿಗಳು, ಹಾವೇರಿ ಇವರು ಪತ್ರಿಕಾ ಪ್ರಕಟಣೆ ವೆಚ್ಚ ರೂ. 23,156/-ಗಳ ಖರ್ಚು ಮಾಡಿದ್ದು, ಬಾಕಿ ಉಳಿದಿರುವ ಮೊತ್ತ ರೂ.2,71,844/-ಗಳು ನಿಗದಿಪಡಿಸಿರುವ ಒಪ್ಪಂದದ ದರ ಒಟ್ಟು ರೂ. 14.01,812/-ಗಳು, ಬಾಕಿ ಉಳಿದಿರುವ ಮೊತ್ತ ರೂ.11,29,969/-ಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 84 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ:12ನೇ ಜುಲೈ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಮುಷ್ಠೂರ ಹಾಗೂ ಹೊಳೆಅನ್ವೇರಿ ಗ್ರಾಮದ ಬ್ರಿಡ್ಜ್ ಕಂ ಬ್ಯಾರೇಜ್ ವರ್ಕ್ಸ್‌ಶೆಡ್ , ಕೂಡು ರಸ್ತೆ ಮತ್ತು ಸ್ಟಾಕ್ ಯಾರ್ಡ್ ನಿರ್ಮಾಣದ ಭೂಸ್ವಾಧೀನಕ್ಕೆ ಒಪ್ಪಂದದ ಅವಾರ್ಡ್ ರಚಿಸಲು ರೂ. 11,29,969-00 ಗಳನ್ನು (ಹನ್ನೊಂದು ಲಕ್ಷದ ಇಪ್ಪತ್ತೊಂಭತ್ತು ಸಾವಿರದ ಒಂಭೈನೂರ ಅರವತ್ತೊಂಭತ್ತು ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರದ ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ.11,29,969/-ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1789

ಕೆ.ಸಿ.ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು ಮೇಳಕುಂದಾ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಸನೀಇ 151 ಭೂಸ್ವಾಪ್ರ 2005 , ದಿನಾಂಕ:24-02-2006
2) ಸರ್ಕಾರದ ಆದೇಶ ಸಂಖ್ಯೆ: ಸನೀಇ 151 ಭೂಸ್ವಾಪ್ರ 2005 , ದಿನಾಂಕ:22-07-2008
3) ವಿಶೇಷ ಭೂಸ್ವಾಧೀನಾಧಿಕಾರಿಗಳು, ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳು, ಗುಲ್ಬರ್ಗಾ ರವರ ಪತ್ರ ಸಂಖ್ಯೆ: ಕಂ/ವಿಭೂಸ್ವಾ/1/21/86-87, ದಿನಾಂಕ:29-05-2008
4) ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ:ಮುಇಂ /ಸನೀ(ಉ)/ಭೂಸ್ವಾ/ಬಿಜೆಪಿ/2010-11/5454, ದಿನಾಂಕ:4-10-2008

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು ಮೇಳಕುಂದಾ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಈಗಾಗಲೇ 2 ಬಾರಿ ಹಣ ಬಿಡುಗಡೆ ಮಾಡಲಾಗಿದೆ. ಸ್ವಾಧೀನಕ್ಕೊಳಪಟ್ಟ ಜಮೀನುಗಳನ್ನು ಇಲಾಖೆಯ ವಶಕ್ಕೆ ಕಬ್ಜೆ ಪಡೆದ ದಿನಾಂಕದ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲದೇ ಇದ್ದುದರಿಂದ, ಭೂಸ್ವಾಧೀನ ಕಾಯ್ದೆ ಕಲಂ 16(2)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 21-4-2001ರಿಂದ ಪರಿಹಾರ ಧನದ ಮೇಲೆ ಬಡ್ಡಿಯನ್ನು ದಿನಾಂಕ 31-01—2006ವರೆಗೆ ಲೆಕ್ಕ ಹಾಕಿ ಮೇಲೆ (1)ರಲ್ಲಿ ಓದಲಾದ ದಿನಾಂಕ 24-02-2006ರ ಸರ್ಕಾರದ ಆದೇಶದಲ್ಲಿ ರೂ.42.23.411-00ಗಳನ್ನು ಬಿಡುಗಡೆ ಮಾಡಲಾಗಿದೆ. ತದನಂತರ ಕಬ್ಜೆ ದಿನಾಂಕವನ್ನು ಭೂಸ್ವಾಧೀನಾಧಿಕಾರಿಗಳಿಂದ ದೃಢೀಕರಿಸಿಕೊಂಡು ದಿನಾಂಕ 20-3-1991ರಿಂದ ದಿನಾಂಕ 31-01-2006ವರೆಗೆ ಲೆಕ್ಕ ಹಾಕಿದ ಬಡ್ಡಿಯೊಂದಿಗೆ ಮೇಲೆ (2)ರಲ್ಲಿ ಓದಲಾದ ದಿನಾಂಕ 22-07-2008ರ

ಸರ್ಕಾರದ ಆದೇಶದಲ್ಲಿ ರೂ.38,73,159-00ಗಳನ್ನು ಬಿಡುಗಡೆ ಮಾಡಲಾಗಿದೆ. ಪಾವತಿಸಲು ಅನುಮೋದನೆ ನೀಡಲಾಗಿದೆ. ಆದರೆ, ಭೂಮಾಲೀಕರು ಬಾಕಿ ಮೊತ್ತ ಬಿಡುಗಡೆಗೆ 2006 ರಿಂದ 2008ರವೆಗೆ ವಿಳಂಬವಾಗಿರುವುದನ್ನು ಆಕ್ಷೇಪಿಸಿದ್ದರಿಂದ, ದಿನಾಂಕ 1-2-2006 ರಿಂದ 22-7-2008ರವರೆಗಿನ ಅವಧಿಗೆ ಬಡ್ಡಿ ಲೆಕ್ಕ ಹಾಕಿ ರೂ.9,45,315-00 ಗಳನ್ನು ಬಿಡುಗಡೆ ಮಾಡುವಂತೆ ಕೋರಿ ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಭೂಸ್ವಾಧೀನಾಧಿಕಾರಿಗಳು, ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳು, ಗುಲ್ಬರ್ಗಾ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಪಾವತಿಸಬೇಕಾದ ಬಾಕಿ ಮೊತ್ತದ ಪ್ರಕರಣವಾರು ವಿವರ ಕೆಳಕಂಡಂತಿದೆ.

ಕ್ರ.ಸಂ.	ಎಲ್‌ಎಸಿ ಸಂಖ್ಯೆ	ಸ.ನಂ.	ವಿಸ್ತೀರ್ಣ ಎ-ಗುಂ	ಪಾವತಿಸಬೇಕಾದ ಬಾಕಿ ಪರಿಹಾರ ಮೊತ್ತ ರೂ.ಗಳಲ್ಲಿ
1	337/98	85/3	0-23 w 0-37 d	15174
2	338/98	85/2	5-13 d 1-10 w	59582
3	339/98	85/1	1-14 d 0-23 w	18584
4	340/98	84/3	5-30 d	46143
5	341/98	84/2	4-02 d	32501
6	342/98	84/1	5-16 d	43334
7	343/98	83/4	1-25 d	13040
8	344/98	83/2	1-22 d	12438
9	345/98	83/1	1-38d	15648
10	346/98	82/3	7-10 d	58180
11	347/98	82/2	2-04 d	16852
12	348/98	71/3	0-15	3009
13	349/98	68/5	2-32 d	22469
14	350/98	68/4	2-04 d	16852
15	351/98	68/3	0-32 d	6419
16	352/98	68/2	6-22 d	52563
17	353/98	68/1	6-27d	53566
18	354/98	67/1-2,67/3, 67/1-4	12-00 d	96299
19	355/98	67/1	1-16 d	11234
20	356/98	65/6	0-11	2206
21	357/98	65/5	0-07	1478
22	358/98	64/3	1-00 d	8024
23	359/98	38/2	1-08 d	9630
24	360/98	37/2	4-00 d	32099
25	361/98	85/13	0-17 d 0-23 w	11361
26	362/98	82/1	2-14 d	18858
27	363/98	83/3	1-24 d	12839
28	364/98	90/2	2-00 d	16049
29	365/98	86/2	3-04 d	24877
30	366/98	85/12	1-01 d 0-23 w	16377
31	367/98	89/2	15-25 d	125389
32	368/98	87/3	0-16	3209
33	369/98	85/10	0-04 d 0-23w	8753

34	370/98	85/9	0-04 d 0-23 w	8753
35	371/98	85/8	0-24 d	4815
36	372/98	85/6	1-02 d 0-23 w	16563
37	373/98	85/7	0-36 d 0-23 w	15174
38	374/98	85/11	0-17 d 0-23 w	11361
39	375/98	85/5	0-18 d	3611
		ಒಟ್ಟು		**945313**

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 70 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ:12ನೇ ಜುಲೈ 2011.

ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು ಮೇಳಕುಂದಾ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಮೇಳಕುಂದಾ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಹಾಕಿದ ಬಾಕಿ ಪರಿಹಾರ ಧನ ಮೊತ್ತ ರೂ.9,45,313-00ಗಳನ್ನು (ಒಂಭತ್ತು ಲಕ್ಷದ ನಲವತ್ತೈದು ಸಾವಿರದ ಮುನ್ನೂರ ಹದಿಮೂರು ರೂಪಾಯಿಗಳು ಮಾತ್ರ) ಪಾವತಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜನಿಯರ್ ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಲ್ಲಿ ರೂ.9,45,313/-ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್.1790

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಗುಂಡಳ್ಳಿ ಗ್ರಾಮದ ಹತ್ತಿರ ಕಮಲಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಪಿಬಿ-14/2011-12/3474, ದಿನಾಂಕ 29-06-2011.

2. ಸರ್ಕಾರದ ಆದೇಶ ಸಂಖ್ಯೆ : ಸನೀಇ 236 ಮಸಾವಿ 2009 (16), ದಿನಾಂಕ 09-7-2010.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಗುಂಡಳ್ಳಿ ಗ್ರಾಮದ ಹತ್ತಿರ ಕಮಲಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	18–04–2011
ಜಿಲ್ಲಾ ಟೆಂಡರ್ ಬುಲೆಟಿನ್	15–04–2011
ಕರ್ನಾಟಕ ರಾಜ್ಯಪತ್ರ	14–04–2011
ಪ್ರಜಾವಾಣಿ ದಿನಪತ್ರಿಕೆ	21–04–2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಐದು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಈ ಪೈಕಿ ನಾಲ್ಕು ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 31–05–2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 2,84,86,373/–
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 2,70,89,501/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಹುಲಿಕಂತರಾಯ ಸಾಹೇಬ ಗೌಡ ಒಂದನೇ ದರ್ಜೆ ಗುತ್ತಿಗೆದಾರರು	2,57,33,165/–	9.67 ಕಡಿಮೆ	5.006 ಕಡಿಮೆ
2	ಅಮೃತಾ ಕನ್‌ಸ್ಟ್ರಕ್ಷನ್ಸ್ ಒಂದನೇ ದರ್ಜೆ ಗುತ್ತಿಗೆದಾರರು	2,67,86,827/–	5.97 ಕಡಿಮೆ	1.12 ಕಡಿಮೆ
3	ಜಿ. ಮಸ್ತಾನಯ್ಯ ಒಂದನೇ ದರ್ಜೆ ಗುತ್ತಿಗೆದಾರರು	2,67,92,322/–	5.95 ಕಡಿಮೆ	1.10 ಕಡಿಮೆ
4	ದೇವೀಂದ್ರಪ್ಪ ಗೌಡ ಒಂದನೇ ದರ್ಜೆ ಗುತ್ತಿಗೆದಾರರು	2,72,07,455/–	4.49 ಕಡಿಮೆ	0.435 ಹೆಚ್ಚು

ಮೇಲ್ಕಂಡಂತೆ ಶ್ರೀ ಹುಲಿಕಂತರಾಯ ಸಾಹೇಬ ಗೌಡ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 5.006 ರಷ್ಟು ಕಡಿಮೆ ಇದ್ದು, ಸದರಿಯವರ ಟೆಂಡರನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 2,70,89,501/– ಗಳ ಮೇಲೆ ಶೇಕಡ 5.006 ರಷ್ಟು ಕಡಿಮೆ ದರದಲ್ಲಿ ಅಂದರೆ ರೂ.2,57,33,165/– ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 56 ಅಪಿಬಂ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 13ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಗುಂಡಳ್ಳಿ ಗ್ರಾಮದ ಹತ್ತಿರ ಕಮಲಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 2,70,89,501/– ಗಳ ಮೇಲೆ ಶೇಕಡ 5.006 ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 2,57,33,165/–ಗಳಿಗೆ (ರೂ. ಎರಡು ಕೋಟಿ ಐವತ್ತೇಳು ಲಕ್ಷ ಮೂವತ್ತಮೂರು ಸಾವಿರದ ಒಂದು ನೂರ ಅರವತ್ತೈದು ಮಾತ್ರ) ಶ್ರೀ ಹುಲಿಕಂತರಾಯ ಸಾಹೇಬ ಗೌಡ, ಒಂದನೇ ದರ್ಜೆ ಗುತ್ತಿಗೆದಾರರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1791

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮಲಕೂಡ ಗ್ರಾಮದ ಹತ್ತಿರ ಬೆಣ್ಣೆತೋರಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಪಿಬಿ-4/2011-12/3370, ದಿನಾಂಕ 24-06-2011.

2. ಸರ್ಕಾರದ ಆದೇಶ ಸಂಖ್ಯೆ : ಸನೀಇ 236 ಮಸಾವಿ 2009 (1), ದಿನಾಂಕ 16-7-2010.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮಲಕೂಡ ಗ್ರಾಮದ ಹತ್ತಿರ ಬೆಣ್ಣೆತೋರಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರರವರು ಈ ಕಾಮಗಾರಿಯ ರೂ. 335.00 ಲಕ್ಷ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	18-04-2011
ಜಿಲ್ಲಾ ಟೆಂಡರ್ ಬುಲೆಟಿನ್	15-04-2011
ಕರ್ನಾಟಕ ರಾಜ್ಯಪತ್ರ	14-04-2011
ಪ್ರಜಾವಾಣಿ ದಿನಪತ್ರಿಕೆ	21-04-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಏಳು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಇವರಲ್ಲಿ ಐದು ಜನ ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 27-05-2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 3,12,29,122/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 2,95,42,377/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಎಸ್.ಎಂ. ಬೀರಾದಾರ ಒಂದನೇ ದರ್ಜೆ ಗುತ್ತಿಗೆದಾರರು	2,83,86,137/-	9.103 ಕಡಿಮೆ	3.914 ಕಡಿಮೆ
2	ದೇವೀಂದ್ರಪ್ಪ ಗೌಡ ಎಂ. ಬೀರಾದಾರ ಒಂದನೇ ದರ್ಜೆ ಗುತ್ತಿಗೆದಾರರು	2,88,30,666/-	7.680 ಕಡಿಮೆ	2.41 ಕಡಿಮೆ
3	ಜಿ. ಮಸ್ತಾನಯ್ಯ ಒಂದನೇ ದರ್ಜೆ ಗುತ್ತಿಗೆದಾರರು	2,93,70,155/-	5.952 ಕಡಿಮೆ	0.58 ಕಡಿಮೆ
4	ಅಮೃತಾ ಕನ್‌ಸ್ಟ್ರಕ್ಷನ್ಸ್ ಒಂದನೇ ದರ್ಜೆ ಗುತ್ತಿಗೆದಾರರು	3,00,01,235/-	3.931 ಕಡಿಮೆ	1.55 ಹೆಚ್ಚು
5	ಧನರಾಜ ಎಸ್. ತಾಳಮಪಳ್ಳಿ ಒಂದನೇ ದರ್ಜೆ ಗುತ್ತಿಗೆದಾರರು	3,43,44,791/-	9.97 ಹೆಚ್ಚು	16.25 ಹೆಚ್ಚು

ಮೇಲ್ಕಂಡಂತೆ ಶ್ರೀ ಎಸ್.ಎಂ. ಬೀರಾದಾರ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 3.914 ರಷ್ಟು ಕಡಿಮೆ ಇದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 2,95,42,377/- ಗಳ ಮೇಲೆ ಶೇಕಡ 3.914 ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 2,83,86,137/- ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 50 ಅಪಿಬಂ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 13ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮಲಕೂಡ ಗ್ರಾಮದ ಹತ್ತಿರ ಬೆಣ್ಣೆತೋರಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 2,95,42,377/- ಗಳ ಮೇಲೆ 3.914 ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 2,83,86,137/-ಗಳಿಗೆ (ರೂ. ಎರಡು ಕೋಟಿ ಎಂಬತ್ತಮೂರು ಲಕ್ಷ ಎಂಬತ್ತಾರು ಸಾವಿರದ ಒಂದು ನೂರ ಮುವತ್ತೇಳು ಮಾತ್ರ) ಶ್ರೀ ಎಸ್.ಎಂ. ಬೀರಾದಾರ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುದ್ರಮೂರ್ತಿ,
ಪಿ.ಆರ್. 1792 ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಭೂತಪೂರ ಗ್ರಾಮದ ಹತ್ತಿರ ಕಮಲಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಪಿಬಿ-14/2011-12/3476, ದಿನಾಂಕ 29-06-2011.
2. ಸರ್ಕಾರದ ಆದೇಶ ಸಂಖ್ಯೆ : ಸನೀಇ 236 ಮಸಾವಿ 2009 (1), ದಿನಾಂಕ 03-4-2010.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಭೂತಪೂರ ಗ್ರಾಮದ ಹತ್ತಿರ ಕಮಲಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	18-04-2011
ಜಿಲ್ಲಾ ಟೆಂಡರ್ ಬುಲೆಟಿನ್	15-04-2011
ಕರ್ನಾಟಕ ರಾಜ್ಯಪತ್ರ	14-04-2011
ಪ್ರಜಾವಾಣಿ ದಿನಪತ್ರಿಕೆ	21-04-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಈ ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 31-05-2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 2,84,61,892/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 3,42,15,380/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಅಮರೇಶ ಗೌಡ ಬಿ. ಪಾಟೀಲ ಒಂದನೇ ದರ್ಜೆ ಗುತ್ತಿಗೆದಾರರು	3,31,28,452/-	16.40 ಹೆಚ್ಚು	3.177 ಕಡಿಮೆ

2	ದೇವೀಂದ್ರಪ್ಪ ಗೌಡ ಎಂ. ಬೀರಾದಾರ ಒಂದನೇ ದರ್ಜೆ ಗುತ್ತಿಗೆದಾರರು	3,47,78,332/-	22.19 ಹೆಚ್ಚು	1.64 ಹೆಚ್ಚು
3	ಅಮೃತಾ ಕನ್‌ಸ್ಟ್ರಕ್ಷನ್ಸ್ ಒಂದನೇ ದರ್ಜೆ ಗುತ್ತಿಗೆದಾರರು	3,54,44,905/-	24.53 ಹೆಚ್ಚು	3.59 ಹೆಚ್ಚು

ಮೇಲ್ಕಂಡಂತೆ ಶ್ರೀ ಅಮರೇಶ ಗೌಡ ಬಿ. ಪಾಟೀಲ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 3.177 ರಷ್ಟು ಕಡಿಮೆ ಇದ್ದು, ಸದರಿಯವರ ಟೆಂಡರನ್ನು ಅಂಗೀಕರಿಸುವಂತೆ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 3,42,15,380/- ಗಳ ಮೇಲೆ ಶೇಕಡ 3.177 ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 3,31,28,452/- ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 55 ಅಪಿಬಂ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 13ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಭೂತಪೂರ ಗ್ರಾಮದ ಹತ್ತಿರ ಕಮಲಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 3,42,15,380/- ಗಳ ಮೇಲೆ ಶೇಕಡ 3.177 ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 3,31,28,452/-ಗಳಿಗೆ (ರೂ. ಮೂರು ಕೋಟಿ ಮುವತ್ತೊಂದು ಲಕ್ಷ ಇಪ್ಪತ್ತೆಂಟು ಸಾವಿರದ ನಾಲ್ಕು ನೂರ ಐವತ್ತೆರಡು ಮಾತ್ರ) ಶ್ರೀ ಅಮರೇಶ ಗೌಡ ಬಿ. ಪಾಟೀಲ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,

ಪಿ.ಆರ್. 1793

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ರಂಜೋಳ ಗ್ರಾಮದ ಹತ್ತಿರ ಕಮಲಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಪಿಬಿ-14/2011-12/3475, ದಿನಾಂಕ 29-06-2011.

2. ಸರ್ಕಾರದ ಆದೇಶ ಸಂಖ್ಯೆ : ಸನೀಇ 236 ಮಸಾವಿ 2009 (15), ದಿನಾಂಕ 09-07-2010.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ರಂಜೋಳ ಗ್ರಾಮದ ಹತ್ತಿರ ಕಮಲಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	18-04-2011
ಜಿಲ್ಲಾ ಟೆಂಡರ್ ಬುಲೆಟಿನ್	15-04-2011
ಕರ್ನಾಟಕ ರಾಜ್ಯಪತ್ರ	14-04-2011
ಪ್ರಜಾವಾಣಿ ದಿನಪತ್ರಿಕೆ	21-04-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ನಾಲ್ಕು ಜನ ಗುತ್ತಿಗೆದಾರರು ಭಾಗವಹಿಸಿದ್ದು, ನಾಲ್ಕೂ ಜನ ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ 31-05-2011 ರಂದು ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 3,34,57,075/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 3,15,81,085/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಎಸ್.ಎಂ. ಬೀರಾದಾರ ಒಂದನೇ ದರ್ಜೆ ಗುತ್ತಿಗೆದಾರರು	2,96,25,415/-	11.45 ಕಡಿಮೆ	6.19 ಕಡಿಮೆ
2	ದೇವೀಂದ್ರಪ್ಪ ಗೌಡ ಎಂ. ಬೀರಾದಾರ ಒಂದನೇ ದರ್ಜೆ ಗುತ್ತಿಗೆದಾರರು	3,06,47,466/-	8.40 ಕಡಿಮೆ	2.96 ಕಡಿಮೆ
3	ಅಮೃತಾ ಕನ್‌ಸ್ಟ್ರಕ್ಷನ್ಸ್ ಒಂದನೇ ದರ್ಜೆ ಗುತ್ತಿಗೆದಾರರು	3,14,61,979/-	5.96 ಕಡಿಮೆ	0.38 ಕಡಿಮೆ
4	ಜಿ. ಮಸ್ತಾನಯ್ಯ ಒಂದನೇ ದರ್ಜೆ ಗುತ್ತಿಗೆದಾರರು	3,14,65,973/-	5.95 ಕಡಿಮೆ	0.36 ಕಡಿಮೆ

ಮೇಲ್ಕಂಡಂತೆ ಶ್ರೀ ಎಸ್.ಎಂ. ಬೀರಾದಾರ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 6.19 ರಷ್ಟು ಕಡಿಮೆ ಇದ್ದು, ಸದರಿಯವರ ಟೆಂಡರನ್ನು ಅಂಗೀಕರಿಸುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 3,15,81,085/- ಗಳ ಮೇಲೆ ಶೇಕಡ 6.19 ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 2,96,25,415/- ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 57 ಅಪಿಬಂ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 13ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ರಂಜೋಳ ಗ್ರಾಮದ ಹತ್ತಿರ ಕಮಲಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 3,15,81,085/- ಗಳ ಮೇಲೆ ಶೇಕಡ 6.19 ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 2,96,25,415/- ಗಳಿಗೆ (ರೂ. ಎರಡು ಕೋಟಿ ತೊಂಬತ್ತಾರು ಲಕ್ಷ ಇಪ್ಪತ್ತೈದು ಸಾವಿರದ ನಾಲ್ಕು ನೂರ ಹದಿನೈದು ಮಾತ್ರ) ಶ್ರೀ ಎಸ್.ಎಂ. ಬೀರಾದಾರ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1794

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಖೇರಡಾ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಕುರಿತು.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-6/2011-12/2933, ದಿನಾಂಕ 01-06-2011.

2. ಸರ್ಕಾರದ ಆದೇಶ ಸಂಖ್ಯೆ : ಸನೀಇ 236 ಮಸಾವಿ 2009 (4), ದಿನಾಂಕ 16-7-2010.

ಪ್ರಸ್ತಾವನೆ :

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಖೇರಡಾ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ರೂ. 135.00 ಲಕ್ಷದ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ

(ಉತ್ತರ) ವಲಯ, ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಸಣ್ಣ ನೀರಾವರಿ ವಿಭಾಗ ಬೀದರ್‌ನಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	03-11-2010
ವಿಜಯ ಕರ್ನಾಟಕ ದಿನಪತ್ರಿಕೆ	13-11-2010

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬ ಗುತ್ತಿಗೆದಾರರು ಭಾಗವಹಿಸಿದ್ದು, ಅವರು ಅರ್ಹತೆ ಹೊಂದಿರುತ್ತಾರೆ. ಅವರ ಟೆಂಡರ್ ತೆರೆದು ಪರಿಶೀಲಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,10,26,667/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,42,76,837/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಗುರುನಾಥ ಕೊಳ್ಳೂರ ಒಂದನೇ ದರ್ಜೆ ಗುತ್ತಿಗೆದಾರರು	1,84,55,588/-	67.37 ಹೆಚ್ಚು	29.27 ಹೆಚ್ಚು

ಮೇಲ್ಕಂಡಂತೆ ಶ್ರೀ ಗುರುನಾಥ ಕೊಳ್ಳೂರ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 29.27 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ದಿನಾಂಕ 27-06-2011 ರಂದು ಪತ್ರವನ್ನು ನೀಡಿದ್ದು ಕಾಮಗಾರಿಯನ್ನು ಪರಿಷ್ಕೃತ ಟೆಂಡರಿಗಿಟ್ಟ ದರಗಳ ಮೇಲೆ ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,42,76,837/-ಗಳ ಮೇಲೆ ಶೇಕಡ 8.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,54,18,984/- ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 48 ಅಪಿಬಂ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 13ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಖೇರಡಾ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 1,42,76,837/-ಗಳ ಮೇಲೆ ಶೇಕಡ 8.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,54,18,984/- ಗಳಿಗೆ (ರೂ. ಒಂದು ಕೋಟಿ ಐವತ್ತನಾಲ್ಕು ಲಕ್ಷ ಹದಿನೆಂಟು ಸಾವಿರದ ಒಂಭೈನೂರ ಎಂಬತ್ತನಾಲ್ಕು ಮಾತ್ರ) ಶ್ರೀ ಗುರುನಾಥ ಕೊಳ್ಳೂರ, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ,

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1795

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಚಿತ್ತಾಪುರ ತಾಲ್ಲೂಕಿನ ಕಲ್ಲಂಬೆಳಗೇರಾ ಗ್ರಾಮದ ಸಣ್ಣ ನೀರಾವರಿ ಕೆರೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಉಚ್ಚ ನ್ಯಾಯಾಲಯದ ಆದೇಶಾನುಸಾರ ಪರಿಹಾರ ನೀಡುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ ಸನೀ/(ಉ)ವ/ಭೂಸ್ವಾಪ್ರ/2010-11/4790, ದಿನಾಂಕ 31-08-10.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆ, ಚಿತ್ತಾಪುರ ತಾಲ್ಲೂಕಿನ ಕಲ್ಲಂಬೆಳಗೇರಾ ಗ್ರಾಮದ ಸಣ್ಣ ನೀರಾವರಿ ಕೆರೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳ ಪರಿಹಾರ ಧನದ ವಿಷಯದಲ್ಲಿ ಉಚ್ಚ ನ್ಯಾಯಾಲಯವು ಮೇಲ್ಮನವಿ (ಎಂಎಫ್ಎ) ಪ್ರಕರಣದಲ್ಲಿ ನೀಡಿದ ಆದೇಶದಂತೆ ಪರಿಹಾರ ಪಾವತಿಸಲು ಅನುಮೋದನೆ ನೀಡುವಂತೆ ಕೋರಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ಇವರು ದಿನಾಂಕ 31-08-10 ರ ಪತ್ರದಲ್ಲಿ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಚಿತ್ತಾಪುರ ತಾಲ್ಲೂಕಿನ ಕಲ್ಲಂಬೆಳಗೇರಾ ಗ್ರಾಮದ ಬಳಿ ನಿರ್ಮಿಸಿರುವ ಸಣ್ಣ ನೀರಾವರಿ ಕೆರೆಗಾಗಿ ಸದರಿ ಗ್ರಾಮದ ಸ.ನಂ.156/2ರ 9.27 ಎಕರೆ ಜಮೀನುಗಳನ್ನು ಭೂ ಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆಯನ್ನು ದಿನಾಂಕ 13-02-1997 ರಂದು ಮತ್ತು ಕಲಂ 6(1) ರಡಿ ದಿನಾಂಕ 05-03-1998 ರಂದು ಹೊರಡಿಸಲಾಗಿದೆ. ಪರಿಹಾರಧನದ ಐತೀರ್ಪನ್ನು ವಿಶೇಷ ಭೂಸ್ವಾಧೀನಾಧಿಕಾರಿ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳು, ಗುಲ್ಬರ್ಗಾ ರವರು ದಿನಾಂಕ 20-06-1998 ರಂದು ಹೊರಡಿಸಿರುತ್ತಾರೆ.

ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆಯ ಕಲಂ 18(1) ರನ್ವಯ ಸೇಡಂನ ಸಿವಿಲ್ ನ್ಯಾಯಾಲಯದಲ್ಲಿ (ಹಿರಿಯ ಶ್ರೇಣಿ) ಎಲ್.ಎ.ಸಿ. ಪ್ರಕರಣಗಳನ್ನು ದಾಖಲಿಸಿದ್ದು, ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣ ಸಂ : 470/02 ರಲ್ಲಿ ಹೆಚ್ಚಿನ ಪರಿಹಾರ ಧನ ಪಾವತಿಸಲು ತೀರ್ಪು ನೀಡಿದೆ. ಈ ತೀರ್ಪಿನ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ದಿನಾಂಕ 25-08-2008ರ ತೀರ್ಪಿನಲ್ಲಿ ವಜಾಗೊಂಡಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಇದು ಅರ್ಹ ಪ್ರಕರಣವಲ್ಲವೆಂದು ಕಾನೂನು ಇಲಾಖೆಯು ಪತ್ರ ಸಂಖ್ಯೆ : ಲಾ 177 ಎಲ್ಎಸ್‌ಪಿ 2011, ದಿನಾಂಕ 01-03-2011 ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನಂತೆ ಹೆಚ್ಚುವರಿ ಪರಿಹಾರ ಮೊತ್ತದ ಶೇ. 50 ರಷ್ಟು ರೂ. 2,27,981/- ಗಳನ್ನು ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ : ಸನೀಇ 66 ಭೂಸ್ವಾಪ್ರ 2005, ದಿನಾಂಕ 16-06-2005 ರಲ್ಲಿ ಅನುಮೋದನೆ ನೀಡಿದೆ. ಉಳಿದ ಮೊತ್ತ ರೂ. 5,20,854/- ಗಳನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್ ರವರು ಕೋರಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 146 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ 12ನೇ ಜುಲೈ 2011

ಗುಲ್ಬರ್ಗಾ ಜಿಲ್ಲೆ, ಚಿತ್ತಾಪುರ ತಾಲ್ಲೂಕು ಕಲ್ಲಂಬೆಳಗೇರಾ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕಲ್ಲಂಬೆಳಗೇರಾ ಗ್ರಾಮಕ್ಕೆ ಸೇರಿದ ಪ್ರಸ್ತಾವನೆಯಲ್ಲಿ ನಮೂದಿಸಿರುವ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಪರಿಹಾರ ಪಾವತಿಸಲು ರೂ. 4,11,852-00 ಗಳನ್ನು (ನಾಲ್ಕು ಲಕ್ಷದ ಹನ್ನೊಂದು ಸಾವಿರದ ಎಂಟುನೂರ ಐವತ್ತೆರಡು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತಿಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ "ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ರೂ. 4,11,852-00/- ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ 20-10-10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 1796

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ಬೋರಗಲ್ ಗ್ರಾಮದ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ ಮುಇಂ/ಸನೀ/(ಉ)ವ/ಬಿಜಾ/ಭೂಸ್ವಾಪ್ರ/2010-11/1735, ದಿನಾಂಕ 28-03-2011.

ಪ್ರಸ್ತಾವನೆ :

ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ಬೋರಗಲ್ ಗ್ರಾಮದ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೋರಗಲ್ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮೇಲೆ ಓದಲಾದ ದಿನಾಂಕ 28-03-2011ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ, ಉತ್ತರ ವಲಯ, ಬಿಜಾಪುರ ಇವರು ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1) ರ ಅಧಿಸೂಚನೆಯನ್ನು ದಿನಾಂಕ 03-03-94 ರಂದು ಹೊರಡಿಸಿದೆ. ಭೂಸ್ವಾಧೀನಾಧಿಕಾರಿಗಳು ದಿನಾಂಕ 30-06-1997 ರಂದು ರಚಿಸಿದ ಐತೀರ್ಪಿನಲ್ಲಿ ಪ್ರತಿ ಎಕರೆಗೆ ರೂ.17,000/- ಗಳ ಮಾರುಕಟ್ಟೆ ಬೆಲೆ ನಿಗದಿಪಡಿಸಿರುತ್ತಾರೆ. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನ ಕಾಯ್ದೆ ಕಲಂ 18(1) ರಡಿ ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಧನ ಪಡೆದು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಹುಕ್ಕೇರಿ ಸಿವಿಲ್ (ಹಿರಿಯ ವಿಭಾಗ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣವನ್ನು ದಾಖಲಿಸಿದ್ದು ನ್ಯಾಯಾಲಯವು ಪ್ರತಿ ಎಕರೆಗೆ ರೂ. 2,00,000/- ಗಳನ್ನು ನಿಗದಿಪಡಿಸಿದೆ. ಇದಕ್ಕೆ ತೃಪ್ತರಾಗದ ಭೂಮಾಲೀಕರು ಉಚ್ಚ ನ್ಯಾಯಾಲಯದಲ್ಲಿ ಎಂಎಫ್ಎ ಸಂಖ್ಯೆ 6222/04 ನ್ನು ದಾಖಲಿಸಿದ್ದು, ಉಚ್ಚ ನ್ಯಾಯಾಲಯವು ಸಿವಿಲ್ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದು ಮೇಲ್ಮನವಿಯನ್ನು ವಜಾಗೊಳಿಸಿದೆ. ಎಂ.ಎಫ್.ಎ. 6222/04ರ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ : ಲಾ 1563 ಎಲ್‌ಬಿಎಸ್ 2007, ದಿನಾಂಕ 05-09-2007 ರಲ್ಲಿ ಅಭಿಪ್ರಾಯ ನೀಡಿದೆ. ನ್ಯಾಯಾಲಯವು ಹೆಚ್ಚಿನ ಪರಿಹಾರಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ :

ಕ್ರಸಂ.	ಎಲ್ಎಸಿ ಸಂಖ್ಯೆ	ಎಂ.ಎಫ್.ಎ. ಸಂಖ್ಯೆ	ಬೋರಗಲ್ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	15/03	6222/04	292/6+7+8ಎ 292/6+7+8ಬಿ 292/6+7+8ಸಿ	3-39	20,54,676-00

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 39 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ 13ನೇ ಜುಲೈ 2011

ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ಬೋರಗಲ್ ಗ್ರಾಮದ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೋರಗಲ್ ಗ್ರಾಮದ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ರೂ. 20,54,676-00 ಗಳನ್ನು (ಇಪ್ಪತ್ತು ಲಕ್ಷದ ಐವತ್ನಾಲ್ಕು ಸಾವಿರದ ಆರುನೂರ ಎಪ್ಪತ್ತಾರು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತಿಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ರೂ. 20,54,676-00/- ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ 20-10-10 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

[illegible]. 1797

ಕೆ.ಸಿ. ಸಿದ್ದಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಬೆಲ್ದಾಳ ಗ್ರಾಮದ ಹತ್ತಿರ ಬಾಂದಾರ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಕುರಿತು.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ–6/2011-12/2766 ದಿನಾಂಕ: 26-05-2011.
2. ಸರ್ಕಾರದ ಆದೇಶ ಸಂಖ್ಯೆ: ಸನೀಇ 236 ಮಸಾವಿ 2009(4) ದಿನಾಂಕ: 16-07-2010.

ಪ್ರಸ್ತಾವನೆ:

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಬೆಲ್ದಾಳ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ರೂ. 70.00 ಲಕ್ಷದ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಸಣ್ಣ ನೀರಾವರಿ ವಿಭಾಗ ಬೀದರ್‌ನಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	08-11-2010
ವಿಜಯ ಕರ್ನಾಟಕ ದಿನಪತ್ರಿಕೆ	13-11-2010

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬ ಗುತ್ತಿಗೆದಾರರು ಭಾಗವಹಿಸಿದ್ದು, ಅವರು ಅರ್ಹತೆ ಹೊಂದಿರುತ್ತಾರೆ. ಅವರ ಟೆಂಡರ್ ತೆರೆದು ಪರಿಶೀಲಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ		ರೂ. 69,22,261/–	
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ		ರೂ. 96,08,525/–	
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಗುರುನಾಥ ಕೊಳ್ಳೂರ ಒಂದನೇ ದರ್ಜೆ ಗುತ್ತಿಗೆದಾರರು	1,01,13,535/–	46.09 ಹೆಚ್ಚು	5.255 ಹೆಚ್ಚು

ಮೇಲ್ಕಂಡಂತೆ ಶ್ರೀ ಗುರುನಾಥ ಕೊಳ್ಳೂರ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 5.255ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 96,08,525/–ಗಳ ಮೇಲೆ ಶೇ.5.255ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,01,13,535/–ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 45 ಅಪಿಬಂ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 13-07-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಬೆಲ್ದಾಳ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 96,08,525/–ಗಳ ಮೇಲೆ ಶೇ. 5.255ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,01,13,535/–ಗಳಿಗೆ (ಒಂದು ಕೋಟಿ ಒಂದು ಲಕ್ಷ ಹದಿಮೂರು ಸಾವಿರದ ಐದು ನೂರ ಮೂವತ್ತೈದು ರೂಪಾಯಿಗಳು ಮಾತ್ರ) ಶ್ರೀ ಗುರುನಾಥ ಕೊಳ್ಳೂರ, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1) ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

2) ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿಆರ್.ನಂ. 1798

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಹಾಗೂ ತಾಲ್ಲೂಕಿನ ಮಹಾಗಾಂವ ವಾಡಿ ಗ್ರಾಮದ ಹತ್ತಿರ ಬೆಣ್ಣೆತೋರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ : 1. ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ:ಮುಇಂ/ಸನೀ(ಉ)ವಲಯ/ಬಿಜೆಪಿ/ಪಿಬಿ-14/2011-12/3478 ದಿನಾಂಕ: 29-06-2011.

2. ಸರ್ಕಾರದ ಆದೇಶ ಸಂಖ್ಯೆ: ಸನೀಇ 236 ಮಸಾವಿ 2009(6) ದಿನಾಂಕ: 06-07-2010.

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆಯ ಹಾಗೂ ತಾಲ್ಲೂಕಿನ ಮಹಾಗಾಂವ ವಾಡಿ ಗ್ರಾಮದ ಹತ್ತಿರ ಬೆಣ್ಣೆತೋರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜಿಗೆ ಉಲ್ಲೇಖ (2) ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ಈ ಕಾಮಗಾರಿಯ ರೂ. 470.00 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿ ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	18-04-2011
ಜಿಲ್ಲಾ ಟೆಂಡರ್ ಬುಲೆಟಿನ್	15-04-2011
ಕರ್ನಾಟಕ ರಾಜ್ಯಪತ್ರ	14-04-2011
ಪ್ರಜಾವಾಣಿ ದಿನಪತ್ರಿಕೆ	21-04-2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಎಂಟು ಜನ ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಮೂರು ಜನ ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ: 27-05-2011ರಂದು ತೆರೆದು ಪರಿಶೀಲಿಸಲಾಗಿದ್ದು ವಿವರುಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 4,07,51,745/-
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 3,93,43,162/-

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ರವಿಶಂಕರ ಆರ್ ಅಂದ್ರಾಳ ಒಂದನೇ ದರ್ಜೆ ಗುತ್ತಿಗೆದಾರರು	3,51,65,158/-	13.71 ಕಡಿಮೆ	10.619 ಕಡಿಮೆ
2	ಧನರಾಜ ಎಸ್ ತಾಳಂಪಳ್ಳಿ ಒಂದನೇ ದರ್ಜೆ ಗುತ್ತಿಗೆದಾರರು	4,48,25,393/-	10.00 ಹೆಚ್ಚು	13.93 ಹೆಚ್ಚು
3	ಜಿ. ಮಸ್ತಾನಯ್ಯ ಒಂದನೇ ದರ್ಜೆ ಗುತ್ತಿಗೆದಾರರು	3,83,18,133/-	5.97 ಕಡಿಮೆ	2.605 ಕಡಿಮೆ

ಮೇಲ್ಕಂಡಂತೆ ಶ್ರೀ ರವಿಶಂಕರ ಆರ್. ಅಂದ್ರಾಳ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 10.619 ರಷ್ಟು ಕಡಿಮೆ ಇದ್ದು, ಸದರಿಯವರ ಟೆಂಡರನ್ನು ಅಂಗೀಕರಿಸುವಂತೆ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಈ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 3,93,43,162/-ಗಳ ಮೇಲೆ ಶೇಕಡ 10.619 ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 3,51,65,158/-ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 53 ಅಪಿಬಂ 2011, (ತಾಂತ್ರಿಕ) ಬೆಂಗಳೂರು, ದಿನಾಂಕ: 13ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಹಾಗೂ ತಾಲ್ಲೂಕಿನ ಮಹಾಗಾಂವ ವಾಡಿ ಗ್ರಾಮದ ಹತ್ತಿರ ಬೆಣ್ಣೆತೋರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ

ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 3,93,43,162/-ಗಳ ಮೇಲೆ 10.619 ರಷ್ಟು ಕಡಿಮೆ ದರದಲ್ಲಿ ಅಂದರೆ ರೂ. 3,51,65,158/-ಗಳಿಗೆ (ರೂ. ಮೂರು ಕೋಟಿ ಐವತ್ತೊಂದು ಲಕ್ಷ ಅರವತ್ತೈದು ಸಾವಿರದ ಒಂದು ನೂರ ಐವತ್ತೆಂಟು ಮಾತ್ರ) ಶ್ರೀ ರವಿಶಂಕರ ಆರ್ ಅಂದ್ರಾಳ, ಒಂದನೇ ದರ್ಜೆ ಗುತ್ತಿಗೆದಾರರು ರವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20-01-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿಆರ್.ನಂ. 1799

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಸ್.ಹೆಚ್. ವಿಶ್ವನಾಥ್, ನಿವೃತ್ತ ಪಿಎಸ್.ಐ ರವರಿಗೆ ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1. ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ರಾಜ್ಯ ಗುಪ್ತ ವಾರ್ತೆ ರವರ ಪತ್ರ ಸಂಖ್ಯೆ: ಎಸ್‌ಬಿಎ/ಸಿಬ್ಬಂದಿ-6/ಪ್ರಭಾರ-161/2006-07 ದಿನಾಂಕ: 02-06-2009.

2. ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ: ಸಿಬಿ(2)/40/2009-10 ದಿನಾಂಕ: 24-06-2009, 03- 02-2011 ಮತ್ತು 06-06-2011.

ಪ್ರಸ್ತಾವನೆ:

ಶ್ರೀ ಎಸ್.ಹೆಚ್. ವಿಶ್ವನಾಥ್, ಪಿ.ಎಸ್.ಐ ರಾಜ್ಯ ಗುಪ್ತ ವಾರ್ತೆ, ಮಧುಗಿರಿ ರವರು ಪೊಲೀಸ್ ಇನ್ಸ್‌ಪೆಕ್ಟರ್, ಗುಪ್ತ ವಾರ್ತೆ, ಮಧುಗಿರಿ ರವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ ಅಧಿಕ ಪ್ರಭಾರ ವಹಿಸಿ, ಹೆಚ್ಚಿನ ಹೊಣೆಗಾರಿಕೆಯಿಂದ ಕರ್ತವ್ಯ ನಿರ್ವಹಿಸಿರುವುದರಿಂದ ದಿನಾಂಕ: 03-02-2006 ರಿಂದ 12-02-2008ರ ವರೆಗೆ ಕೆ.ಸಿ.ಎಸ್.ಆರ್. ನಿಯಮ 68ರ ಅನ್ವಯ ಪ್ರಭಾರ ಭತ್ಯೆಯನ್ನು ಮೇಲೆ ಓದಲಾದ (1)ರ ಪತ್ರದಲ್ಲಿ ಐಜಿಪಿ ರಾಗುವಾ ರವರು ಮಂಜೂರು ಮಾಡಿರುತ್ತಾರೆ. ತದನಂತರ ದಿನಾಂಕ: 02-05-2005 ರಿಂದ 30-06-2005 ರವರೆಗೆ ವೇತನ ಶ್ರೇಣಿ ರೂ. 5575-10620/-ರ ಕನಿಷ್ಠ ವೇತನದ ಶೇ.5 ರಷ್ಟು ಹಾಗೂ ದಿನಾಂಕ: 01-07-2005 ರಿಂದ 18-03-2007 ರವರೆಗೆ ಪರಿಷ್ಕೃತ ವೇತನ ಶ್ರೇಣಿ ರೂ. 10,800-20,025/- ರ ಕನಿಷ್ಠ ವೇತನದ ಶೇ.5 ರಷ್ಟು ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವಂತೆ ಮೇಲೆ ಓದಲಾದ (2)ರ ಡಿಜಿ ಮತ್ತು ಐಜಿಪಿ ರವರ ಪತ್ರದಲ್ಲಿ ಕೋರಲಾಗಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 239 ಪೊಸಇ 2009 ಬೆಂಗಳೂರು, ದಿನಾಂಕ: 15-07-2011

ಪ್ರಸ್ತಾವನೆಯನ್ನು ಪರಿಶೀಲಿಸಿ ಶ್ರೀ ಎಸ್.ಹೆಚ್. ವಿಶ್ವನಾಥ್ ನಿವೃತ್ತ ಪಿಎಸ್ಐ ಇವರು ರಾಜ್ಯಗುಪ್ತ ವಾರ್ತೆ, ಮಧುಗಿರಿ ಘಟಕದ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಯಲ್ಲಿ ದಿನಾಂಕ: 02-05-2005 ರಿಂದ 18-03-2007 ರವರೆಗೆ ಹೆಚ್ಚುವರಿ ಕರ್ತವ್ಯ ನಿರ್ವಹಿಸಿದ ಸಂಬಂಧದಲ್ಲಿ ದಿನಾಂಕ: 02-05-2005 ರಿಂದ 30-06-2005 ರವರೆಗೆ ವೇತನ ಶ್ರೇಣಿ ರೂ. 5575-10620ರ ಕನಿಷ್ಠ ಮೂಲ ವೇತನದ ಶೇಕಡ 5 ರಷ್ಟು (ರೂ. 1000/-ಗಳ ಮಿತಿಗೊಳಪಟ್ಟು) ಹಾಗೂ ದಿನಾಂಕ: 01-07-2005 ರಿಂದ 18-03-2007 ರ ವರೆಗೆ ಪರಿಷ್ಕೃತ ವೇತನ ಶ್ರೇಣಿ ರೂ. 10800-20025ರ ಕನಿಷ್ಠ ಮೂಲ ವೇತನದ ಶೇಕಡ 5 ರಷ್ಟು (1000 ರೂ.ಗಳ ಮಿತಿಗೊಳಪಟ್ಟು) ಪ್ರಭಾರ ಭತ್ಯೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ 68 ರನ್ವಯ ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿಆರ್.ನಂ. 1800

ಒಳಾಡಳಿತ ಸಚಿವಾಲಯ

ವಿಷಯ : ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಅಧಿಕಾರಿ/ನೌಕರರ ವರ್ಗಾವಣೆಗಳ ಬಗ್ಗೆ ಮಾರ್ಗಸೂಚಿಗಳು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009 ದಿನಾಂಕ: 24-08-2009.
2. ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009 (ಭಾಗ-2) ದಿನಾಂಕ: 13-01-2011.
3. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 4 ಎಸ್‌ಟಿಆರ್ 2001 ದಿನಾಂಕ: 22-11-2001.
4. ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009 (ಭಾಗ-2) ದಿನಾಂಕ: 21-05-2011.
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 12 ಸೇನೌವ 2011 ದಿನಾಂಕ: 31-05-2011.
6. ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009 (ಭಾಗ-2) ದಿನಾಂಕ: 30-06-2011.

ಪ್ರಸ್ತಾವನೆ:

ಮೇಲೆ (4) ರಲ್ಲಿ ಓದಲಾದ ದಿನಾಂಕ: 21-05-2011ರ ಸರ್ಕಾರಿ ಆದೇಶದಲ್ಲಿ ಪೊಲೀಸ್ ಅಧಿಕಾರಿ ಮತ್ತು ಪೊಲೀಸ್ ಸಿಬ್ಬಂದಿಗಳ ವರ್ಗಾವಣೆ ಕುರಿತಂತೆ ವಿಸ್ತೃತವಾದ ಮಾರ್ಗ ಸೂಚಿಗಳನ್ನು ನೀಡಲಾಗಿದ್ದು, 2011-12ನೇ ಸಾಲಿನ ಪೊಲೀಸ್ ಸಿಬ್ಬಂದಿಗಳ (ಲಿಪಿಕ ನೌಕರರನ್ನು

ಹೊರತುಪಡಿಸಿ) ಸಾಮಾನ್ಯ ವರ್ಗಾವಣೆಯನ್ನು ಜೂನ್ 15, 2011 ರೊಳಗಾಗಿ ಜಾರಿಗೊಳಿಸತಕ್ಕದ್ದು ಎಂದು ಆದೇಶಿಸಲಾಗಿತ್ತು. ಉಲ್ಲೇಖ(5)ರ ಆದೇಶದಲ್ಲಿ ಸಿಆಸು ಇಲಾಖೆಯು ಸರ್ಕಾರಿ ನೌಕರರ ವರ್ಗಾವಣೆಗಳನ್ನು ದಿನಾಂಕ: 30-06-2011ರ ವರೆಗೆ ಮಾಡಬಹುದು ಎಂದು ಆದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯಲ್ಲಿನ ಪೊಲೀಸ್ ಅಧಿಕಾರಿ/ನೌಕರರ ವರ್ಗಾವಣೆ ಅವಧಿಯನ್ನು ವಿಸ್ತರಿಸುವುದು ಅವಶ್ಯವೆಂದು ಸರ್ಕಾರವು ಪರಿಗಣಿಸಿ ಸರ್ಕಾರವು ಮೇಲೆ ಓದಲಾದ (6)ರ ಆದೇಶದಲ್ಲಿ ದಿನಾಂಕ: 30-06-2011 ರವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಆಡಳಿತಾತ್ಮಕ ಕಾರಣಗಳಿಂದ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ, ಈ ಅವಧಿಯನ್ನು ವಿಸ್ತರಿಸುವುದು ಅಗತ್ಯವೆಂದು ಮನಗಂಡು ಪೊಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಪಿಎಸ್ಐ, ಸಿಪಿಐ ಮತ್ತು ಡಿವೈಎಸ್‌ಪಿ ವೃಂದದ ಅಧಿಕಾರಿಗಳ ವರ್ಗಾವಣೆ ಪ್ರಕ್ರಿಯೆಯನ್ನು ಮಾತ್ರ ಜುಲೈ 31, 2011 ರವರೆಗೆ ವಿಸ್ತರಿಸಲು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 60 ಪೊಸಇ 2009 (ಭಾಗ-2) ಬೆಂಗಳೂರು, ದಿನಾಂಕ: 15-07-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಮೇಲೆ ಓದಲಾದ (4) ರಲ್ಲಿನ ದಿನಾಂಕ: 21-05-2011ರ ಸರ್ಕಾರದ ಆದೇಶದಲ್ಲಿ ನಮೂದಿಸಿದ ಷರತ್ತುಗಳೊಂದಿಗೆ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್, ಪೊಲೀಸ್ ಇನ್‌ಸ್ಪೆಕ್ಟರ್ ಪೊಲೀಸ್ ಉಪಾಧೀಕ್ಷಕರ ವೃಂದದ ವರೆಗಿನ ಅಧಿಕಾರಿಗಳ ವರ್ಗಾವಣೆಗಳನ್ನು ದಿನಾಂಕ: 31-07-2011ರ ವರೆಗೆ ವಿಸ್ತರಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿಆರ್.ನಂ. 1801

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ: ಮೆ: ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಲಿ., ಬಿಡದಿ, ರಾಮನಗರ ಜಿಲ್ಲೆ, ಇವರ ಚಿಕ್ಕ ಕಾರು ಘಟಕಕ್ಕೆ dies, patterns, tools and accessories for machinery ಒಳಗೊಂಡು ಯಂತ್ರಸ್ಥಾವರಗಳು ಮತ್ತು ಉಪಕರಣಗಳ ಮೇಲೆ ಪ್ರವೇಶ ತೆರಿಗೆ ವಿನಾಯಿತಿ ನೀಡುವ ಬಗ್ಗೆ.

ಓದಲಾಗಿದೆ: 1.ಸರ್ಕಾರಿ ಆದೇಶ ಸಂಖ್ಯೆ: ಸಿಐ 432 ಎಸ್‌ಪಿಐ 2005, ದಿನಾಂಕ: 12.06.2009.
2. ಮೆ: ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಲಿ., ರವರ ಪತ್ರ ಸಂಖ್ಯೆ: TKM/TXN/EFC/C&I/002/10-12, dated: 25.08.2010.

ಪ್ರಸ್ತಾವನೆ:

ಮೆ: ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಲಿ. (ಟಿಕೆಎಂಎಲ್) ಸಂಸ್ಥೆಯು ರಾಮನಗರ ಜಿಲ್ಲೆಯ ಬಿಡದಿಯಲ್ಲಿ ಪ್ರಯಾಣಿಕರ ವಾಹನಗಳಾದ ಕ್ವಾಲೀಸ್, ಇನ್ನೋವಾ, ಕರೋಲಾ, ಆಲ್ಟೀಸ್ ಮುಂತಾದ ಕಾರುಗಳನ್ನು ಉತ್ಪಾದನೆ ಮಾಡಲು ಒಟ್ಟು ರೂ. 2110.80 ಲಕ್ಷಗಳ ಬಂಡವಾಳ ಹೂಡಿಕೆಯೊಂದಿಗೆ ಹಾಗೂ 2500 ಜನರಿಗೆ ಉದ್ಯೋಗ ನೀಡಿಕೆಯೊಂದಿಗೆ ಘಟಕವನ್ನು ಸ್ಥಾಪಿಸಿರುತ್ತದೆ.

ಸದರಿ ಘಟಕಕ್ಕೆ ಸರ್ಕಾರದ ವತಿಯಿಂದ ಕೈಗಾರಿಕಾ ನೀತಿ 2009-14 ರನ್ವಯ ಲಭ್ಯವಿರುವ ಹಲವಾರು ರಿಯಾಯಿತಿ ಮತ್ತು ಉತ್ತೇಜನಗಳನ್ನು ಮಂಜೂರು ಮಾಡಲಾಗಿದೆ.

ಸದರಿ ಘಟಕವು ವಿಸ್ತರಣಾ ಯೋಜನೆಯಡಿಯಲ್ಲಿ ಚಿಕ್ಕ ಕಾರುಗಳನ್ನು ಉತ್ಪಾದನೆ ಮಾಡಲು 7 ವರ್ಷಗಳಲ್ಲಿ ಅಂದರೆ 2009-16 ರವರೆಗೆ ರೂ. 4,043 ಕೋಟಿಗಳಷ್ಟು ಬಂಡವಾಳ ಹೂಡಿಕೆ ಮಾಡಲಿದೆ. ಇದರಿಂದಾಗಿ 2300 ಜನರಿಗೆ ನೇರ ಮತ್ತು 3000 ಜನರಿಗೆ ಪರೋಕ್ಷವಾಗಿ ಉದ್ಯೋಗ ದೊರಕಲಿದೆ. ಈ ಹಿನ್ನೆಲೆಯಲ್ಲಿ ಮೆ: ಟಿಕೆಎಂಎಲ್ ರವರು ಸರ್ಕಾರಕ್ಕೆ ಮನವಿಯನ್ನು ನೀಡಿ 2009-10 ರಿಂದ 2013-14 ರವರೆಗೆ ಯಂತ್ರಸ್ಥಾವರಗಳು ಮತ್ತು ಉಪಕರಣಗಳ (Plant & Machinery) ಮೇಲೆ ಪ್ರವೇಶ ತೆರಿಗೆ ಹಾಗೂ ಗುತ್ತಿಗೆ ಕೆಲಸಗಳ ತೆರಿಗೆ ವಿನಾಯಿತಿ ಕೋರಿರುತ್ತಾರೆ. ಅದರಂತೆ ಮೆ: ಟಿಕೆಎಂಎಲ್ ಘಟಕದ ವಿಸ್ತರಣಾ ಯೋಜನೆಗೆ 2009-10 ರಿಂದ 2011-12 ರವರೆಗೆ 3 ವರ್ಷಗಳವರೆಗೆ ಕೆಳಕಂಡ ವಿನಾಯಿತಿಯನ್ನು ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ನೀಡಲಾಗಿದೆ.

"Entry Tax exemption on Plant & Machinery and Works Contract Tax for a period of 3 years i.e. for 01.06.2009 to 31.05.2012 for their expansion project.

ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್‌ಡಿ 104 ಸಿಎಸ್‌ಎಲ್ 1997 (7) ದಿನಾಂಕ: 12.06.1998 ರಲ್ಲಿ ನೀಡಿದ ಪ್ರವೇಶ ತೆರಿಗೆ ವಿನಾಯಿತಿಯನ್ನು dies, patterns, tools, accessories for machinery ಒಳಗೊಂಡು ಯಂತ್ರಸ್ಥಾವರಗಳು ಮತ್ತು ಉಪಕರಣಗಳ ಮೇಲೆ ನೀಡಲಾಗಿತ್ತು. ಈಗ ಕೇವಲ ಯಂತ್ರಸ್ಥಾವರಗಳು ಮತ್ತು ಉಪಕರಣಗಳ ಮೇಲೆ ಪ್ರವೇಶ ತೆರಿಗೆ ವಿನಾಯಿತಿಯನ್ನು ನೀಡಲಾಗಿದೆ. ಆದ್ದರಿಂದ dies, patterns, tools, accessories for machinery ಮೇಲೆ ಸಹಿತ ಪ್ರವೇಶ ತೆರಿಗೆ ವಿನಾಯಿತಿ ನೀಡಬೇಕೆಂದು ಮೆ: ಟಿಕೆಎಂಎಲ್ ಅವರು ಮೇಲೆ (2) ರಲ್ಲಿ ಓದಲಾದ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಯ ಬಗ್ಗೆ ದಿನಾಂಕ: 20.06.2011ರ ಸಚಿವ ಸಂಪುಟ ಸಭೆಯಲ್ಲಿ ವಿಷಯ 284/2011 ಪ್ರಕಾರ ಚರ್ಚಿಸಲಾಗಿದೆ.

ಪ್ರಸ್ತಾವನೆಯನ್ನು ಸರ್ಕಾರವು ಸಮಗ್ರವಾಗಿ ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 440 ಎಸ್‌ಪಿಐ 2010, ಬೆಂಗಳೂರು, ದಿನಾಂಕ: 12/07/2011

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ , ಮೆ: ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಲಿ., ರವರು ರಾಮನಗರ ಜಿಲ್ಲೆ, ಬಿಡದಿಯಲ್ಲಿ ಸ್ಥಾಪಿಸುತ್ತಿರುವ ರೂ. 4,043 ಕೋಟಿ ಬಂಡವಾಳ ಹೂಡಿಕೆಯ ಚಿಕ್ಕ ಕಾರು ಉತ್ಪಾದನಾ ಘಟಕ ಸ್ಥಾಪನೆಗೆ dies, patterns, tools

accessories for machinery ಒಳಗೊಂಡು ಯಂತ್ರಸ್ಥಾವರಗಳು ಮತ್ತು ಉಪಕರಣಗಳ ಮೇಲೆ ಪ್ರವೇಶ ತೆರಿಗೆ ವಿನಾಯಿತಿಯನ್ನು ನೀಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 197 ಸಿಎಸ್‌ಎಲ್ 2010, ದಿನಾಂಕ: 16.11.2010 ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ವಿ. ಶ್ರೀನಿವಾಸ ದೀಕ್ಷಿತ್
ಪೀಠಾಧಿಕಾರಿ (ತಾಂತ್ರಿಕ ಕೋಶ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್ 1802

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ದಿ: ಮೋಹನ್ ಕುಮಾರ್ ಸಾಸನೂರು, ಕೆ.ಎ.ಎಸ್ ಅಧಿಕಾರಿ ಇವರ ಅಮಾನತ್ತಿನ ಅವಧಿಯನ್ನು ಸಕ್ರಮಗೊಳಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 70 ಕೆಇವಿ 08 ದಿನಾಂಕ: 28-10-2008
2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 70 ಕೆಇವಿ 08 ದಿನಾಂಕ: 01-07-2009
3) ಶ್ರೀಮತಿ ಶಶಿಕಲಾ ಎಂ. ಸಾಸನೂರು ಇವರ ಮನವಿ ದಿ: 06-05-2011

ಪ್ರಸ್ತಾವನೆ:

ಶ್ರೀ. ದಿ: ಮೋಹನ್ ಕುಮಾರ್ ಸಾಸನೂರು ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ ಇವರು ಈ ಹಿಂದೆ ಉಪ ವಿಭಾಗಾಧಿಕಾರಿಗಳು ಹಾಗೂ ಅಧ್ಯಕ್ಷರು ಭೂ ನ್ಯಾಯ ಮಂಡಳಿ ಧಾರವಾಡ ಇಲ್ಲಿ ಕಾರ್ಯನಿರ್ವಹಿಸಿದ್ದ ಅವಧಿಯಲ್ಲಿ ಇವರು 3992 ಎಕರೆ ಜಮೀನನ್ನು ಕೃಷಿಗೆ ಯೋಗ್ಯವಲ್ಲವೆಂದು ಆದೇಶ ಹೊರಡಿಸಿ ಕರ್ತವ್ಯದಲ್ಲಿ ನಿರ್ಲಕ್ಷ್ಯತನ ಹಾಗೂ ದುರ್ನಡತೆಯನ್ನು ಎಸಗಿರುವ ಕಾರಣ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಇವರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳುವಂತೆ ಕಂದಾಯ ಇಲಾಖೆಯು ಕೋರಿತ್ತು. ಅದರಂತೆ ಮೇಲೆ ಓದಲಾದ ಕ್ರಮ ಸಂ: (1) ರ ಆದೇಶದಲ್ಲಿ ಶಿಸ್ತು ಕ್ರಮ/ ಇಲಾಖಾ ವಿಚಾರಣೆ ಬಾಕಿ ಇಟ್ಟು ಸದರಿಯವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ನಂತರ ಮೇಲೆ ಓದಲಾದ ಕ್ರಮ ಸಂ: (2)ರ ಆದೇಶದಲ್ಲಿ ಶಿಸ್ತು ಕ್ರಮ/ ಇಲಾಖಾ ವಿಚಾರಣೆ ಬಾಕಿ ಇಟ್ಟು ಸದರಿಯವರ ಅಮಾನತ್ತಿನ ಆದೇಶವನ್ನು ರದ್ದುಗೊಳಿಸಿ ಸೇವೆಗೆ ತೆಗೆದುಕೊಳ್ಳಲಾಗಿತ್ತು. ಮುಂದುವರೆದು ಶ್ರೀ ಮೋಹನ್‌ಕುಮಾರ್ ಸಾಸನೂರು ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಪ್ರಸ್ತಾವನೆಯನ್ನು ಕಳುಹಿಸುವಂತೆ ಕಂದಾಯ ಇಲಾಖೆಯನ್ನು ಕೋರಲಾಗಿತ್ತು. ಈ ಮಧ್ಯೆ ಶ್ರೀ ಮೋಹನ್‌ಕುಮಾರ್ ಸಾಸನೂರು ಇವರು ಕರ್ತವ್ಯದಲ್ಲಿದ್ದಾಗಲೇ ದಿ: 29-12-2010 ರಂದು ನಿಧನ ಹೊಂದಿರುತ್ತಾರೆ. ಹಾಗೂ ಇವರ ವಿರುದ್ಧ ಇದುವರೆಗೂ ಯಾವುದೇ ಇಲಾಖಾ ವಿಚಾರಣೆ ಪ್ರಾರಂಭವಾಗಿರುವುದಿಲ್ಲ. ಮೇಲೆ ಓದಲಾದ ಕ್ರಮ ಸಂ: (3) ರಲ್ಲಿ ದಿ. ಶ್ರೀ ಮೋಹನ್‌ಕುಮಾರ್ ಸಾಸನೂರು ರವರ ಪತ್ನಿ ಶ್ರೀಮತಿ ಶಶಿಕಲಾ ಎಂ. ಸಾಸನೂರು ಇವರು ಸರ್ಕಾರಕ್ಕೆ ಮನವಿ ಸಲ್ಲಿಸಿ ದಿ. ಮೋಹನ್ ಕುಮಾರ್ ಸಾಸನೂರು ರವರು ಎಸಗಿದ್ದಾರೆನ್ನಲಾದ ದುರ್ನಡತೆಯ ಕುರಿತು ಇದುವರೆವಿಗೂ ಯಾವುದೇ ತೀರ್ಮಾನವಾಗದ ಕಾರಣ ಅವರ ವಿರುದ್ಧ ಹೂಡಲು ಉದ್ದೇಶಿಸಿರುವ ಕ್ರಮಗಳನ್ನು ಕೈ ಬಿಡುವಂತೆ ಹಾಗೂ ಅವರ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಮೇಲಿನ ಅವಧಿಯೆಂದು ಪರಿಗಣಿಸಿ ತಮಗೆ ಪಿಂಚಣಿ ಸೌಲಭ್ಯಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಸದರಿ ಮನವಿಯನ್ನು ಪರಿಶೀಲಿಸಲಾಗಿ ಶ್ರೀ ದಿ: ಮೋಹನ್ ಕುಮಾರ್ ಸಾಸನೂರು ರವರು ದಿ: 29-12-10 ರಂದು ನಿಧನ ಹೊಂದಿದ್ದು ಇವರ ವಿರುದ್ಧ ಈವರೆವಿಗೆ ಯಾವುದೇ ಇಲಾಖಾ ವಿಚಾರಣೆ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದಿಲ್ಲ. ಸದರಿ ಅಧಿಕಾರಿಯು ಧಾರವಾಡ ತಾಲ್ಲೂಕಿನ ಭೂ ನ್ಯಾಯಮಂಡಳಿಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 3992 ಎಕರೆ ಜಮೀನನ್ನು ಕೃಷಿಗೆ ಯೋಗ್ಯವಲ್ಲವೆಂದು ಹೊರಡಿಸಿದ ಆದೇಶವನ್ನು ಕರ್ನಾಟಕ ಭೂಸುಧಾರಣೆ ಕಾಯ್ದೆ 122-ಎ ರನ್ವಯ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಭೂ ನ್ಯಾಯಮಂಡಳಿಯ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಕಂದಾಯ ಇಲಾಖೆಯಿಂದ ಅನುಮತಿ ನೀಡಲಾಗಿರುವುದರಿಂದ ಸದರಿ ಅಧಿಕಾರಿಯಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿದೆಯೆಂಬ ನಿರ್ಣಯಕ್ಕೆ ಬರಲು ಸಾಧ್ಯವಾಗದು. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 70 ಕೆಇವಿ 2008, ಬೆಂಗಳೂರು, ದಿನಾಂಕ: 15ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ದಿ: ಶ್ರೀ ಮೋಹನ್ ಕುಮಾರ್ ಸಾಸನೂರು ಕೆ.ಎ.ಎಸ್ (ಹಿ.ಶ್ರೇ) ಅಧಿಕಾರಿ ಇವರ ವಿರುದ್ಧ ಹೂಡಲು ಉದ್ದೇಶಿಸಲಾಗಿರುವ ಇಲಾಖಾ ವಿಚಾರಣೆಯನ್ನು ಕೈ ಬಿಡಲಾಗಿದೆ. ಇವರು ಅಮಾನತ್ತಿನಲ್ಲಿ ಕಳೆದ ಅವಧಿ ಅಂದರೆ ದಿ: 28-10-08 ರಿಂದ ದಿ: 01-07-09ನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 1957 ರ ನಿಯಮ 100(3)ರ ಪ್ರಕಾರ ಕರ್ತವ್ಯದ ಮೇಲೆ ಕಳೆದ ಅವಧಿಯೆಂದು ಪರಿಗಣಿಸಿ ಆದೇಶಿಸಲಾಗಿದೆ.

ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಅವರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ ವಾಸುದೇವಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಸೇವೆಗಳು-2)

ಪಿ.ಆರ್.ನಂ. 1803

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕಿನ ಹುಣಸಿಕಟ್ಟಿ ಸಣ್ಣ ನೀರಾವರಿ ಇಂಗುಕೆರೆ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಾಗಿ ಮುಂಗಡ ಹಣ ಠೇವಣಿ ಮಾಡುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ದಿನಾಂಕ 05/02/2010ರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಭೂಸ್ವಾ/2009-10/794.

ಪ್ರಸ್ತಾವನೆ:

ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕಿನ ಹುಣಸಿಕಟ್ಟಿ ಸಣ್ಣ ನೀರಾವರಿ ಇಂಗುಕೆರೆ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ ಅವಾರ್ಡ್ ಪೂರ್ವ ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ರೂ.11,42,147/-ಗಳ ಅನುದಾನ ಬಿಡುಗಡೆ ಮಾಡಲು ಮೇಲೆ ಓದಲಾದ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 05/02/10ರ ಪತ್ರದಲ್ಲಿ ಕೋರಿದ್ದಾರೆ.

ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ: ಕಂಇ 42 ಭೂಸ್ವಾಹಾ 2000, ದಿನಾಂಕ 08/10/2001ರಲ್ಲಿ ಸೂಚಿಸಿರುವಂತೆ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಸಂಭವನೀಯ ವೆಚ್ಚದ ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಬೇಕಾಗಿದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 52 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 15ನೇ ಜುಲೈ 2011.

ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕಿನ ಹುಣಸಿಕಟ್ಟಿ ಸಣ್ಣ ನೀರಾವರಿ ಇಂಗುಕೆರೆ ನಿರ್ಮಾಣಕ್ಕಾಗಿ ಅಗತ್ಯವಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ನಡೆಸಲು ಸಂಭವನೀಯ ಮೊತ್ತ ರೂ.11,42,147-00ಗಳ (ಹನ್ನೊಂದು ಲಕ್ಷದ ನಲವತ್ತೆರಡು ಸಾವಿರದ ನೂರ ನಲವತ್ತೇಳು ರೂ.ಗಳು ಮಾತ್ರ) ಮುಂಗಡ ಹಣವನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 11,42,147-00ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ: 20/10/2010ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ.ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ ಸಣ್ಣ ನೀರಾವರಿ

ಪಿ.ಆರ್.ನಂ. 1804

ಶಿಕ್ಷಣ ಸಚಿವಾಲಯ

ವಿಷಯ: 5 ಮತ್ತು 6ನೇ ಸೆಮಿಸ್ಟರ್ ಡಿಪ್ಲೊಮಾ ಕೋರ್ಸುಗಳಿಗೆ ಪರಿಷ್ಕೃತ ಪಠ್ಯ ಕ್ರಮಗಳನ್ನು 2011-12ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಇಡಿ 178 ಟಿಪಿಇ 2009, ದಿನಾಂಕ:1-8-2009.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 227 ಟಿಪಿಇ 2010 ದಿನಾಂಕ: 12-8-2010.
3. ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಡಿಟಿಇ 72 ಸಿಡಿಸಿ(1) 2010-11/120 ದಿನಾಂಕ: 11/12-7-2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ರಾಜ್ಯದ ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೊಮಾ ಕೋರ್ಸುಗಳ 1ನೇ ಮತ್ತು 2ನೇ ಸೆಮಿಸ್ಟರ್‌ಗಳಿಗೆ ಪರಿಷ್ಕೃತ ಪಠ್ಯಕ್ರಮಗಳನ್ನು 2009-10ನೇ ಶೈಕ್ಷಣಿಕ ವರ್ಷದಿಂದ ಅಳವಡಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಡಿಪ್ಲೊಮಾ ಕೋರ್ಸುಗಳ ಮೂರು ಮತ್ತು ನಾಲ್ಕನೇ ಸೆಮಿಸ್ಟರ್ ಪಠ್ಯಕ್ರಮಗಳನ್ನು 2010-11ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ತಾಂತ್ರಿಕ ಶಿಕ್ಷಣ ನಿರ್ದೇಶಕರು ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಪತ್ರದಲ್ಲಿ ರಾಜ್ಯದ ಪಾಲಿಟೆಕ್ನಿಕ್‌ಗಳ ಡಿಪ್ಲೊಮಾ ಕೋರ್ಸುಗಳ 5 ಮತ್ತು 6ನೇ ಸೆಮಿಸ್ಟರ್‌ಗಳಿಗೆ ಪರಿಷ್ಕೃತ ಪಠ್ಯಕ್ರಮಗಳನ್ನು 2011-12ನೇ ಸಾಲಿನಿಂದ ಜಾರಿಗೆ ಬರುವಂತೆ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ವಿವಿಧ ಪಾಲಿಟೆಕ್ನಿಕ್‌ಗಳ ವಿಷಯ ಪರಿಣಿತರು ಎನ್.ಐ.ಟಿ.ಟಿ.ಆರ್, ಚೆನ್ನೈ ಸಂಸ್ಥೆ, ಯಶಸ್ವಿ ಉದ್ದಿಮೆದಾರರು ಹಾಗೂ ಬಾಹ್ಯ ವಿಷಯ ಪರಿಣಿತರ ಸಹಯೋಗದಿಂದ ಪರಿಷ್ಕರಿಸಿದ್ದು 2011-12ನೇ ಶೈಕ್ಷಣಿಕ ವರ್ಷದಿಂದ ಪಾಲಿಟೆಕ್ನಿಕ್‌ಗಳಿಗೆ ಅಳವಡಿಸಲು ದಿನಾಂಕ: 11-7-2011 ರಂದು ನಡೆದ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ 150ನೇ ಕೇಂದ್ರ ಪರೀಕ್ಷಾ ಮಂಡಳಿಯ ಸಭೆಯಲ್ಲಿ ನಿರ್ಣಯಿಸಲಾಗಿರುವುದರಿಂದ ಪಾಲಿಟೆಕ್ನಿಕ್‌ಗಳ ಡಿಪ್ಲೊಮಾ ಕೋರ್ಸುಗಳ 5 ಹಾಗೂ 6ನೇ ಸೆಮಿಸ್ಟರ್‌ಗಳ ಪರಿಷ್ಕೃತ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಸೂಕ್ತ ಆದೇಶವನ್ನು ಶೀಘ್ರವಾಗಿ ಹೊರಡಿಸಬೇಕೆಂದು ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 167 ಟಿಪಿಇ 2011 ಬೆಂಗಳೂರು, ದಿನಾಂಕ: 15ನೇ ಜುಲೈ 2011

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್ ಡಿಪ್ಲೊಮಾ ಕೋರ್ಸುಗಳ ಐದನೇ ಮತ್ತು ಆರನೇ ಸೆಮಿಸ್ಟರ್‌ನ ಪಠ್ಯಕ್ರಮಗಳು 2011-12ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಪರಿಷ್ಕರಿಸಲ್ಪಟ್ಟಿರುತ್ತವೆ ಹಾಗೂ ಅನ್ವಯವಾಗುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎನ್. ಜಗದೀಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಪಿ.ಆರ್ 1805

ಶಿಕ್ಷಣ ಸಚಿವಾಲಯ

ವಿಷಯ: 2011–12ನೇ ಸಾಲಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿವಿಧ ಹಂತಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಮುಂದುವರೆಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 214 ಯೋಯೋಕ 2010, ದಿನಾಂಕ: 10–08–2010.

2. ನಿರ್ದೇಶಕರು, ಪದವಿಪೂರ್ವ ಶಿಕ್ಷಣರವರ ಪತ್ರ ಸಂಖ್ಯೆ: ಪಪೂಶಿಇ ಸಿಬ್ಬಂದಿ–2 ಹುಮುಂ 02/2011–12, ದಿನಾಂಕ: 01–04–2011.

ಪ್ರಸ್ತಾವನೆ:

1. ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿವಿಧ ಹಂತಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು 2010–11ನೇ ಸಾಲಿನ ಅಂದರೆ ದಿನಾಂಕ: 01–04–2010 ರಿಂದ 31–03–2011 ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಲು ಮಂಜೂರಾತಿ ನೀಡಲಾಗಿತ್ತು.
2. ಮೇಲೆ ಓದಲಾದ (2)ರ ಪತ್ರದಲ್ಲಿ, ಜಂಟಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರುರವರು ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿವಿಧ ಹಂತಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು 2011–12ನೇ ಸಾಲಿಗೆ ಅಂದರೆ ದಿನಾಂಕ 01–4–2011ರಿಂದ 31–3–2012ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಲು ಸರ್ಕಾರದ ಆದೇಶವನ್ನು ಹೊರಡಿಸಲು ಕೋರಿದ್ದಾರೆ.
3. ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 94 ಯೋಯೋಕ 2011, ಬೆಂಗಳೂರು, ದಿನಾಂಕ: 07–07–2011.

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿವಿಧ ಹಂತಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವಂತೆ 2011–12ನೇ ಸಾಲಿಗೆ ದಿನಾಂಕ: 01–04–2011ರಿಂದ 31–03–2012ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಲು ಮಂಜೂರಾತಿ ನೀಡಿದೆ. ಇದಕ್ಕೆ ತಗಲುವ ವೆಚ್ಚವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಭರಿಸತಕ್ಕದ್ದು. ಈ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಶಿಇ 389 ಐ.ಎಫ್.ಎಸ್. 2011, ದಿನಾಂಕ: 04–07–2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ (ಯೋಜನೆ).

ಕ್ರ ಸಂ.	ಸರ್ಕಾರದ ಆದೇಶ ಸಂಖ್ಯೆ	ದಿನಾಂಕ	ನಿರ್ದೇಶಕರು	ಜಂಟಿ ನಿರ್ದೇಶಕರು	ಸಿಸ್ಟಂ ಮ್ಯಾನೇಜರ್	ಉಪ ನಿರ್ದೇಶಕರು	ಸಹಾಯಕ ನಿರ್ದೇಶಕರು	ಪ್ರಾಚಾರ್ಯರು	ಉಪನ್ಯಾಸಕರು	ದೈಹಿಕ ಶಿಕ್ಷಕರು	ಶಾಖಾಧಿಕಾರಿ	ಅಧೀಕ್ಷಕರು	ಗ್ರಂಥಪಾಲಕರು	ಪ್ರದಸ	ಶೀಘ್ರಲಿಪಿಗಾರರು	ಹಿ. ಬೆರಳಚ್ಚುಗಾರ	ದ್ವಿದಸ	ಸಿಟಿ	ಬೆರಳಚ್ಚುಗಾರ	ಅಟೆಂಡರ್	ಡಿ. ಗ್ರೂಪ್	ವಾಚ್‌ಮನ್
1.	DPAR 71 SRP 94	27.5.1998	1	1	1	33	6	638	5934	8	6	1	98	48	8	-	38	-	13	11	35	2
2.	ED 214 SHH 96	21.6.1996	--	--	--	--	--	39	234	--	--	--	--	--	--	--	--	--	--	--	--	--
3.	ED 214 SHH 96	29.6.1996	--	--	--	--	--	4	24	--	--	--	--	--	--	--	--	--	--	--	--	--
4.	ED 214 SHH 96	21.8.1986	--	--	--	--	--	10	60	--	--	--	--	--	--	--	--	--	--	--	--	--
5.	ED 214 SHH 96	9.7.1996	--	--	--	--	--	7	42	--	--	--	--	--	--	--	--	--	--	--	--	--
6.	ED 203 TPU 96	11.9.1997	--	--	--	--	--	--	--	--	--	--	--	--	--	2	--	--	--	--	--	--
7.	ED 176 TPU 97	28.5.2001	--	--	--	--	--	--	--	--	--	--	--	17	--	--	15	18	--	11	33	--
8.	ED 327 SOH 95	4.10.2001	--	--	--	--	--	--	--	--	--	--	50	--	--	--	--	--	--	--	--	--
9.	ED 117 YOYOKA 2006	24.6.2006	--	--	--	--	--	--	800	--	--	--	--	--	--	--	--	--	--	--	--	--
10	ED 73SHH 2006	20.6.2006	--	--	--	--	--	13	101	--	--	--	--	10	--	--	2	--	--	--	12	--
11	ED 73 SHH 2006 (PI)	27.6.2006	--	--	--	--	--	5	30	--	--	--	--	2	--	--	3	--	--	--	5	--

12	ED 73 SHH 2006 (P2)	29.6.2006	–	–	–	–	–	112	672	–	–	–	–	75	–	–	37	–	–	–	12	–
13	ED73SHH 2006(P3)	19.9.2006	–	–	–	–	–	01	06	–	–	–	–	1	–	–	–	–	–	–	1	–
14	ED 99 SHH 2006	30.9.2006	–	–	–	–	–	67	416	–	–	–	–	47	–	–	20	–	–	–	67	–
15	ED 197 SHH 2006	23.9.2006	–	–	–	–	–	02	12	–	–	–	–	02	–	–	–	–	–	–	2	–
16	ED 209 SHH 2007	2.4.2004	–	–	–	–	–	1	11	–	–	–	–	–	–	–	1	–	–	–	1	–
17	ED 46 TPU 2007	29.5.2007	–	–	–	–	–	–	338	–	–	–	–	–	–	–	–	–	–	–	–	–
18	ED 97 SHH 2007	25.5.2007	–	–	–	–	–	03	21	–	–	–	–	03	–	–	–	–	–	–	03	–
19	ED 36 SHH 2007	31.5.2007	–	–	–	–	–	07	48	–	–	–	–	05	–	–	02	–	–	–	7	–
20	ED 36 SHH 2007	7.6.2006	–	–	–	–	–	90	624	–	–	–	–	58	–	–	32	–	–	–	90	–
21	ED 210 SHH 2007	16.8.2007	–	–	–	–	–	01	11	–	–	–	–	01	-	–	-	–	–	–	01	–
22	ED 191 SHH 2007	28.8.2007	–	–	–	–	–	190	1330	–	–	–	–	149	–	–	41	–	–	–	190	–
23	ED 191 SHH 2007	25.8.2007	–	–	–	–	–	01	07	–	–	–	–	–	–	–	01	–	–	–	01	–
24	ED 219 WPI 2009	30.07.2010	–	–	–	–	–	–	02	–	–	–	–	–	–	–	–	–	–	–	–	–
25	ED 451 YOYOKA 2009	20.02.2010	–	–	–	–	–	–	2018	–	–	–	–	–	–	–	–	–	–	–	–	–

ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ (ಯೋಜನೆ).

ಪಿ.ಆರ್. 1806

ಇಂಧನ ಸಚಿವಾಲಯ

ವಿಷಯ : ಮೆ: ದೇವರ್ ಪವರ್ ಪ್ರೈವೇಟ್ ಲಿಮಿಟೆಡ್ ಇವರ 3.8 ಮೆಗಾ ವ್ಯಾಟ್ ಸಾಮರ್ಥ್ಯದ ಬಜೆ ಕಿರು ಜಲ ವಿದ್ಯುತ್ ಯೋಜನೆಯ ಕಾಲಾವಕಾಶ ವಿಸ್ತರಣೆ ಬಗ್ಗೆ

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ: ಇಂಇ 87 ಎನ್‌ಸಿಇ 2003 ದಿನಾಂಕ: 2–8–2003.
2. ಸರ್ಕಾರಿ ಆದೇಶ ಸಂಖ್ಯೆ: ಇಎನ್ 87 ಎನ್‌ಸಿಇ 2003 ದಿನಾಂಕ: 10–02–2004.
3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 18 ಎನ್‌ಸಿಇ 2007 ದಿನಾಂಕ: 7–02–2007.
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಬಜೆ/2009/4110, ದಿನಾಂಕ: 11–12–2009.
5. ಸರ್ಕಾರದ ಪತ್ರ ಸಂಖ್ಯೆ: ಇಎನ್ 622 ಎನ್‌ಸಿಇ 2009 ದಿನಾಂಕ: 13–01–2010.
6. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಬಜೆ ಎಂಹೆಚ್‌ಎಸ್/1953/ದಿನಾಂಕ: 04/06–07–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1)ರ ಆದೇಶದಲ್ಲಿ ಮೆ: ದೇವರ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಓರಿಯಡ್ಕ ಗ್ರಾಮದ ಬಳಿ ಸ್ವರ್ಣ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಸದರಿ ಯೋಜನೆಯ ಸಾಮರ್ಥ್ಯವನ್ನು 2.00 ಮೆಗಾ ವ್ಯಾಟ್‌ನಿಂದ 3.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಸದರಿ ಯೋಜನೆಯ ಕಾಲಾವಕಾಶವನ್ನು ದಿನಾಂಕ: 11-02-2007 ರಿಂದ ಮುಂದಿನ 3 ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸದರಿ ಯೋಜನೆಯ ಸಾಮರ್ಥ್ಯವನ್ನು 3.00 ಮೆಗಾ ವ್ಯಾಟ್‌ನಿಂದ 3.8 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಸರ್ಕಾರಿ ಪತ್ರದಲ್ಲಿ ಸದರಿ ಯೋಜನೆಯ ಸ್ಥಳ ಪರಿವೀಕ್ಷಣೆ ಮಾಡಿ ವಾಸ್ತವಾಂಶಗಳನ್ನು ದೃಢಪಡಿಸಿಕೊಂಡು ವರದಿಯನ್ನು ನೀಡಲು ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕರನ್ನು ಕೋರಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಮೆ: ದೇವರ್ ಪವರ್ ಪ್ರೈವೇಟ್ ಲಿಮಿಟೆಡ್ ರವರು ಕಾಮಗಾರಿ ಪ್ರಗತಿಯನ್ನು ಸಾಧಿಸಿದ್ದು ಹಾಗೂ ಕಾಲಾವಕಾಶ ವಿಸ್ತರಣೆಗೆ ನಿಗದಿತ ಶುಲ್ಕವನ್ನು ಪಾವತಿಸಿದ್ದು, ಈ ಯೋಜನೆಯ ಕಾಲಾವಕಾಶವನ್ನು ಅಭಿವೃದ್ಧಿದಾರರು ಕೋರಿರುವಂತೆ ದಿನಾಂಕ 07-02-2011 ರಿಂದ 06-02-2012 ರವರೆಗೆ ವಿಸ್ತರಿಸಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ : ಇಎನ್ 300 ಎನ್‌ಸಿಇ 2011, ಬೆಂಗಳೂರು, ದಿನಾಂಕ : 29-07-2011.

ಮೆ: ದೇವರ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಹಿರಿಯಡ್ಕ ಗ್ರಾಮದ ಬಳಿ ಸ್ವರ್ಣ ನದಿಗೆ ಅಡ್ಡಲಾಗಿ ಹಂಚಿಕೆಯಾಗಿರುವ 3.8 ಮೆಗಾ ವ್ಯಾಟ್ ಸಾಮರ್ಥ್ಯದ ಬಜೆ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ದಿನಾಂಕ: 07-02-2011 ರಿಂದ ಮುಂದಿನ ಒಂದು ವರ್ಷದ ಅವಧಿಗೆ ವಿಸ್ತರಿಸಲಾಗಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್. 1979

ಇಂಧನ ಸಚಿವಾಲಯ

ವಿಷಯ : M/s Dheeru Power & Projects Private Limited ಇವರಿಗೆ 8.00 ಮೆಗಾ ವ್ಯಾಟ್ ಸಾಮರ್ಥ್ಯದ Bio-mass ಆಧಾರಿತ ವಿದ್ಯುತ್ ಸ್ಥಾವರ ಸ್ಥಾಪನೆಗೆ ನಿರಾಕ್ಷೇಪಣೆ ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಪತ್ರ ಸಂಖ್ಯೆ: ಡಿಇ 136 ಎನ್‌ಸಿಇ 2001 ದಿನಾಂಕ 04-10-2001.
2. ಸರ್ಕಾರಿ ಪತ್ರ ಸಂಖ್ಯೆ: ಡಿಇ 117 ಎನ್‌ಸಿಇ 2002 ದಿನಾಂಕ 04-06-2002
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/03/DP&PPL/2011/1220 ದಿನಾಂಕ: 25-04-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಪತ್ರದಲ್ಲಿ M/s Dheeru Power & Projects Private Limited ಇವರಿಗೆ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ನಿಟ್ಟೂರು ಗ್ರಾಮದಲ್ಲಿ 6.00 ಮೆಗಾ ವ್ಯಾಟ್ ಸಾಮರ್ಥ್ಯದ Bio-mass ಆಧಾರಿತ ವಿದ್ಯುತ್ ಸ್ಥಾವರ ಸ್ಥಾಪನೆಗೆ ನಿರಾಕ್ಷೇಪಣೆಯನ್ನು ನೀಡಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ M/s Dheeru Power & Projects Private Limited ಇವರಿಗೆ ಅನುಮತಿಸಲಾದ 6.00 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರ ಘಟಕವನ್ನು 8.00 ಮೆಗಾ ವ್ಯಾಟ್‌ಗೆ ಹೆಚ್ಚಿಸಿ ಸ್ಥಾವರದ ಸ್ಥಳವನ್ನು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ನಿಟ್ಟೂರು ಗ್ರಾಮದಿಂದ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಭೊಮ್ಮನಹಳ್ಳಿ ಗ್ರಾಮಕ್ಕೆ ಬದಲಾಯಿಸಿ ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ (3)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಪ್ರಧಾನ ವ್ಯವಸ್ಥಾಪಕರು M/s Dheeru Power & Projects Private Limited ಇವರ 8.00 ಮೆಗಾ ವ್ಯಾಟ್ ಸಾಮರ್ಥ್ಯದ Bio-mass ಆಧಾರಿತ ವಿದ್ಯುತ್ ಸ್ಥಾವರದ ಸ್ಥಳವನ್ನು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ನಿಟ್ಟೂರು ಗ್ರಾಮದಿಂದ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಮೀನ್‌ಪಲ್ಲಿ ಗ್ರಾಮಕ್ಕೆ ಬದಲಾಯಿಸಲು ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ : ಇಎನ್ 155 ಎನ್‌ಸಿಇ 2011, ಬೆಂಗಳೂರು, ದಿನಾಂಕ : 30-05-2011.

M/s Dheeru Power & Projects Private Limited ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಭೊಮ್ಮನಹಳ್ಳಿ ಗ್ರಾಮದಲ್ಲಿ ಅನುಮತಿಸಲಾದ 8.00 ಮೆಗಾ ವ್ಯಾಟ್ ಸಾಮರ್ಥ್ಯದ Bio-mass ಆಧಾರಿತ ವಿದ್ಯುತ್ ಸ್ಥಾವರ ಸ್ಥಾಪಿಸಲು ಸ್ಥಳವನ್ನು ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಮೀನ್‌ಪಲ್ಲಿ ಗ್ರಾಮಕ್ಕೆ ಬದಲಾಯಿಸಲು ಈ ಕೆಳಗಿನ ಷರತ್ತಿಗೊಳಪಟ್ಟು ನಿರಾಕ್ಷೇಪಣೆಯನ್ನು ನೀಡಲಾಗಿದೆ.

a. The company shall obtain separate clearance from Karnataka Power Transmission Corporation Limited in respect of evacuation of power.

b. The company shall enter into wheeling and Banking agreement with Gulbarga Electricity Supply Company Limited (GESCOM) in case of selling power to third party and power purchase agreement in case of selling power to GESCOM.

c. The company shall obtain necessary statutory clearance wherever required from the respective Departments/ Organizations such as Forest Department, Revenue Department, Karnataka State Pollution Control Board, etc. for the Power plant.

d. The Detailed Project Report (D.P.R.) for the power plant shall be got approved by Karnataka Renewable Energy Development Limited, before the commencement of the power plant.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್. 1980

ಇಂಧನ ಸಚಿವಾಲಯ

ವಿಷಯ : ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 6.05 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಡಿಇ 26 ಎನ್.ಸಿ.ಇ. 1999 ದಿನಾಂಕ: 13-05-1999.
2) ಸರ್ಕಾರದ ಆದೇಶ ಸಂಖ್ಯೆ: ಇಎನ್ 259 ಎನ್‌ಸಿಇ 2004 ದಿನಾಂಕ: 18-03-2005.
3) ಸರ್ಕಾರದ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2008 ದಿನಾಂಕ: 20-06-2009.
4) ಸರ್ಕಾರದ ಆದೇಶ ಸಂಖ್ಯೆ: ಇಎನ್ 448 ಎನ್‌ಸಿಇ 2004 ದಿನಾಂಕ: 04-03-2011.
5) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/AMTL/2011/1114 ದಿನಾಂಕ: 06/11-04-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ಅರಸಿನಗುಂಡಿ ಗಾಳಿವಲಯ ಪ್ರದೇಶದ ತುರುವನೂರು (4 ಮೆ.ವ್ಯಾ) ಮತ್ತು ಮದನಾಯಕನಹಳ್ಳಿ (7.2 ಮೆ.ವ್ಯಾ) ಗ್ರಾಮಗಳಲ್ಲಿ ಒಟ್ಟು 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮಂಜೂರು ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಅರಸಿನಗುಂಡಿ ಗಾಳಿ ವಲಯ ಪ್ರದೇಶಗಳಲ್ಲಿ ಹಂಚಿಕೆ ಮಾಡಲಾಗಿರುವ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 17.25 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ರವರಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆ ಮಾಡಲಾಗಿದ್ದ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ರದ್ದುಪಡಿಸಲಾಗಿತ್ತು. ಈ ಆದೇಶದಲ್ಲಿ 17.25 ಮೆ.ವ್ಯಾ. ಸಾಮರ್ಥ್ಯದ ಬದಲಿಗೆ 11.2 ಮೆ.ವ್ಯಾ ಎಂದು ನಮೂದಿತವಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಮದನಾಯಕನಹಳ್ಳಿ ಗ್ರಾಮಗಳಲ್ಲಿ ಹಂಚಿಕೆ ಮಾಡಲಾಗಿದ್ದ 11.2 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆದು ಯೋಜನೆಯ ಅನುಷ್ಠಾನಕ್ಕಾಗಿ ಕೊನೆಯ ಅವಕಾಶವಾಗಿ ಕಾಲಾವಕಾಶವನ್ನು ದಿನಾಂಕ 31.12.2011 ರವರೆಗೆ ವಿಸ್ತರಿಸಲಾಗಿತ್ತು.

ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ರವರಿಗೆ ಹಂಚಿಕೆಯಾಗಿದ್ದ ಪವನ ವಿದ್ಯತ್ ಯೋಜನೆಯ ಸಾಮರ್ಥ್ಯವನ್ನು 11.2 ಮೆ.ವ್ಯಾ. ನಿಂದ 17.25 ಮೆ.ವ್ಯಾಗೆ ಹೆಚ್ಚಿಸಿದ್ದು, ಈ ಹೆಚ್ಚುವರಿ ಸಾಮರ್ಥ್ಯಕ್ಕೂ ದಿನಾಂಕ 31.12.2011 ರವರೆಗೆ ಕಾಲಾವಕಾಶವನ್ನು ದಿನಾಂಕ 04-03-2011ರ ನಿಬಂಧನೆಯಂತೆ ವಿಸ್ತರಿಸುವಂತೆ ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ : ಇಎನ್ 448 ಎನ್‌ಸಿಇ 2008, ಬೆಂಗಳೂರು, ದಿನಾಂಕ : 02-08-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೆ: ಅರುಲ್ ಮರಿಯಮ್ಮನ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ತುರುವನೂರು ಮತ್ತು ಅರಸಿನಗುಂಡಿ ವಲಯ ಪ್ರದೇಶಗಳಲ್ಲಿ ಹಂಚಿಕೆಯಾಗಿರುವ 6.05 ಮೆ.ವ್ಯಾ. ಹೆಚ್ಚುವರಿ ಸಾಮರ್ಥ್ಯ (17.25-11.2= 6.05 ಮೆ.ವ್ಯಾ) ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೂ ಕಾಲಾವಕಾಶವನ್ನು ದಿನಾಂಕ 31.12.2011 ರವರೆಗೆ ವಿಸ್ತರಿಸಲಾಗಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (4)ರಲ್ಲಿ ಓದಲಾದ ಸರ್ಕಾರಿ ಆದೇಶ ಸಂಖ್ಯೆ ಇಎನ್ 448 ಎನ್‌ಸಿಇ 2008 ದಿನಾಂಕ 04-03-2011ರ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್. 1981

ಇಂಧನ ಸಚಿವಾಲಯ

ವಿಷಯ : ಮೆ: ಶಾರದಾ ಶುಗರ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ 12 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನಾ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆ ನೀಡುವ ಬಗ್ಗೆ.

ಓದಲಾಗಿದೆ : ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/04/ಎಸ್.ಎಸ್.ಪಿಎಲ್/2010/1513 ದಿನಾಂಕ: 28/30-05-2011.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಕೋರಿಕೆ ಮೇರೆಗೆ ಮೆ: ಶಾರದಾ ಶುಗರ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ, ಕೊಡಗನೂರು ಗ್ರಾಮದಲ್ಲಿ 12 ಮೆ.ವ್ಯಾ. (gross) ಮತ್ತು 8.00 ಮೆ.ವ್ಯಾ. (exportable) ಸಾಮರ್ಥ್ಯದ ಸಹ ವಿದ್ಯುತ್ ಯೋಜನಾ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ : ಇಎನ್ 242 ಎನ್‌ಸಿಇ 2011, ಬೆಂಗಳೂರು, ದಿನಾಂಕ : 02-08-2011.

ಮೆ: ಶಾರದಾ ಶುಗರ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ, ಕೊಡಗನೂರು ಗ್ರಾಮದಲ್ಲಿ 12 ಮೆ.ವ್ಯಾ. (gross) ಮತ್ತು 8.00 ಮೆ.ವ್ಯಾ. (exportable) ಸಾಮರ್ಥ್ಯದ ಸಹ ವಿದ್ಯುತ್ ಯೋಜನಾ ಘಟಕವನ್ನು ಸ್ಥಾಪಿಸಲು ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ನಿರಾಕ್ಷೇಪಣೆಯನ್ನು ನೀಡಲಾಗಿದೆ.

1. The company shall obtain separate clearance from Karnataka Power Transmission Corporation Limited in repect of evacuation of power.
2. The company shall enter into wheeling and banking agreement with Karnataka Power Transmission Corporation Limited in case of selling power to third party and power purchase agreement in case of selling power to Karnataka Power Transmission Corporation Limited.
3. The company shall obtain necessary statutory clearance wherever required from the respective Departments/ Organizations such as Forest Department, Revenue Department, and Karnataka State Pollution Control Board, etc. for both the Sugar Mill and the Power plant.
4. The Detailed Project Report (D.P.R.) for the power plant shall be got approved by Karnataka Renewable Energy Development Limited, before the commencement of the power plant.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್. 1982

ಕಂದಾಯ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ಕೇಂದ್ರದಲ್ಲಿ ಮಿನಿ ವಿಧಾನಸೌಧ ಕಟ್ಟಡದ ಕಾಮಗಾರಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ ಕಂಇ 70 ಡಬ್ಲ್ಯೂಬಿಆರ್ 2007, ದಿನಾಂಕ 07/05/2007.
2) ಸರ್ಕಾರದ ಪತ್ರ ಸಂಖ್ಯೆ ಕಂಇ 21 ಡಬ್ಲ್ಯೂಬಿಆರ್ 2010, ದಿನಾಂಕ 03/09/2010.
3) ಸರ್ಕಾರದ ಪತ್ರ ಸಂಖ್ಯೆ ಕಂಇ 21 ಡಬ್ಲ್ಯೂಬಿಆರ್ 2010, ದಿನಾಂಕ 23/03/2011.
4) ಪತ್ರ ಸಂಖ್ಯೆ ಎಡಿಎಂ/1/ಸಿಆರ್-62/2005-06, ದಿನಾಂಕ 24/03/2011
5) ಪತ್ರ ಸಂಖ್ಯೆ ಕಗ್ರಮಂ/ಮು.ಅ/ಮಿ.ವಿ.ಸೌ/ಜಮಖಂಡಿ/2011-12/495, ದಿನಾಂಕ 06/07/2011.

ಪ್ರಸ್ತಾವನೆ :

ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕು ಕೇಂದ್ರ ಮತ್ತು ಇತರ 12 ತಾಲ್ಲೂಕು ಕೇಂದ್ರಗಳಲ್ಲಿ ತಲಾ ರೂ. 200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಮಿನಿ ವಿಧಾನಸೌಧ ಕಟ್ಟಡವನ್ನು ನಿರ್ಮಾಣ ಮಾಡಲು ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮಂಜೂರಾತಿಯನ್ನು ನೀಡುವುದರೊಂದಿಗೆ ಅನುದಾನವನ್ನು ಒದಗಿಸಲಾಗಿತ್ತು.

ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ಕೇಂದ್ರದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಸೂಕ್ತ ನಿವೇಶನವು ಲಭ್ಯವಾಗದ ಕಾರಣ ಈ ಮಿನಿ ವಿಧಾನಸೌಧ ಕಟ್ಟಡ ಕಾಮಗಾರಿಗೆ ಒದಗಿಸಿದ್ದ ಅನುದಾನವನ್ನು ಬಾಗಲಕೋಟೆ ಜಿಲ್ಲೆ, ಮುಧೋಳ್ ತಾಲ್ಲೂಕು ಕೇಂದ್ರಕ್ಕೆ ವರ್ಗಾಯಿಸಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ ಮಾಡಲು ಮೇಲೆ (2)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಅನುಮತಿಯನ್ನು ನೀಡಲಾಗಿತ್ತು.

ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ಕೇಂದ್ರದಲ್ಲಿ ರೂ. 451.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಮಿನಿ ವಿಧಾನಸೌಧ ಕಟ್ಟಡವನ್ನು ನಿರ್ಮಾಣ ಮಾಡಲು ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮಂಜೂರಾತಿ ನೀಡಲಾಗಿತ್ತು.

ಜಿಲ್ಲಾಧಿಕಾರಿಗಳು ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ಕೇಂದ್ರದಲ್ಲಿ ಮಿನಿ ವಿಧಾನ ಸೌಧ ಕಟ್ಟಡವನ್ನು ರೂ. 451.00 ಲಕ್ಷಗಳಲ್ಲಿ ನಿರ್ವಹಿಸಲು ಮತ್ತು ಈ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಿ ಕೊಡುವಂತೆ ಹಾಗೂ ಅನುದಾನ ಬಿಡುಗಡೆ ಮಾಡುವಂತೆ ಮೇಲೆ (4)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರುರವರು ಜಮಖಂಡಿ ತಾಲ್ಲೂಕು ಕೇಂದ್ರದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಮಿನಿ ವಿಧಾನಸೌಧ ಕಟ್ಟಡ ಕಾಮಗಾರಿಯ ರೂ. 4.50 ಕೋಟಿಗಳ ರೇಖಾ ಅಂದಾಜನ್ನು ಕಳುಹಿಸುತ್ತಾ ಕರ್ನಾಟಕ ಗೃಹ ಮಂಡಳಿ ವತಿಯಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಹಾಗೂ ಯೋಜನಾ ಮೊತ್ತದ 1/3 ಭಾಗದಷ್ಟು ಅನುದಾನ ರೂ. 1.50 ಕೋಟಿಗಳನ್ನು ಬಿಡುಗಡೆ ಮಾಡುವಂತೆ ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ಎಲ್ಲಾ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ಜಮಖಂಡಿ ತಾಲ್ಲೂಕು ಕೇಂದ್ರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮಿನಿ ವಿಧಾನಸೌಧ ಕಟ್ಟಡ ಕಾಮಗಾರಿಯ ರೂ. 451.00 ಲಕ್ಷಗಳ ಅಂದಾಜು ಮೊತ್ತಕ್ಕೆ ಸವಿವರ ಅಂದಾಜುಪಟ್ಟಿ ಮತ್ತು ನಕ್ಷೆಯನ್ನು ಸರ್ಕಾರಕ್ಕೆ ಒದಗಿಸುವ ಷರತ್ತಿಗೊಳಪಟ್ಟು ರೇಖಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 21 ಡಬ್ಲ್ಯೂಬಿಆರ್ 2010, ಬೆಂಗಳೂರು, ದಿನಾಂಕ : 04-08-2011

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕು ಕೇಂದ್ರದಲ್ಲಿ ನಿರ್ಮಿಸುವ ಮಿನಿ ವಿಧಾನಸೌಧ ಕಟ್ಟಡದ ರೂ. 451.00 ಲಕ್ಷ (ರೂಪಾಯಿ ನಾಲ್ಕುನೂರ ಐವತ್ತೊಂದು ಲಕ್ಷಗಳು ಮಾತ್ರ) ಗಳ ರೇಖಾ ಅಂದಾಜಿಗೆ ಸವಿವರ ಕಾಮಗಾರಿ ಅಂದಾಜುಪಟ್ಟಿ ಮತ್ತು ನಕ್ಷೆಯನ್ನು ಸಲ್ಲಿಸುವ ಷರತ್ತಿಗೊಳಪಟ್ಟು, ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಈ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಲು ಆದೇಶಿಸಿದೆ.

ಇದಕ್ಕೆ ತಗಲುವ ವೆಚ್ಚವನ್ನು 2011-12ನೇ ಸಾಲಿನ "4059-80-051-0-30-386 (ಯೋಜನೆ)" ಲೆಕ್ಕಶೀರ್ಷಿಕೆ ಅಡಿಯಲ್ಲಿ ಭರಿಸತಕ್ಕದ್ದು.

ಸಕ್ಷಮ ಪ್ರಾಧಿಕಾರವು ಸದರಿ ಕಟ್ಟಡ ಕಾಮಗಾರಿಯ ಗುಣಮಟ್ಟ ಕಾಯ್ದುಕೊಳ್ಳುವಿಕೆಯನ್ನು ಕಾಲಕಾಲಕ್ಕೆ ಖಾತರಿ ಪಡಿಸಿಕೊಳ್ಳತಕ್ಕದ್ದು.

ಈ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು 2000 ಪ್ರಕಾರ ಮಾಡತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು ಯುವಜನ ಸೇವಾ ಹಾಗೂ ಕಂದಾಯ ಇಲಾಖೆ ರವರ ಅನಧಿಕೃತ ಟಿಪ್ಪಣಿ ಸಂಖ್ಯೆ ಕಂಇ 36550 ಐಎಫ್ಎ 2011, ದಿನಾಂಕ 26/07/2011 ರ ಸಹಮತಿ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಆಇ 1 ಟಿಎಫ್‌ಪಿ 2008, ದಿನಾಂಕ 16/05/2008ರ ಪ್ರತ್ಯಾಯೋಜಿತ ಅಧಿಕಾರಗಳೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ವಿ.ಶ್ರೀರಾಮರೆಡ್ಡಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಸುಧಾರಣೆ ಕೋಶ)

ಪಿ. ಆರ್. 1983

ಒಳಾಡಳಿತ ಸಚಿವಾಲಯ

ವಿಷಯ : ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಅಧಿಕಾರಿಗಳ ಹಾಗೂ ಸಿಬ್ಬಂದಿ ವರ್ಗದ ತಾತ್ಕಾಲಿಕ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂ: ಒಇ 35 ಪಿಪಿಇ 2010, ದಿನಾಂಕ: 21/06/2010.
2. ಸರ್ಕಾರದ ಆದೇಶ ಸಂ: ಒಇ 194 ಪಿಪಿಇ 2009, ದಿನಾಂಕ: 23/08/2010.
3. ಸರ್ಕಾರದ ಆದೇಶ ಸಂ: ಒಇ 454 ಪಿಪಿಇ 2009, ದಿನಾಂಕ: 08/09/2010.
4. ಸರ್ಕಾರದ ಆದೇಶ ಸಂ: ಒಇ 168 ಪಿಪಿಇ 2010, ದಿನಾಂಕ: 23/09/2010.
5. ಸರ್ಕಾರದ ಆದೇಶ ಸಂ: ಒಇ 203 ಪಿಪಿಇ 2009, ದಿನಾಂಕ: 03/10/2010.
6. ಸರ್ಕಾರದ ಆದೇಶ ಸಂ: ಒಇ 237 ಪಿಪಿಇ 2010, ದಿನಾಂಕ: 05/10/2010.
7. ಸರ್ಕಾರದ ಆದೇಶ ಸಂ: ಒಇ 164 ಪಿಪಿಇ 2010, ದಿನಾಂಕ: 21/10/2010.
8. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂಖ್ಯೆ: ಡಿಪಿಎನ್/ಸಿಶಾ-1/181/2010-11, ದಿನಾಂಕ: 08/12/2010 ಮತ್ತು 08/04/2011.
9. ಸರ್ಕಾರದ ಆದೇಶ ಸಂ: ಲಾ 63 ಎಲ್‌ಸಿಇ 2011, ದಿನಾಂಕ: 29/03/2011

ಪ್ರಸ್ತಾವನೆ :

ಮೇಲೆ (8)ರಲ್ಲಿ ಓದಲಾದ ನಿರ್ದೇಶಕರು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ದಿನಾಂಕ: 08/12/2010 ಮತ್ತು 08/04/2011ರ ಪತ್ರದಲ್ಲಿ, ಮೇಲೆ (1) ಓದಲಾದ ಸರ್ಕಾರದ ಆದೇಶದನ್ವಯ ಮುಂದುವರೆಸಲಾದ 744 ತಾತ್ಕಾಲಿಕ ಹುದ್ದೆಗಳ ಮತ್ತು ಮೇಲೆ (6)ರಲ್ಲಿ ಓದಲಾದ ಸರ್ಕಾರಿ ಆದೇಶಗಳನ್ವಯ ಮುಂದುವರೆಸಲಾದ 89 ಹುದ್ದೆಗಳ ಕಾರ್ಯಾವಧಿಯು ದಿನಾಂಕ: 31/03/2011ಕ್ಕೆ ಅಂತ್ಯಗೊಳ್ಳುತ್ತವೆ. ಇವುಗಳನ್ನು ದಿನಾಂಕ: 01/04/2011 ರಿಂದ ಹಾಗೂ ಮೇಲೆ (2), (3), (4), (5) ಮತ್ತು (7)ರಲ್ಲಿ ಓದಲಾದ ಸರ್ಕಾರಿ ಆದೇಶಗಳನ್ವಯ ಹೊಸದಾಗಿ ಮೊದಲ ಬಾರಿಗೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜನೆಯಾದ ಹುದ್ದೆಗಳ ಕಾರ್ಯಾವಧಿಯು ಅಂತ್ಯಗೊಳ್ಳುವ ದಿನಾಂಕದಿಂದ ಮುಂದುವರೆಸಬೇಕಾಗಿರುತ್ತದೆ. ಸದರಿ ತಾತ್ಕಾಲಿಕ ಹುದ್ದೆಗಳ ಸಂಬಂಧಪಟ್ಟ ನ್ಯಾಯಾಲಯಗಳ / ಕಛೇರಿಗಳ ಕಾರ್ಯಾವಧಿಯು ಅನಿರ್ದಿಷ್ಟ ಅವಧಿಯವರೆಗೆ ಮುಂದುವರೆದಿರುವುದರಿಂದ ಹಾಗೂ ಇವುಗಳನ್ನು ಸದ್ಯದಲ್ಲಿ ರದ್ದು ಮಾಡುವ ಸಂದರ್ಭ ಇಲ್ಲದೆ ಇರುವುದರಿಂದ ಸದರಿ ಹುದ್ದೆಗಳನ್ನು ಮುಂದುವರೆಸುವುದು ಅವಶ್ಯವಾಗಿರುತ್ತದೆ. ಅಲ್ಲದೆ, (9)ರಲ್ಲಿ ಓದಲಾದ ದಿನಾಂಕ: 29/03/2011ರ ಸರ್ಕಾರದ ಆದೇಶದಲ್ಲಿ ಕೇಂದ್ರ ಸರ್ಕಾರದ ಸಹಾಯದ 93 ಶೀಘ್ರಗತಿ ನ್ಯಾಯಾಲಯಗಳ ಕಾರ್ಯಾವಧಿಯನ್ನು ದಿನಾಂಕ: 01/04/2011 ರಿಂದ 31/03/2012ರವರೆಗೆ ಮುಂದುವರೆ

